ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಸಂಪುಟ 5 ಸಂಚಿಕೆ 9

ಮಾರ್ಚ್ 6, 2011

ಕನ್ನಡ ವಾರಪತ್ರಿಕೆ

ರೂ. 5/-

ಪುಟ 16

Blog :janashakthi.wordpress.com

e-mail : js_weekly@yahoo.com



- ಕೃಷಿ ಕೂಲಿಕಾರರು ಲೆಕ್ಕಕ್ಕೇ ಇಲ್ಲ
- ರೈತರ ಭೂಮಿ ಕಸಿಯಲು ಭೂಮಾಫಿಯಾ, ಕಂಪನಿಗಳಿಗೆ ಆಹ್ವಾನ
- ಸಂಘ ಪರಿವಾರಕ್ಕೆ ಸರ್ಕಾರಿ ಹಣ ಹರಿಸುವ ಸಂಚು

ಜನತೆಯ ಹೃದಯಕ್ಕೆ ಇರಿದ ಬಜೆಟ್



ಬೃಹತ್ ಪಾರ್ಲಿಮೆಂಟ್ ಚಲೋ

ಸಂಸತ್ತಿನತ್ತ ನಿಜ ಭಾರತದ ನಡಿಗೆ

ದುಡಿಯುವ ಜನರ ಎಚ್ಚರಿಕೆ





ಸುಂಕರಹಿತ

ರೇಷ್ಮೆ ಆಮದು ನಿಲ್ಲಲಿ

ಮನೆ ನಿವೇಶನಕ್ಕಾಗಿ

ಮಂಗಳೂರು ಮಹಾನಗರ ಪಾಲಿಕೆ ಮುತ್ತಿಗೆ


ನೂತನ ಕಾರ್ಯಾಲಯವನ್ನು ಸಜ್ಜುಗೊಳಿಸಲು

ಜನಶಕ್ತಿಯೊಂದಿಗೆ ಕೈ ಜೋಡಿಸಿ....

'ಜನಶಕ್ತಿ ಕನ್ನಡ ವಾರಪತ್ರಿಕೆ'ಯ ಓದುಗರು ಮತ್ತು ಹಿತೈಷಿಗಳಲ್ಲಿ ಒಂದು ವಿನಮ್ರ ಮನವಿ ಇದು. ಕರ್ನಾಟಕದ ಜನಪರ ಚಳುವಳಿಯ ಮುಖಂಡರು ಕಾರ್ಯ ಕರ್ತರು, ಹಿತೈಷಿಗಳಿಗೆ 'ಜನಶಕ್ತಿ'ಯ ಕುರಿತು ಬಹಳಷ್ಟೇನು ವಿವರಿಸ ಬೇಕಾದ ಅಗತ್ಯವಿಲ್ಲ.

ಮುಖ್ಯವಾಹಿನಿಯ ಬಹಳಷ್ಟು ಪತ್ರಿಕೆಗಳು, ದೂರದರ್ಶನ ಚಾನಲ್ಲುಗಳು ಮನುಷ್ಯತ್ವವನ್ನು ಮರೆತು ಹಣವಂತ ವರ್ಗದ ಬೆನ್ನು ಬಿದ್ದಿವೆ. ಜಾಗತೀಕರಣ ಯುಗದ ಇಂದಿನ ಮಾಯಾ ಬಜಾರಿನಲ್ಲಿ 'ಬಂಡವಾಳ' ಎಂಬ ಈ ನೆಲದ ರಸ ಹೀರುವ ದೈತ್ಯ ವೃಕ್ಷದ ಕೊಂಬೆಯ ಮೇಲೆ ಹುಟ್ಟಿಕೊಂಡಿರುವ ಬಂದಳಿಕೆ ಗಳಂತಾಗಿರುವ ಇವು ಕುರುಡು ಕಾಂಚಣದ ಮೋಹಪಾಶಕ್ಕೆ ಸಿಲುಕಿವೆ. ಈ ಪತ್ರಿಕೆ ಚಾನಲ್ಲುಗಳಿಗೆ, ಕೊಲೆಪಾತಕ ಮನಸುಗಳ ಸೃಷ್ಟಿಯ ಕಾರ್ಯಾಗಾರದಂತಾಗಿರುವ, ಹಾಗೂ ಭ್ರಮೆ, ಹುಸಿ ಕನಸುಗಳ ಮಾರಾಟವೇ ಗುರಿಯಾಗಿರುವ ಸಿನಿಮಾ ಕ್ಷೇತ್ರದ ನಾಯಕ ನಾಯಕಿಯರ ಬಿಂಕ ಬಿನ್ನಾಣಗಳು ಆದ್ಯತೆಯಾಗಿವೆ. ಬಿಲಿಯನ್, ಟ್ರಿಲಿಯನ್ ಡಾಲರುಗಳ ಮಾಲಿಕರ ಜೂಜುಕಟ್ಟೆಗಳಲ್ಲಿ ಹರಾಜಿಗೆ ನಿಂತು ಕೋಟಿ ಕೋಟಿಗಳಿಗೆ ಬಿಕರಿಯಾಗುತ್ತಿರುವ ಕ್ರಿಕೆಟ್ ಆಟಗಾರರ ಆಟವೆಂಬ ವ್ಯಾಪಾರ, ಮೋಜುಗಳು ಮುಖ್ಯವಾಗಿವೆ. ಕೊಳೆತು ನಾರುವ ಹಳಸಲು ಸರಕು ಸಂಸ್ಕೃತಿಯನ್ನು ಸಾರುವ ಬಡಕಲು ದೇಹದ 'ವಿಶ್ವ ಸುಂದರಿ'ಯವರ ವೈಯಾರಗಳು, ಫ್ಯಾಷನ್ ಶೋ ಥಳುಕು ಬಳುಕುಗಳೇ ಎಲ್ಲಕ್ಕಿಂತ ದೊಡ್ಡವಾಗಿವೆ. ಭಾರತದ ಎಷ್ಟು ಜನ ವಿಶ್ವದ ಹತ್ತು ಭಾರಿ ಶ್ರೀಮಂತರ ಪಟ್ಟಿಯಲ್ಲಿ ಸ್ಥಾನ ಪಡೆದರು ಎಂಬುದು ಸಂಭ್ರಮದ ಸುದ್ದಿಯಾಗಿದೆ. ಬಂಡವಾಳಿಗರ ಬಂಡವಾಳವನ್ನು ಬೆಳೆಸಲು ದುಡಿದು ದುಡಿದು ಬೆಂಡಾಗುತ್ತಿರುವ ಕಾರ್ಮಿಕರ, ದುಡಿಮೆಗಾರರ ಬದುಕಿನ ಸಂಕಟಗಳು ನಿಟ್ಟುಸಿರುಗಳಿಗೆ ಇಲ್ಲಿ ಬಹುತೇಕ ಜಾಗವೇ ಇಲ್ಲವಾಗಿದೆ. ಆಳುವ ವರ್ಗದ ಸುಲಿಗೆಕೋರ ಇಕ್ಕಳದಲ್ಲಿ ಸಿಲುಕಿ ಬಸವಳಿದ ಕೂಲಿಕಾರರು, ಬಡ ರೈತರ ಬದುಕಿನ ನಾನಾ ಮುಖಗಳನ್ನು ತೆರೆದು ತೋರಿಸುವುದನ್ನು ಈ ಉಳ್ಳವರ ಮಾಧ್ಯಮಗಳಲ್ಲಿ ನಿರೀಕ್ಷಿಸಲು ಸಾಧ್ಯವೇ ಇಲ್ಲ ಎಂಬಂತಾಗಿದೆ.

ಹಿಮಾಲಯ ಸದೃಶ್ಯವಾಗಿ ಹಬ್ಬಿರುವ ಆಳುವ ವರ್ಗಗಳ ವೈವಿಧ್ಯಮಯ ಶೋಷಣೆಯ ಸ್ವರೂಪವನ್ನು ಹಾಗೂ ಅದರ ಅಗಾಧತೆಯನ್ನು ಅಳಿದು ಪುಟ



ಪುಟಗಳಲ್ಲಿ ಅನಾವರಣಗೊಳಿಸ ಬೇಕು, ದುಡಿಯುವ ವರ್ಗದ ದಿಟ್ಟ ವರ್ಗ ಸಂಘರ್ಷ, ಹೋರಾಟಗಳನ್ನು ಪ್ರತಿಧ್ವನಿಸುವ, ಪ್ರತಿಬಿಂಬಿಸುವ ದುಡಿಯುವ ವರ್ಗದ ಕೈಗನ್ನಡಿಯಾಗ ಬೇಕು ಎಂಬ ಬಯಕೆ ಪತ್ರಿಕೆಯದು. ಜಾಗತೀಕರಣ, ಉದಾರೀಕರಣಗಳು ಹುಟ್ಟು ಹಾಕಿರುವ ಭೀಕರ ಬಿರುಗಾಳಿಗೆ ಸಿಲುಕಿ ತಮ್ಮ ಅಮೂಲ್ಯ ಬದುಕನ್ನೆ ಕೊನೆಗಾಣಿಸಿಕೊಳ್ಳುತ್ತಿರುವ ರೈತಾಪಿ ವರ್ಗದ ದು:ಖ ದುಮ್ಮಾನಗಳಿಗೆ ದನಿಯಾಗುವ ಆಶಯ ಜನಶಕ್ತಿಯದು. ಅಸ್ಪೃಶ್ಯತೆ, ಜಾತಿ ದೌರ್ಜನ್ಯಗಳ ಹಾಗೂ ಸಾಮಾಜಿಕ ಅಸಮಾನತೆಯೆಂಬ ಅಪಮಾನಕ್ಕೆ ತುತ್ತಾದ ಅವಕಾಶ ವಂಚಿತ ದಲಿತರು, ಮಹಿಳೆಯರ ಹೋರಾಟದ ಧಿಮಂತ ಕತನಗಳಿಗೆ ಮುನ್ನುಡಿಯಾಗುವ ಆಕಾಂಕ್ಷೆ ಜನಶಕ್ತಿಯದು.

ಈಗ ಇರುವ ಅತ್ಯಂತ ಸೀಮಿತವಾದ ಮಾನವ ಸಂಪನ್ಮೂಲ ಹಾಗೂ ಆರ್ಥಿಕ ಸಂಪನ್ಮೂಲಗಳೊಂದಿಗೆ ತನಗೆ ಸಾಧ್ಯವಾದ ಮಟ್ಟಿಗೆ ಈ ಆಶಯಗಳಿಗಾಗಿ ಜನ ಶಕ್ತಿಯು ಕೆಲಸ ಮಾಡುತ್ತಿದೆ. ಆದರೆ ಈಗಿನ ಕೆಲಸ ಏನೇನು ಸಾಲದು ಎಂಬ ವಸ್ತುನಿಷ್ಠ ತಿಳುವಳಿಕೆ ಪತ್ರಿಕೆಯದು. ಮಾಡಬೇಕಾದ ಕೆಲಸ ಅಗಾಧವಾಗಿದೆ.

ಈ ನಿಟ್ಟಿನಲ್ಲಿ ಈಗ ಕೆಲಸವನ್ನು ಆರಂಭಿಸಲೇ ಬೇಕಿದೆ.

ತಮಗೆಲ್ಲಾ ಈಗಾಗಲೇ ತಿಳಿದಿದೆ. ಜನಶಕ್ತಿಯು ಬೆಂಗಳೂರಿನ ಮಹಾಲಕ್ಷ್ಮಿ ಬಡಾವಣೆಯ ಇಎಂಎಸ್ ಭವನ ಎಂಬ ನೂತನ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ನೂತನವಾದ ಕಟ್ಟಡದ ಕಾರ್ಯಾಲಯವನ್ನು ಪತ್ರಿಕೆಯ ಇಂದಿನ ಅಗತ್ಯಗಳಿಗೆ ಅವಶ್ಯಕವಾದ ಸಾಧನ, ಸಾಮಾಗ್ರಿಗಳು, ಉಪಕರಣಗಳು ಹಾಗೂ ಮಾನವ ಸಂಪನ್ಮೂಲಗಳೊಂದಿಗೆ ಸಜ್ಜುಗೊಳಿಸ ಬೇಕಿದೆ. ಇದಾಗದೇ ಮೇಲೆ ಹೇಳಲಾದ ಯಾವ ಆಶಯವು ಈಡೇರುವುದು ಸಾಧ್ಯವಿಲ್ಲ.

ಜನಶಕ್ತಿಯ ಕನಿಷ್ಠ ಅಗತ್ಯಗಳನ್ನು ಹೊಂದಿರುವ ವ್ಯವಸ್ಥಿತ, ಸುಸಜ್ಜಿತ, ಸ್ವತಂತ್ರ ಕಾರ್ಯಾಲಯವನ್ನು ರೂಪಿಸುವ ಪ್ರಶ್ನೆಯು ನೇರವಾಗಿ ಹಣಕಾಸಿಗೆ ಸಂಬಂಧಿಸಿದ್ದಾಗಿದೆ.

ಬಂಡವಾಳಶಾಹಿ ಪತ್ರಿಕೆ, ಮಾಧ್ಯಮಗಳಂತೆ ಅತಿರಂಜಿತ ಸುಳ್ಳುಗಳು, ಅರ್ಧ ಸತ್ಯಗಳು, ಅಶ್ಲೀಲತೆ, ವಿಕೃತ ಕ್ರೈಮ್ ವರದಿಗಳು, ನೀತಿಗೆಟ್ಟ ಗಾಳಿಸುದ್ದಿ, ಗಾಸಿಪ್ಪುಗಳ ಬೆನ್ನು ಹತ್ತದ ಜನಶಕ್ತಿಯಂತಹ ಪತ್ರಿಕೆಗೆ ಜನಪರ ಚಳುವಳಿಯ ಆಶ್ರಯ, ಆಸರೆಯಲ್ಲದೇ ಬೇರೇನು ತಾನೇ ಇರಲು ಸಾಧ್ಯ.

ಈಗ ತುರ್ತಾಗಿ ಜನಶಕ್ತಿ ಕಾರ್ಯಾಲಯದ ಪೀಠೋಪಕರಣ ವ್ಯವಸ್ಥೆ ಆಗಲೇಬೇಕಾದ ಕೆಲಸವಾಗಿದೆ. ಈ ಪೀಠೋಪಕರಣಗಳಿಗೆ ಸುಮಾರು 1.00 ಲಕ್ಷ ರೂಗಳು ವೆಚ್ಚವಾಗಬಹುದೆಂದು ಅಂದಾಜು ಮಾಡಲಾಗಿದೆ. ಜನಶಕ್ತಿಯ ಓದುಗರು, ಹಿತೈಷಿಗಳು, ಅಭಿಮಾನಿಗಳು, ವಿವಿಧ ಜನಪರ ಸಂಘಟನೆಗಳ ಮುಖಂಡರುಗಳು, ಕಾರ್ಯಕರ್ತರು, ಸಂಘ-ಸಂಸ್ಥೆಗಳು ಈ ನಿಟ್ಟಿನಲ್ಲಿ ಕೈಜೋಡಿಸ ಬೇಕೆಂದು, ಉದಾರವಾದ ಹಣಕಾಸಿನ ಅಥವಾ ವ ರೂಪದ ಕಾಣಿಕೆಗಳ ಮೂಲಕ ನೆರವಾಗಬೇಕೆಂದು ತಮ್ಮಲ್ಲಿ ಈ ಮೂಲಕ ವಿನಂತಿಸುತ್ತಿದ್ದೇವೆ.

ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸುತ್ತೀರೆಂ ಆಶಯ ನಮ್ಮದು.

ವಂದನೆಗಳೊಂದಿಗೆ

ಎಸ್. ವೈ. ಗುರುಶಾಂತ
ಸಂಪಾದಕರು

ವಿಶೇಷ ಸೂಚನೆಗಳು

ಕೊಡುಗೆದಾರರ ಹೆಸರು ಮತ್ತು ಕೊಡುಗೆಯ ವಿವರಗಳನ್ನು ಜನಶಕ್ತಿಯಲ್ಲಿ ಪ್ರಕಟಿಸಲಾಗುವುದು.

ತಾವು ತಮ್ಮ ತಮ್ಮ ಊರುಗಳಿಂದಲೇ ನೇರವಾಗಿ ಜನಶಕ್ತಿಯ ಬ್ಯಾಂಕ್ ಖಾತೆಗೆ ಹಣವನ್ನು ಜಮಾ ಮಾಡಬಹುದು. ಖಾತೆಯ ವಿವರಗಳನ್ನು ಈ ಕೆಳಗೆ ನೀಡಲಾಗಿದೆ, ಗಮನಿಸುವುದು.

ಜನಶಕ್ತಿ ಕನ್ನಡ ವಾರ ಪತ್ರಿಕೆ
ಅಕೌಂಟ್ ನಂ. 64020446625
ಸ್ಟೇಟ್ ಬ್ಯಾಂಕ್ ಆಫ್ ಮೈಸೂರು,
ಸಂಪಂಗಿರಾಮನಗರ ಶಾಖೆ,
ಬೆಂಗಳೂರು-560027

ಬ್ಯಾಂಕ್ ಖಾತೆಗೆ ಹಣ ತುಂಬಿದಲ್ಲಿ, ಅಥವಾ ಕಚೇರಿಗೆ ಡಿ.ಡಿ. ಅಥವಾ ಎಂ.ಓ. ಕಳಿಸಿದಲ್ಲಿ ತಪ್ಪದೇ ಈ ಕೆಳಕಂಡ ದೂರವಾಣಿ ನಂಬರುಗಳಿಗೆ ಫೋನ್ ಮಾಡಿ ತಿಳಿಸುವುದು.

ಆರ್. ರಾಮಕೃಷ್ಣ. - 9448505789 -
ಎಚ್.ಎಂ.ನಾಗರಾಜ್ - 9482220931

ಜನಶಕ್ತಿ ನೂತನ ಕಾರ್ಯಾಲಯದ ವಿಳಾಸ.
'ಜನಶಕ್ತಿ ಕನ್ನಡ ವಾರಪತ್ರಿಕೆ' ಕಛೇರಿ.
ನಂ.37/ಎ, ಇ.ಎಂ.ಎಸ್. ಭವನ, 8 ನೇ ಅಡ್ಡ ರಸ್ತೆ, ಪೋಸ್ಟ್ ಆಫೀಸ್ ಸಮೀಪ, ಮಹಾಲಕ್ಷ್ಮಿ ಬಡಾವಣೆ, ಬೆಂಗಳೂರು-560086.

(ಕಳೆದವಾರ ಜನಶಕ್ತಿ ಕಛೇರಿ ವಿಳಾಸದಲ್ಲಿ ನಂ.37/ ಎ, ಸಂಖ್ಯೆ ತಪ್ಪಾಗಿ ಮುದ್ರಿತವಾಗಿತ್ತು. ಗಮನಿಸಲು ಕೋರಲಾಗಿದೆ)

'ದೇಹದಾನ' ಕೆ.ಎಸ್. ವಿನೋದ ಮಾದರಿ



ಆಸ್ಪತ್ರೆಗೆ ದೇಹದಾನ ಮಾಡುವ ಸಂದರ್ಭದಲ್ಲಿ ಸಹೋದರಿ ಕೆ.ಎಸ್.ಶಾರದ ಮತ್ತು ಕುಟುಂಬ ಸದಸ್ಯರು

ಅವರ ಹೆಸರು ಕೆ.ಎಸ್. ವಿನೋದ. ಜನವಾದಿ ಮಹಿಳಾ ಸಂಘಟನೆ, ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್(ಡಿವೈಎಫ್ಐ), ಸಿಪಿಐ(ಎಂ)ಮುಂತಾಗಿ ವಿವಿಧ ಸಂಘಟನೆಗಳ ಜನಪರ ಹೋರಾಟಗಳಲ್ಲಿ ಅವರು ಉತ್ಸಾಹದಿಂದ ಹಾಜರಿರುತ್ತಿದ್ದರು.

ಅವರು ಜನಪರ ಚಳುವಳಿಯ ಸಂಗಾತಿಯಾಗಿದ್ದರು. ಜನ ಚಳುವಳಿಗಳ ಹಿತೈಷಿಯಾಗಿ ಅವುಗಳ ನೆರವಿಗೂ ಬರುತ್ತಿದ್ದರು. ಮನುಷ್ಯ ಮನುಷ್ಯರ ನಡುವೆ ದ್ವೇಷದ ಗೋಡೆ ಎಬ್ಬಿಸುವ ಕೋಮುವಾದದ ಕಡು ವಿರೋಧಿಯಾಗಿದ್ದ ಅವರು ಮತಾಂಧತೆ, ಕೋಮುವಾದದ ವಿರುದ್ಧ ವಿವೇಕಾನಂದರ ವಿವೇಕಯುತ ನುಡಿಗಳನ್ನು ಬಳಸಿ ಯುವಜನರಿಗೆ ಕೋಮುದ್ವೇಷದ ಕರಾಳತೆಯನ್ನು ಮನವರಿಕೆ ಮಾಡಿಕೊಡಬಲ್ಲರಾಗಿದ್ದರು.

ಪ್ರೌಢಶಾಲಾ ಮುಖ್ಯ ಶಿಕ್ಷಕಿಯಾಗಿ ದುಡಿದು ನಿವೃತ್ತರಾಗಿದ್ದ ಕೆ.ಎಸ್.ವಿನೋದ ತಮ್ಮ 73ನೇ ವಯಸ್ಸಿನಲ್ಲಿ ಮೂತ್ರಪಿಂಡ ವೈಫಲ್ಯದಿಂದ ಇದೇ ಫೆಬ್ರವರಿ 21, 2011ರಂದು ಬೆಂಗಳೂರಿನ ಶ್ರೀರಾಂಪುರ ಸಮೀಪದ ತಮ್ಮ ಮನೆಯಲ್ಲಿ ಮೃತರಾದರು. ತಮ್ಮ ದೇಹದ ಮೇಲೆ ಹೂ ಹಾರ ಯಾವುದನ್ನು ಹಾಕಬಾರದು, ದೇಹವನ್ನು ವೈದ್ಯಕೀಯ ಉದ್ದೇಶಗಳಿಗಾಗಿ ಆಸ್ಪತ್ರೆಗೆ ದಾನ ನೀಡಬೇಕು ಎಂಬುದು ಅವರ ಬಯಕೆಯಾಗಿತ್ತು. ಅಂತೆಯೇ ಬೆಂಗಳೂರಿನ ಸೆಂಟ್ ಜಾನ್ ಆಸ್ಪತ್ರೆಗೆ ಅವರ ದೇಹವನ್ನು ದಾನ ಮಾಡಲಾಗಿದೆ. ಸಾವಿನಲ್ಲಿಯೂ ಸಾರ್ಥಕತೆ ಮೆರೆಯುವ ಇಂತಹವರ ಸಂಖ್ಯೆ ಹೆಚ್ಚಾಗಬೇಕಲ್ಲವೇ? ವಿನೋದರವರಿಗೆ ಜನಶಕ್ತಿಯ ಭಾವಪೂರ್ಣ ವಿದಾಯ.

ಈ ಬಸವ ತತ್ವ

ಎತ್ತರದ ಸ್ಥಾನವನು ಬಯಸುವವ ಅಲ್ಲ
ಆ ಬಸವ ತತ್ವದೆಡೆ ಇಣುಕಿರೋ ಸ್ವಲ್ಪ
ಬಸವಣ್ಣ ಜಗಜ್ಯೋತಿ ಆದದ್ದು ನೋಡಿ
ಸಮಾನತೆ ಸಾರಿಯೇ ಬಡಿದಾಡಬೇಡಿ.

- ವಿಡಂಬಾರಿ

ಸಿರಸ್ಪಂದಕ್ಕಿಯು - ವಂಚನೆಗಳ ವರಸೆ

ಬಿಜೆಪಿ ಸರ್ಕಾರದ ಮುಖ್ಯಮಂತ್ರಿ ಯಡಿಯೂರಪ್ಪನವರು ಮಂಡಿಸಿರುವ 2011, 12 ರ ಮುಂಗಡ ಆಯವ್ಯಯ ಕರ್ನಾಟಕದ ಜನತೆಯ ಅಪಾರ ನಿರೀಕ್ಷೆಗಳಿಗೆ ಬಗೆದ ದ್ರೋಹವಾಗಿದೆ. ಸಾಮಾನ್ಯ ಬಜೆಟ್ ಜೊತೆಗೆ ಒಟ್ಟಾರೆ ಪ್ರಪ್ರಥಮವೆಂದು ಹೆಗ್ಗಳಿಕೆಯಿಂದ ಕರೆದುಕೊಂಡ ಕೃಷಿ ಬಜೆಟ್ ಎಂಬುದೂ ಬೀಜಸತ್ವವೇ ಇಲ್ಲದ ಬಣ್ಣ ಬಳಿದುಕೊಂಡ ಒಣಸಿಪ್ಪೆಯಾಗಿದೆ. ಅದೇ ರೀತಿ ಸಾಮಾನ್ಯ ಬಜೆಟ್ ಸಹ ಜನರ ಸಂಕಷ್ಟ ರಾಜ್ಯ ಎದುರಿಸುತ್ತಿರುವ ಮೂಲಭೂತ ಪ್ರಶ್ನೆಗಳಿಗೆ ತಕ್ಕ ಉತ್ತರವನ್ನೇ ನೀಡದೇ ವಂಚಿಸಿದೆ. ಕೋಟ್ಯಾಂತರವಿರುವ ಕೃಷಿಕರು, ಕೂಲಿಕಾರರು, ದುಡಿಯುವ ವರ್ಗಗಳ ಹಿತಗಳನ್ನು ಪೂರ್ಣ ನಿರ್ಲಕ್ಷಿಸಿ ಬಂಡವಾಳಗಾರರು ವಿದೇಶ ಕಾರ್ಪೊರೇಟ್ ಕಂಪನಿಗಳು ಭೂಮಾಲಿಕರನ್ನೇ ಜನವೆಂದು ಯಡಿಯೂರಪ್ಪನವರ ಸರ್ಕಾರ ಭಾವಿಸಿದೆ. ಉಳ್ಳವರ ಹಿತವೇ ಪರಮೋಚ್ಚ ಎಂಬ ನೀತಿಯಿಂದ ಕೂದಲೆಳೆಯಷ್ಟು ಈ ಸರ್ಕಾರ ಬದಲಾಗಿಲ್ಲದಿರುವಾಗ ಇದನ್ನೊಂದು ಹೊಸ ಐತಿಹಾಸಿಕ ಬಜೆಟ್ ಎಂದು ಕರೆಯುವುದಾರೂ ಹೇಗೆ?

ಅಬ್ಬರದಲ್ಲಿ ಪ್ರಚಾರ ಮಾಡಿಕೊಂಡ ಗೊಬೆಲ್ಸ್‌ನ ಸಂತತಿಯು ಕೃಷಿಗೆಂದು ಮೀಸಲಿರಿಸಿರುವುದು ಶೇ.18 ರಷ್ಟು ಕಳೆದ ವರ್ಷ ಶೇ.17 ಇತ್ತು ಎಂಬುದಕ್ಕೆ ಹೋಲಿಸಿದಾಗ ಕೇವಲ ಶೇ.1 ರ ಹೆಚ್ಚಳವನ್ನೇ 'ಕೃಷಿ ಬಜೆಟ್' ಎಂದು ಹೆಗ್ಗಳಿಕೆ ಪಡುವುದು ಅರ್ಥಹೀನ. ಕೃಷಿಗಾಗಿ ಮಾಡಿದ್ದ ಸಾಲಬಾಧೆಯಿಂದ ನರಳುತ್ತಾ ಆತ್ಮಹತ್ಯೆಗೀಡಾಗುತ್ತಿರುವ ಕರ್ನಾಟಕದ ರೈತರನ್ನು ನೇಣಿನ ಕುಣಿಕೆಯಿಂದ ರಕ್ಷಿಸಲು ಶೇ.1ರ ಬಡ್ಡಿದರದ ಸಾಲ ನೀಡಿಕೆಯಿಂದ ಸಾಧ್ಯವೇ ಇಲ್ಲ. ಇದು ಕೇವಲ ಸಹಕಾರಿ ಸಂಸ್ಥೆಗಳ ಸಾಲಕ್ಕೆ ಮಾತ್ರ ಸಂಬಂಧಿಸುವುದಲ್ಲದೇ, ರೈತರು ನಿಜಕ್ಕೂ ಸಾಲ ತೆಗೆದುಕೊಂಡಿರುವ ಖಾಸಗಿ ಲೇವಾದೇವಿಗಾರರು, ವಾಣಿಜ್ಯ ಬ್ಯಾಂಕ್‌ಗಳಿಗೆ ಅನ್ವಯಿಸುವುದೇ ಇಲ್ಲ. ಸಹಕಾರಿ ಸಂಸ್ಥೆಗಳ ಸಾಲಕ್ಕೆ ಸರ್ಕಾರ ಪೂರ್ಣ ಬಡ್ಡಿ ನೀಡಿದರೂ ಅದು ಕೇವಲ ಕೆಲವೇ ನೂರು ಕೋಟಿಗಳು ಮಾತ್ರ. ಈಗಾಗಲೇ ಬೀಜ, ಗೊಬ್ಬರ, ಕೃಷಿ ಸಂಬಂಧಿತ ವೆಚ್ಚಗಳು ಅಪಾರ ಹೆಚ್ಚಳವನ್ನು ಕಡಿಮೆ ಮಾಡುವ ಪ್ರಸ್ತಾಪವೇ ಇಲ್ಲ. ಮಾತ್ರವಲ್ಲ, ಕಳೆದ ಹಲವಾರು ವರ್ಷಗಳಿಂದ, ಈಗಲೂ ಫಸಲಿಗೆ ನೀಡಬೇಕಿರುವ ಬೆಂಬಲ ಬೆಲೆ ಆಗ್ರಹವೂ ಮುಖ್ಯಮಂತ್ರಿಗಳ ಕಿವಿಯನ್ನೇ ಹೊಕ್ಕಿಲ್ಲ. ಆವರ್ತನಿಧಿಯೂ ಇದರ ಎದುರು ಅರ್ಥಹೀನವಾಗುವುದು. ಅಥವಾ ವ್ಯಾಪಾರಿಗಳ ಹಿತವೇ ಮುಖ್ಯವೆಂದು ಸರ್ಕಾರ ಪರಿಗಣಿಸಿದೆ. ಸರ್ಕಾರ ಅನುಸರಿಸುತ್ತಿರುವ ಕೃಷಿವಿರೋಧಿ ನೀತಿಗಳಿಂದಾಗಿ ಕೃಷಿ ಕೂಲಿಕಾರರ ಸಂಖ್ಯೆ ಹೆಚ್ಚುತ್ತಿರುವುದು, ವಲಸೆಯ ಹೆಚ್ಚಳ ಇವುಗಳನ್ನು ತಡೆಯಲು ಗ್ರಾಮಾಂತರ ಅಭಿವೃದ್ಧಿ ಉದ್ಯೋಗಸೃಷ್ಟಿ ಲಕ್ಷ್ಯದಲ್ಲೇ ಇಲ್ಲ. ವೇತನ ಹೆಚ್ಚಳ. ಜೀವನ ಭದ್ರತೆ ಇಲ್ಲ. ಅಲ್ಲದೆ ಶೇ.67 ರಷ್ಟಿರುವ ಗ್ರಾಮೀಣ ಪ್ರದೇಶಕ್ಕೆ ಬಜೆಟ್‌ನ ಶೇ.4ರಷ್ಟು, ಆದರೆ ಶೇ.33 ರಷ್ಟಿರುವ ನಗರ ಪ್ರದೇಶಗಳಿಗೆ ಶೇ.9 ರಷ್ಟು ಹಣ ಮೀಸಲಿರಿಸಿರುವುದು ಕಾರ್ಪೊರೇಟ್ ವಲಯಗಳ ಹಿತ ಗಮನಿಸಿಯೇ ಆಗಿದೆ. ಪ್ರಮುಖವಾಗಿ ಗಮನಿಸಬೇಕಿರುವ ಆತಂಕದ ಸಂಗತಿಯೆಂದರೆ ಇಡೀ ಕೃಷಿ ಕ್ಷೇತ್ರವನ್ನು ಖಾಸಗಿ ಕಂಪನಿಗಳ ಕೈಗೆ ದೂಡುತ್ತಿರುವ ಸರ್ಕಾರದ ಪರಿ. ಕೃಷಿ ಅಭಿವೃದ್ಧಿ ಎಂದರೆ ವಿದೇಶ, ಸ್ವದೇಶಿ ಖಾಸಗೀ ಬಂಡವಾಳ ಹೂಡಿಕೆ, ಕಂಟ್ರಾಕ್ಟ್ ಕೃಷಿ ಎಂದು ಸರ್ಕಾರ ಪ್ರತಿಪಾದಿಸಿದೆ. ಕೈಗಾರಿಕೆ ಅಗತ್ಯಗಳ ಹೆಸರಿನಲ್ಲಿ ಇನ್ನೂ ಲಕ್ಷಾಂತರ ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಭೂಮಾಫಿಯಾಗಳಿಗೆ ದಾನ ಮಾಡುವ, ಭೂಸುಧಾರಣೆಯನ್ನೇ ನಾಶ ಮಾಡುವ ಹುನ್ನಾರವಿದೆ. ಜಾಗತಿಕ ಕೃಷಿ ಬಂಡವಾಳ ಹೂಡಿಕೆದಾರರ ಸಮಾವೇಶವೂ ಸಾಮಾನ್ಯ ರೈತರಿಂದ ಭೂಮಿ ಕಿತ್ತುಕೊಳ್ಳುವ ದಿಕ್ಕಿನಲ್ಲಿದೆ.

ಯಾವಾಗಲೂ ಯಡಿಯೂರಪ್ಪ ನವರು ಬಡಾಯಿ ಕೊಚ್ಚಿಕೊಳ್ಳುವ ಅಭಿವೃದ್ಧಿ ಸಾಧಿಸುವ ಬಗೆಯಾದರೂ ಹೇಗೆ? ಒಬ್ಬ ಸಾಮಾನ್ಯ ಬಜೆಟ್ ಕಳೆದ ವರುಷದ 77,763 ಕೋಟಿಯಿಂದ 85,319 ಕೋಟಿಗೇನೋ ಹೆಚ್ಚಿಸಲಾಗಿದೆ. ಆದರೆ 12,482 ಸಾವಿರ ಕೋಟಿ ರೂಪಾಯಿಗಳ ಕೊರತೆ ಇರುವುದು ಸರ್ಕಾರದ ಹೇಳಿಕೆಯನ್ನೇ ಹಾಸ್ಯಾಸ್ಪದಗೊಳಿಸಿದೆ. ಈ ಕೊರತೆಯನ್ನು ತುಂಬುವ ಬಗೆ ಹೇಗೆ ಎಂಬ ಸುಳಿವೇ ಇಲ್ಲದಿರುವುದು ಬಜೆಟ್‌ನ ಯೋಜನೆಗಳು, ಘೋಷಣೆಗಳು ಜಾರಿಯ ಬಗ್ಗೆ ಅನುಮಾನ ಹುಟ್ಟಿಸುತ್ತದೆ. ಯಾಕೆಂದರೆ ಜನರಿಗೆ ಭಾರವಾಗದಂತೆ ಆಂತರಿಕ ಸಂಪತ್ತಿನ ಕ್ರೋಢೀಕರಣ ಹೇಗೆ ಎಂಬ ಬಗ್ಗೆ ನಿಖರತೆಯೇ ಇಲ್ಲ, ಇಂತಹದ್ದನ್ನು ತುಂಬಲು ಜನಸಾಮಾನ್ಯರ ಮೇಲೆ ತೆರಿಗೆಗಳ ಭಾರ ಹೇರಿದೆ. ಮುಖ್ಯವಾಗಿ ಕೃಷಿಗೆ, ಸಾಮಾಜಿಕ ರಂಗಕ್ಕೆ ಸರ್ಕಾರದ ವೆಚ್ಚಗಳಿಗೆ ನಿರ್ಬಂಧ ಹೇರಿರುವ 'ಫಿಸ್ಕಲ್ ರೆಗ್ಯೂಲೇಟರಿ ಕಾಯ್ದೆ'ಯನ್ನು ಅಂಗೀಕರಿಸಿರುವಾಗ ಅದು


ಪುಟ 4 ಕ್ಕೆ

ಸಾವಿರ ಸುಳ್ಳುಗಳ ಸಮಾವೇಶ

ನೂರು ದಿನಗಳದ್ದಾಯಿತು. ಒಂದು ವರ್ಷದ್ದೂ ಕೂಡ, ಆದರೀಗ ಒಂದು ಸಾವಿರ ದಿನಗಳ ಸಾಧನೆಯ ಸಮಾವೇಶ! ಕನ್ನಡದ ಜಾನಪದದಲ್ಲಿ ಒಂದು ಗಾದೆ ಮಾತಿದೆ. 'ನೂರು ವರ್ಷ ಬಾಳುವುದಕ್ಕಿಂತ ಮೂರು ವರ್ಷ ಸಾರ್ಥಕವಾಗಿ ಬಾಳು' ಎಂದು.

ಸಮರ್ಥನೆ

ಆದರೆ ರಾಜ್ಯದ ಬಿಜೆಪಿ ಸರ್ಕಾರ ನೂರಲ್ಲ ಸಾವಿರ ವರ್ಷಕ್ಕಾಗಿ ಹಪಾ ಹಪಿಸುತ್ತಿದೆ. ಅಧಿಕಾರದಲ್ಲಿ ಉಳಿಯಲು ಪ್ರತಿದಿನವೂ ಹೆಣಗುತ್ತಿದೆ. ಅದಕ್ಕಾಗಿ ಅದು ಮಾಡದ ಅಕ್ರಮಗಳೇ ಇಲ್ಲ. ಒಳಜಗಳ, ಅಧಿಕಾರದಾಹ, ಭ್ರಷ್ಟತೆ ಹಗರಣಗಳಿಂದ ಅದು ಏದುಸಿರು ಬಿಡುತ್ತಿದೆ. ಆಡಳಿತವೇ ಜನರ ಪಾಲಿಗೆ ಇಲ್ಲದಾಗಿದೆ. ಜನರ ನಿತ್ಯ ಸಂಕಟಗಳನ್ನು ಕೇಳುವವರೇ ಇಲ್ಲವಾಗಿದೆ. ಆದಾಗ್ಯೂ ಯಡಿಯೂರಪ್ಪನವರ ಸರ್ಕಾರಕ್ಕೆ ಇವುಗಳ ಪರಿವೆಯೇ ಇಲ್ಲದಂತಿದೆ. ಹೀಗಾಗಿ ಇಂತಹ ಸರಕಾರ ನೂರು ದಿನವೇನು? ಸಾವಿರ ದಿನಗಳಾದರೇನು? ಜನರ ಪಾಲಿಗೆ ಬಂದಿದ್ದೇನು. ಮೊನ್ನೆ ಫೆಬ್ರವರಿ 20 ರಂದು ಬಿಜೆಪಿ ಆಯೋಜಿಸಿದ್ದ ಸಾವಿರ ದಿನಗಳ ಆಡಳಿತ ಪೂರೈಕೆಯ ಹಿನ್ನೆಲೆಯಲ್ಲಿ 'ಜನರಿಗೆ ವಂದನೆ ಕಾರ್ಯಕರ್ತರಿಗೆ ಅಭಿನಂದನೆ' ಎಂಬ ಬೃಹತ್ ಸಮಾವೇಶ ಬೆಂಗಳೂರಿನಲ್ಲಿ ನಡೆಯಿತು. ತನ್ನ ಆಡಳಿತದ ಲೆಕ್ಕಪತ್ರವನ್ನು ಜನರಿಗೆ ನೀಡುವ ಬದಲು ಭ್ರಷ್ಟ ಜನವಿರೋಧಿ ಆಡಳಿತವನ್ನು ಸಮರ್ಥಿಸಿಕೊಳ್ಳುವ ದಿಕ್ಕಿನಲ್ಲೇ ಇತ್ತು.



ಸಂಘಟನೆಯ ಜಾಲ

ಅಲ್ಲಿ ಮಾತನಾಡಿದ ನಾಯಕರು ಧಾಳಿ ಮಾಡಿದ್ದು ವಿರೋಧ ಪಕ್ಷಗಳ ಮೇಲೆಯೇ. ಬಂದ ಆರೋಪಗಳಿಗೆ ಉತ್ತರ ಹೇಳದ ಅವರು ಜನರ ಕಣ್ಣಿಗೆ ಮಂಕುಬೂದಿ ಎರಚುವ ಕಸರತ್ತು ನಡೆಸಿದರು. ಎಲ್ಲಕ್ಕಿಂತ ಮುಖ್ಯವಾಗಿ ಅವರೇ ಪ್ರಕಟಿಸಿದಂತೆ ಬೂತ್ ಮಟ್ಟದ ಕಾರ್ಯಕರ್ತರನ್ನು ಇಲ್ಲಿ ಕರೆಸಿಕೊಳ್ಳ ಲಾಗಿತ್ತು. ಸುಮಾರು 40 ಸಾವಿರ ಬೂತ್ ಗಳಿಂದ ಎರಡು ಲಕ್ಷ ಕಾರ್ಯಕರ್ತರು ಭಾಗವಹಿಸಿದ್ದರೆಂಬ ಅಂದಾಜು ಮಾಧ್ಯಮಗಳದ್ದು. ಅಂದರೆ ಪಂಚಾಯತ್ ಗಳ ಚುನಾವಣೆ ಬಳಿಕ ಸಂಘಟನೆಯ ಜಾಲವನ್ನು ವಿಸ್ತರಿಸಿಕೊಳ್ಳುವ ಅದರ ಪ್ರಯತ್ನದ ಭಾಗವೇ ಈ ಸಮಾವೇಶ.



ಪೂರ್ವ ಸಿದ್ಧತೆ

ಇಲ್ಲಿ ನಾಯಕರೇನೋ 'ಚುನಾವಣೆ ನಡೆಯೋದಿಲ್ಲ ಯಡಿಯೂರಪ್ಪ ಬದಲಾವಣೆ ಆಗೋಲ್ಲ, 5 ವರುಷ ಪೂರೈಸುತ್ತಾರೆ' ಎಂದೆಲ್ಲಾ ಹೇಳಿದರೂ ಇದು ಮುಂಬರುವ ಮಧ್ಯಂತರ ಚುನಾವಣೆಯ ಪೂರ್ವಸಿದ್ಧತೆ ಎಂಬುದನ್ನು ಮುಚ್ಚಿಡಲೂ ಆಗಲಿಲ್ಲ. ಯಡಿಯೂರಪ್ಪ ನವರು ಈ ಸಮಾವೇಶ ಯಶಸ್ವಿ ಗೊಳಿಸಲು ನಡೆಸಿದ ಪ್ರಯತ್ನಗಳು ತಾನು ಬಿಜೆಪಿಗೆ ಹೇಗೆ ಅನಿವಾರ್ಯ ಎಂಬ ಸಂದೇಶವನ್ನು ನಡೆಸಿ ನಾಯಕರಿಗೆ ತೋರಿಸಿದ ಬಲಪ್ರದರ್ಶನವೇ ಆಗಿತ್ತು. ಜಾತಿ ಬೆಂಬಲದ ಕ್ರೋಢೀಕರಣ, ಮಠಮಾನ್ಯಗಳ ಬೆಂಬಲ ಹಣ ಮಾಡುವ ಕೌಶಲ್ಯದಲ್ಲಿ ಯಡಿಯೂರಪ್ಪನವರ 'ಪ್ರಗತಿ' ಕಂಡ ಬಿಜೆಪಿ ಅಧ್ಯಕ್ಷ ಗಡ್ಕರಿ 'ಮುಂದೆಯೂ ಅವರೇ ನಾಯಕರು' ಎಂದು ಘೋಷಿಸಿದ್ದು ಈ ಒತ್ತಡದ ಕಾರಣದಿಂದಲೇ.

ನಂ.1 ಮತ್ತು 2

ಅದೇ ಹೊತ್ತಿನಲ್ಲಿ ರೈತರ ಆತ್ಮಹತ್ಯೆ ಪ್ರಕರಣಗಳಲ್ಲಿ ಕರ್ನಾಟಕ 2 ನೇ ಸ್ಥಾನ ಪಡೆದ ವರದಿ ಪ್ರಕಟವಾಗುತ್ತಿರುವಾಗಲೇ ಗಡ್ಕರಿ ಕರ್ನಾಟಕ ಸರ್ಕಾರ ಅಭಿವೃದ್ಧಿಯಲ್ಲಿ ದೇಶದಲ್ಲೇ ನಂ.1 ಎಂದು ಶಿಫಾರಸು ಮಾಡುತ್ತಿದ್ದುದು ಬಿಜೆಪಿ ನಾಯಕರ ಅಮಾನವೀಯತೆ ಹಾಗೂ ಲಜ್ಜೆಗೇಡಿತನವನ್ನು ಅನಾವರಿಸುತ್ತಿತ್ತು.

ಜನತೆಗೆ, ರಾಜ್ಯ, ರಾಷ್ಟ್ರಕ್ಕೆ ಎಷ್ಟೆಲ್ಲಾ ವಂಚಿಸಿದ್ದರೂ 'ಮತ್ತೆ ತಮ್ಮನ್ನೇ ಚುನಾಯಿಸಿ' ಎಂಬ ಅವರ ಹೇಳಿಕೆ ಸ್ವಲ್ಪವೂ ನೈತಿಕತೆ, ಅಳುಕಿಲ್ಲದ ಭಂಡತನವೇ ಆಗಿತ್ತು. ಅಧಿಕಾರದಲ್ಲಿರುವುದೇ ದೇಶಕ್ಕಾಗಿ, ದೇಶಭಕ್ತಿ ತಮ್ಮ ಶಕ್ತಿ ಎನ್ನುತ್ತಿದ್ದುದು ಭಂಡತನ ಮತ್ತು ಗೋಬೆಲ್ಸ್‌ನ ಸುಳ್ಳನ್ನೇ ಛೇಡಿಸುವಂತಿತ್ತು.

ಎಚ್ಚರಿಕೆ ಗಂಟೆ

ಈ ಸಮಾವೇಶ, ಬಿಜೆಪಿ ನಡೆಸುತ್ತಿರುವ ಸರ್ವ ಪ್ರಯತ್ನಗಳು ರಾಜ್ಯದ ಜನತೆಗೆ, ಪ್ರಗತಿಪರರಿಗೆ, ವಿರೋಧ ಪಕ್ಷಗಳಿಗೂ ಎಚ್ಚರಿಕೆಯ ಗಂಟೆ, ಕಳೆದುಹೋಗುತ್ತಿರುವ ತನ್ನ ಜನಪ್ರಿಯತೆ ದೂರಸರಿಸುತ್ತಿರುವ ಜನರನ್ನು ತನ್ನತ್ತ ಸೆಳೆಯಲು ಬಿಜೆಪಿ ಮುಖ್ಯವಾಗಿ ಆರ್.ಎಸ್.ಎಸ್. ಪೂರ್ಣವಾಗಿ ಇಳಿದಿದೆ. ವಿಧಾನಸಭಾ ಕ್ಷೇತ್ರವಾರು ವಿಶೇಷವಾಗಿ ಕ್ಷೇತ್ರಗಳನ್ನು ಗುರುತಿಸಿ ಎಲ್ಲಾ ರೀತಿಯ ತಂತ್ರಗಳಿಂದ ಸಿದ್ಧತೆ ನಡೆಸುತ್ತಿದೆ. ಆದರೆ ಈ ಬಗೆಗಿನ ಗಂಭೀರತೆ, ಅಗತ್ಯ ಸಿದ್ಧತೆ ವಿರೋಧ ಪಕ್ಷಗಳಲ್ಲಿ ಕಾಣುತ್ತಿಲ್ಲ. ಅವರದ್ದೇ ತಂತ್ರ-ಮಂತ್ರಗಳಲ್ಲಿ ಮಗ್ನರಾಗಿರುವವರಿಗೆ ಇವೆಲ್ಲಾ ಕಾಣುವುದಿಲ್ಲ?

* * *

ರಾಜ್ಯಸಭಾ ಚುನಾವಣೆ ತಾತ್ವಿಕ ಹೋರಾಟವಾಗಲಿ

'ಹೇಮಾ ಮಾಲಿನಿ ಭಾರತೀಯಳಲ್ಲವೇ' ಎಂದು ಬಿಜೆಪಿ ಅಧ್ಯಕ್ಷ ಕೆ.ಎಸ್. ಈಶ್ವರಪ್ಪನವರು ಕೇಳಿದ ಪ್ರಶ್ನೆಗೆ ಇಲ್ಲ ಎನ್ನುವವರು ಯಾರೂ ಇಲ್ಲ. ಆದರೆ ಒಂದು ವೇಳೆ ಆ ಹೆಸರು ಶಾಹೀನಾ, ಶಮೀಮ್ ಎಂದೇನಾದರೂ ಇದ್ದರೆ ಇದೇ ಈಶ್ವರಪ್ಪನವರ ಪ್ರಶ್ನೆ ಉತ್ತರಗಳು ಬೇರೆಯವೇ ಆಗಿರುತ್ತಿದ್ದವು.

ವಿಸ್ತೃತ ವಾದ

ಅವರು ಹಾಗೆ ಸಮರ್ಥಿಸಿ ಕೊಳ್ಳುತ್ತಿದ್ದುದು ಎಂ.ರಾಜಶೇಖರ ಮೂರ್ತಿ ನಿಧನದಿಂದ ತೆರವಾದ ರಾಜ್ಯಸಭಾ ಸ್ಥಾನಕ್ಕೆ ಖ್ಯಾತ ಸಿನಿಮಾ ನಟಿ ಹೇಮಾಮಾಲಿನಿಯನ್ನು ಅಭ್ಯರ್ಥಿ ಯನ್ನಾಗಿಸಿದ ಬಿಜೆಪಿ ಹೈಕಮಾಂಡ್ ನಿರ್ಧಾರವನ್ನು. ಅನೇಕರು 'ಕರ್ನಾಟಕದಲ್ಲಿ ಅಭ್ಯರ್ಥಿಗಳು ಯಾರೂ ಇರಲಿಲ್ಲವೇ' ಎಂದು ಪ್ರಶ್ನಿಸಿದ ಹಿನ್ನೆಲೆಯಲ್ಲಿ ಈಶ್ವರಪ್ಪನವರು ಹೀಗೆ ವಿಂತಡವಾದದ ಪ್ರಶ್ನೆ ಎತ್ತಿದರು.

ಹಿರಿಯರ ಮನೆಯೊಳಗೆ ಹಿರಿಯರಿಲ್ಲ

ಇಲ್ಲಿ ಹೊರ ರಾಜ್ಯದವರು, ರಾಜ್ಯದೊಳಗಿನವರು ಎಂಬ ಪ್ರಶ್ನೆಗಿಂತ ಸ್ಪರ್ಧಿಸುವ, ಅಭ್ಯರ್ಥಿ ಗೆದ್ದ ಮೇಲೆ ಅವರು ಹೇಗೆ ಕರ್ನಾಟಕವನ್ನು ಪ್ರತಿನಿಧಿಸುತ್ತಾರೆ ವಿಷಯದ ಕಾಳಜಿ ಮಂಡನೆ ಮಾಡುತ್ತಾರೆ. ಎಂಬುದೇ ಮುಖ್ಯ. ಹಾಗಾಗಿ ಹೇಮಮಾಲಿನಿಗೆ ಅದು ಸಾಧ್ಯವೇ? ಎಂಬ ಪ್ರಶ್ನೆ. ಸಂವಿಧಾನದ ಅವಕಾಶ ಅನುಸರಿಸಿದರೆ ಯಾವ ರಾಜ್ಯದವರೂ ಎಲ್ಲಿ ಬೇಕಾದರೂ

ಪುಟ 6 ಕ್ಕೆ

ಅಂಗವಿಕಲರಿಂದ, ಅಂಗವಿಕಲರಿಗಾಗಿ...

ರಾಜ್ಯದ ಅಂಗವಿಕಲರ ಸಂಘದ ರಾಜ್ಯ ಕಛೇರಿ ಉದ್ಘಾಟನೆ



ಉದ್ಘಾಟಿಸುತ್ತಿರುವ ಡಿ.ವಿ.ಪ್ರಸಾದ್. ವೇದಿಕೆಯಲ್ಲಿ ಜಿ.ಎನ್.ಪಾರ್ವತಿ ಮೆನನ್ ಇತರರು

ದೈಹಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಶೋಷಣೆಗೊಳಗಾಗುತ್ತಿರುವ ಅಂಗವಿಕಲರು ಎಲ್ಲಾ ರೀತಿಯ ಶೋಷಣೆ, ಮೋಸ ವಂಚನೆಯಿಂದ ಮುಕ್ತಿಗೊಳ್ಳುವ ಅಗತ್ಯತೆಯನ್ನು ಮನಗಂಡು "ಕರ್ನಾಟಕ ರಾಜ್ಯ ಅಂಗವಿಕಲರ ಮತ್ತು ಪಾಲಕರ ಒಕ್ಕೂಟ"ದ ಹೆಸರಿನಲ್ಲಿ ಸಂಘಟಿತನಾಗುತ್ತಿದ್ದಾನೆ.

ಸೇವೆ, ಕರುಣೆ, ಅನುಕಂಪ, ಪಾಪ ಇದರ ಹೆಸರಲ್ಲಿ. ನಮ್ಮನ್ನು ಬಲಿ ಮಾಡಿ ನಿಮ್ಮ ಸಾಮ್ರಾಜ್ಯ ಕಟ್ಟಿದ್ದೀರಿ, ಮೆರೆದಿದ್ದೀರಿ. ನಮ್ಮದಲ್ಲದ ತಪ್ಪುಗಳಿಗೆ ನಾವು ಬಲಿಯಾಗಬೇಕಿಲ್ಲ..... ನಿಮ್ಮಂತೆಯೇ ನಾವೂ ಸಹ, ನಮಗೆ ಅವಕಾಶ ಕೊಡಿ ಅದನ್ನು ಕೇಳುತ್ತಿದ್ದೇವೆ. ಅದು ಹಕ್ಕಾಗಿಯೇ ಹೊರತು ಅನುಕಂಪವಾಗಿ ಅಲ್ಲ.

ಹೀಗೆ ರಾಜ್ಯದ ಅಂಗವಿಕಲರು ದಿನಾಂಕ : 01/02.2011 ರಂಧು ಬೇರೆ ಬೇರೆ ಜಿಲ್ಲೆಗಳಿಂದ ಆಗಮಿಸಿ ಬೆಂಗಳೂರಿನಲ್ಲಿ ಸೇರಿದ್ದರು. ಬೆಂಗಳೂರಿನ "ಸಂಕ್ರಾಂತಿ" 17ನೇ ಮುಖ್ಯರಸ್ತೆ, ನಂದಿನಿ ಲೇಔಟ್‌ನಲ್ಲಿ ಅಂಗವಿಕಲ ಮತ್ತು ಪಾಲಕರ ಒಕ್ಕೂಟದ ರಾಜ್ಯಸಮಿತಿ ಕಛೇರಿ ಶೃಂಗಾರಗೊಂಡು ಉದ್ಘಾಟನೆಗೆ ಕಾದಿತ್ತು.

ಇದರ ಉದ್ಘಾಟನೆಯನ್ನು ಕರ್ನಾಟಕ ಸರ್ಕಾರದ ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ ಪ್ರಧಾನ ಕಾರ್ಯದರ್ಶಿಗಳಾದ ಡಿ.ವಿ.ಪ್ರಸಾದ್ ಐ.ಎ.ಎಸ್ ಉದ್ಘಾಟನೆ ಮಾಡಿದರು.



ಸಭೆಗೂ ಮುನ್ನ ನಡೆದ ಮೆರವಣಿಗೆ

ಮುಖ್ಯ ಅತಿಥಿಗಳಾಗಿ ದಿ ಹಿಂದೂ ದಿನಪತ್ರಿಕೆ ಬೆಂಗಳೂರು ಮುಖ್ಯಸ್ಥರಾದ ಡಾ: ಪಾರ್ವತಿ ಮೆನೆನ್, ಕರ್ನಾಟಕ ರಾಜ್ಯ ಅಂಗವಿಕಲರ ಕಲ್ಯಾಣ ನಿಗಮದ ಆಯುಕ್ತರಾದ ರಾಜಣ್ಣ, ಕಠೀರವ ಫಿಲಂ ಸ್ಟುಡಿಯೋದ ವ್ಯವಸ್ಥಾಪಕರಾದ ವಿಶುಕುಮಾರ, ದಿಗಂತ ಇನ್‌ವೆಸ್ಟ್‌ಮೆಂಟ್ ಅಂಡ್ ಫೈನಾನ್ಸ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರಾದ ನೀಲಕಂಠಮೂರ್ತಿ ಇವರುಗಳು ಆಗಮಿಸಿದ್ದರು. ಸಮಾರಂಭದ ಅಧ್ಯಕ್ಷತೆಯನ್ನು ರಾಜ್ಯ ಅಂಗವಿಕಲರ ಮತ್ತು ಪಾಲಕರ ಒಕ್ಕೂಟದ ಸಂಚಾಲಕರಾದ ಜಿ.ಎನ್.ನಾಗರಾಜ್ ವಹಿಸಿದ್ದರು.

ಪ್ರಾಸ್ತಾವಿಕವಾಗಿ ಮಾತನಾಡಿದವರು ಈಗಾಗಲೇ ಅಂಗವಿಕಲರ ನಡುವೆ ಅನೇಕ ಸಂಘ ಸಂಸ್ಥೆಗಳು, ಸೇವೆಯ ಹೆಸರಿನಲ್ಲಿ ಕೆಲಸ ಮಾಡುತ್ತಾ ಸಣ್ಣಪುಟ್ಟ ಅನುಕೂಲತೆಗಳನ್ನು ಮಾಡಿಕೊಟ್ಟಿವೆ. ಅಂಗವಿಕಲರಿಗೆ ನಿಜವಾಗಿಯೂ ನೂರಾರು ಸಮಸ್ಯೆಗಳಿವೆ. ಅಂಗವಿಕಲರ ಬದುಕಿನ ಪ್ರಶ್ನೆ, ಮದುವೆಯ ಪ್ರಶ್ನೆ, ಉದ್ಯೋಗದ ಪ್ರಶ್ನೆ ಹೀಗೆ ಅಂಗವಿಕಲರು ಹಲವಾರು ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಶೇ.3 ರಷ್ಟು ಮೀಸಲಾತಿ ಎಲ್ಲಾ ವಿಭಾಗದಲ್ಲಿ ಸಕ್ರಮವಾಗಿ ಜಾರಿಯಾಗಿಲ್ಲ. ಒಂದು ವೇಳೆ ಜಾರಿಗೊಂಡಿದ್ದರೆ ಯಾವೊಬ್ಬ ಅಂಗವಿಕಲನು ನಿರುದ್ಯೋಗಿಯಾಗುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತಿರಲಿಲ್ಲ. ಬಹು ಮುಖ್ಯವಾದ ಬದುಕಿನ ಸಮಸ್ಯೆ ಅಂಗವಿಕಲತೆಯನ್ನು ನೋಡಿ ಯಾರೂ ಮದುವೆಯಾಗದೇ ಕೊನೆಯ ಉಸಿರಿನತನಕವೂ ಒಂಟಿಯಾಗಿಯೇ ಬದುಕಿನ ಸಮಸ್ಯೆಗಳನ್ನು ಎದುರಿಸುತ್ತಾ ಹೋರಾಡಬೇಕಿರುವುದು. ಅಂಗವಿಕಲರ ಶಿಕ್ಷಣ, ಜೀವನ ನಿರ್ವಹಣೆ..... ಹೀಗೆ ಜ್ವಲಂತ ಸಮಸ್ಯೆಗಳ ನಡುವೆ ಅಂಗವಿಕಲರು ದಿನಗಳನ್ನು ದೂಡುವುದು. ಈ ಎಲ್ಲಾ ಸಮಸ್ಯೆಗಳಿಗೆ ಶಾಶ್ವತ ಪರಿಹಾರವನ್ನು ಕಂಡುಕೊಳ್ಳುವುದು ನಮ್ಮ ಸಂಘಟನೆಯ ಧ್ಯೇಯವಾಗಿದೆ. ಈ ಕಾರಣವಾಗಿಯೇ ಅಂಗವಿಕಲರಿಂದ, ಅಂಗವಿಕಲರಿಗಾಗಿ, ಅಂಗವಿಕಲರಿಗೋಸ್ಕರ ರಾಜ್ಯಮಟ್ಟದ ಸಂಘಟನೆ, ಕಛೇರಿ, ಕಚೇರಿಯಲ್ಲಿ ಉದ್ಯೋಗ ಮಾಹಿತಿ ವಿಭಾಗ, ಅಂಗವಿಕಲರ ಮದುವೆಯ ವಧುವರರ ವಿಭಾಗವನ್ನು ತೆರೆಯಲಾಗಿದೆ ಎಂದರು.

ಡಿ.ವಿ.ಪ್ರಸಾದ್, ಪಾರ್ವತಿ ಮೆನನ್, ವಿಶುಕುಮಾರ್ ಇವರುಗಳು ಅಂಗವಿಲರ ಎಂಪ್ಲಾಯ್‌ಮೆಂಟ್ ಬ್ಯೂರೋ, ಮ್ಯಾರೇಜ್ ಬ್ಯೂರೋಗಳನ್ನು ಉದ್ಘಾಟಿಸಿದರು. ಇದಲ್ಲದೆ ಪಾರ್ವತಿ ಮೆನನ್ ರಾಜ್ಯದ ಹಲವಾರು ಜಿಲ್ಲೆಗಳಿಂದ ಬಂದಿದ್ದ ಅಂಗವಿಕಲ ಮುಖಂಡರಿಗೆ ಹೂಗುಚ್ಛ ನೀಡಿ ಅಭಿನಂದಿಸಿದ್ದಲ್ಲದೆ ನಿಜವಾದ ಅತಿಥಿಗಳು (ನೆರೆದಿದ್ದ ಅಂಗವಿಕಲರು) ನೀವುಗಳು ನಿಮ್ಮನ್ನು ಅಭಿನಂದಿಸುವ ಗೌರವಕ್ಕೆ ಪಾತ್ರಳಾಗಿದ್ದು ನಿಜಕ್ಕೂ ನನಗೆ ಸಂತೋಷ ತಂದಿದೆ. ನೀವು ಸರಿಯಾದ ದಿಕ್ಕಿನಲ್ಲಿ ಹೆಜ್ಜೆ ಇಟ್ಟಿದ್ದೀರಿ. ದಾರಿ ಸರಿಯಾಗಿದೆ, ಸಂಘಟಿತರಾಗಿರಿ, ಜಯ ಖಂಡಿತವಾಗಿಯೂ ನಿಮಗಾಗಿ ಕಾದಿದೆ ಎಂದು ಹೇಳಿದರು.

ಅಂಗವಿಕಲರ ಕಲ್ಯಾಣ ಮಂಡಳಿಯ ಆಯುಕ್ತ ರಾಜನ್ ಮಾತನಾಡಿದರು. ನಿಮಗಾಗಿ ಪ್ರಾಮಾಣಿಕವಾಗಿ ಕೆಲಸ ನೀಡುತ್ತೇನೆ ಎಂದು ಹೇಳಿದರು/

ಸ್ವಾಗತವನ್ನು ಸಂಘಟನಾ ಸಂಚಾಲಕ ರಂಗಪ್ಪ ದಾಸರ ಮಾಡಿದರೆ ವಂದನಾರ್ಪಣೆಯನ್ನು ಅಂಗವಿಕಲ ಮುಖಂಡ ರಾಜನ್ ಮಾಡಿದರು. ಬಂದಂತಹ ಅತಿಥಿಗಳಿಗೆ ಹೂಗುಚ್ಛ ನೀಡಿ ಸ್ವಾಗತಿಸಿದ್ದು ಜಿ.ಎನ್.ಯಶಸ್ವಿ, ಈ ಕಾರ್ಯಕ್ರಮದ ಸಂಪೂರ್ಣ ಯಶಸ್ಸು ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ನೂರಾರು ಅಂಗವಿಕಲ ಬಾಂಧವರದು. ಕಾರ್ಯಾಲಯ ಅಲಂಕಾರದ ವಿಶೇಷ ಮುತುವರ್ಜಿಯನ್ನು ನಿರುಪಮಾ ನಿರ್ವಹಿಸಿದರು. ಅನೇಕ ಪಾಲಕರು, ವಿವಿಧ ಕ್ಷೇತ್ರಗಳ ಪ್ರಮುಖರು

-ರಂಗಪ್ಪ ದಾಸರ್

ಸಾದ್ನೆ ಆಗಿದ್ರೆ ಜನುಕ್ಕೆ ಗೊತ್ತಾಗಕಿಲ್ವಾ ?

ಕ್ಯಾತೆ

ಈ. ಬಸವರಾಜು
ಮಲ್ಲೇನಹಳ್ಳಿ

ಯಣ್ಣ, ನಾವು ಮಾಡಿದ್ ಕ್ಯಲ್ಸ ಮಾತಾಡ್ಬೇಕಂತೆ, ಆದ್ರೆ ಮಾತಾಡದೆ ಒಂದ್ ಕ್ಯಲ್ಸ ಆಗ್ಬಾರ್ದಂತೆ, ಇದ ಒಪ್ತಿಯ?

ನೀನೇಳದು ಕರೆಟ್ಬಾಗ್ಯದೆ, ಒಪ್ಪದೇನ್ ಬತ್ತು?

ಅಂಗಾರೆ ಆ ಯಡೂರಪ್ಪುಂಗೆ ಒಂದ್ಸತಿ ಓಗಿ ಏಳಿ ಬಾ..

ಯಾಕೆ ಅವ್ನಿಗೆ ಇದೂ ಗೊತ್ತಿಲ್ವೆ?

ಗ' ಊ ತಿ_ತ ದ'_

ಯಾಕಿಂಗಾಡನು?

ಯಂಗಾಡ್ತಾ ಅವ್ನೆ?

ಅಳ್ಳಿಗಳಿಗ್ಯಲ್ಲ ಪುಕ್ಸಟ್ಟೆ ಬಸ್ ಕಳ್ಸಿ ಜನ ಕರ್ಸದು. ಅವ್ರಿಗೆ ಊಟ ಆಕದು, ಅಮ್ಯಾಲೆ ನನ್ ಸಾದ್ನೆ ನೋಡ್ರಪ್ಪೋ ಅಂತ ಕೂಗೊ ಮಾರಿಯಂಗೆ ಕೂಗದು.

ಅವ್ನ ಸಾದ್ನೆ ಕತೆ ಕೇಳಕೆ ಕ್ಯಲ್ಸ ಬುಟ್ಟು ಬೆಂಗ್ಳೂರ್ ತಕ ಓಗ್ಬೇಕೆ?

ಅದ್ನೆ ನಾನೂ ಏಳ್ತಾ ಇರದು. ಅಂತದೇನಾರ ಮಾಡ್ಬಾರುದ್ ಸಾದ್ನೆ ಮಾಡಿದ್ರೆ ಜನ್ವೆ ಒಗುಳ್ತರೆ, ಅದ ಬುಟ್ಟು ಇವ್ನ ಜನ ಸೇರ್ಸದು, ತಮ್ಟೆ ಬಡ್ಯದು ಮಾಡಿದ್ರೆ ಇವ್ನಿಗೇನೇಳ್ಬೇಕೊ ಗೊತ್ತಾಯ್ತಾ ಇಲ್ಲ.

ಓಕಳ್ಳಿ ಏನ್ ಸಾದ್ನೆ ಮಾಡಿದ್ದಿನಿ ಅಂದ್ನಂತೆ?

ಅದೇನೂ ಇಲ್ವಂತೆ, ಬರೀ ಸಾದ್ನೆ ಮಾಡಿದ್ದಿನಿ, ಅದ ನೋಡಿ ಸೈಸ್ಕಳಕಾಗ್ದೆ ವಿರೋದ್ ಪಕ್ಷದವ್ರು ನನ್ನ ಬಾಯಿಗ್ ಬಂದಂಗೆ ಬಯ್ತಾ ಅವ್ರೆ, ಇದ್ಕೇನ್ ಮಾಡನ ಏಳಿ ಅಂದ್ನಂತೆ.

ಅದ್ಕೆ ಜನ ಏನೇಳಿದ್ರಂತೆ?

ಬಸ್ ನಲ್ಲಿ ಸೀಟು ಸಿಕ್ತು, ಊಟ್ವೂ ಚನ್ನಾಗಿತ್ತು, ಆದ್ರೆ ಯಲೆ ಅಡ್ಕೆ ಕೊಟ್ಟಿದ್ರೆ ಇವ್ರಪ್ಪುನ್ ಗಂಟೇನಾಗಿತ್ತು ಅಂತವ ಮಾತಾಡಿಕಂಡು ಬಂದ್ರಂತೆ, ಅಷ್ಟೆಯ.

ಜನ ಏಳಿರದು ಕರೆಟ್ಟೆಯ. ಯಾಕೆ ಅಂದ್ರೆ ಒಂಧಾಸ್ಪತ್ರಿಗೋಗು, ಜನ ತುಂಬಿರ್ತರೆ. ಡಾಕ್ಟ್ರು ಯರ್ನ ನೋಡಿ ಯಾರ್ನ ಬುಡ್ಲಿ ಅಂತವ ಯಣಗಾಡ್ತಿರ್ತನೆ. ಒಂದೊಂದಿಸ ಡಾಕ್ಟ್ರು ರಜ ಅಂತಲೋ, ಮೀಟಿಂಗು ಅಂತಲೋ ಆಸ್ಪತ್ರಿಗೆ ಬರದೇ ಇಲ್ಲ. ಅವತ್ತು ಜನ ನೋಡಕೆ ಇನ್ವಬ್ಬ ಡಾಕ್ಟಿಲ್ಲ. ಅನುಕ್ಕೆ ಬೇಕಾದ ಔಸ್ತಿ ಸಿಗದಿಲ್ಲ. ಆಚೆ ಕಡೆ ಬರ್ಕೊಡ್ತರೆ. ನಾಯಿ ಕಡುದ್ರೆ ಔಸ್ತಿ ಕೊಡಕೆ ದುಡ್ ಕೊಡ್ಬೇಕು, ಆಸ್ಪತ್ರೇಲಿ ಒಂದ್ವಾರ್ದಿಂದ ನೀರಿಲ್ಲ, ಒಂದ್ ಪಾಣೆ, ಇಂಕಮ್ ಸರ್ಟಾಪೀಟ ಈಸ್ಕಳಕೆ ಲಂಚ ಕೊಡ್ಬೇಕು. ಬಸ್ ಸಾರ್ಜ ಏರುಸ್ತಲೇ ಇರ್ತರೆ. ಇನ್ನೇನ್ ಸಾದ್ನೆ ಮಾಡ್ಯವ್ನೆ ಏಳು? ಅದ್ಕೆ ನಾನೇಳದು ಯಡೂರಪ್ಪುನ್ ಸಾದ್ನೆ ಏನಪ್ಪಾ ಅಂದ್ರೆ ತಿಂಗ್ಳಿಗೊಂದ್ ಸಮಾವೇಶ ಮಾಡಿ ಸಾದ್ನೆ ಮಾಡಿದ್ದಿನಿ ಅಂತ ಬಾಸ್ನ ಮಾಡದು.

ಅಂಗಾರೆ ಯಾರಾರ ಅವ್ನಿಗೆ ಬುದ್ದಿ ಏಳ್ಬಾರ್ದೆ?

ಏಳರ್‍ಯಾರವ್ರೆ ಏಳು? ಸ್ವಾಮಿಗಳೇ ಏಳ್ಬೇಕು. ಅವ್ರಿಗ್ಯಲ್ಲ ದುಡ್ ಕೊಟ್ಟು ಬುಟ್ಕಂಡವ್ನೆ. ಅವ್ರು ಯಡೂರಪ್ಪ ಬಾಳ ಚನ್ನಾಗಿ ಕ್ಯಲ್ಸ ಮಾಡ್ತಾ ಅವ್ನೆ, ಯಡೂರಪ್ಪಾಕಿ ಜೈ ಅಂತಾ ಅವ್ರೆ

ಸ್ವಾಮಿಗೋಳೂ ಇಂತ ಮಟ್ಟಕ್ಕಿಳಿದ್ದರೆ?

ನಾನ್ಯಾಕೆ ಸುಳ್ಳೇಳ್ಳಿ. ಪೇಪ್ರೋದು ಗೊತ್ತಾಯ್ತುದೆ. ಆ ಸಿದ್ಗಂಗೆ ಸ್ವಾಮೀಜಿ ಯಡೂರಪ್ನೋರು ಚನ್ನಾಗಿ ಕ್ಯಲ್ಸ ಮಾಡ್ತಾ ಅವ್ರೆ, ಅದ್ಕೆ ಕ್ಯಲುವ್ರು ತ್ವಂದ್ರೆ ಕೊಡ್ತಾ ಅವ್ರೆ, ನಾನು ಯಡೂರಪ್ನೋರ್ ಪರ್ವಾಗಿದ್ದಿನಿ ಅಂದವ್ರೆ.

ಮತ್ತೆ ಇನ್ನೊಂದಿನಿ ಏಳ್ಕೆ ಕೊಟ್ಟು ನಾನಂಗಂದಿಲ್ಲ, ನಮ್ಗೆ ಯಲ್ಲಾ ಪಕ್ಷದೋರೂ ಬೇಕು, ಯಾರು ವಳ್ಳೆ ಕ್ಯಲ್ಸ ಮಾಡಿದ್ರೂ ಒಗುಳ್ತೀನಿ ಅಂದವ್ರೆ.

ಒಂದಿನ ಅಂಗನ್ನದು, ಇನ್ನೊಂದಿನ ಇಂಗನ್ನದು ಇದ್ಕೆ ಬ್ಯಲಿದ್ದತೆ? ಈಗ ಪರ್ವಾಗಿ ಏಳ್ಕೆ ಕೊಟ್ಟುದ್ದ ಓದಿ, ಇಲ್ಲ ಅಂದ್ ಮ್ಯಾಲೆ ಬಂದಿರದ ಯರೂ ಓದದೇ ಇದ್ರೆ ಏನಾಗ್ತಿಯ?

ಅದ್ಕೆ ನಾನೇಳದು, ಮಾತಾಡದೇ ಯಡೂರಪ್ಪುನ್ ಸಾದ್ನೆ, ಅದ ಬುಟ್ರೆ ಏನೂ ಇಲ್ಲ ಅಂತವ.

ಸಂಪಾದಕೀಯ

ಪುಟ 3 ರಿಂದ

ಸರ್ಕಾರದ ಕೈಕಟ್ಟಿಹಾಕಿದೆ. ಬಜೆಟ್ ಕೊರತೆಯನ್ನು ಹಂತಹಂತವಾಗಿ ಕಡಿತಗೊಳಿಸಬೇಕೆಂಬುದೇ ವಿಶ್ವಬ್ಯಾಂಕ್‌ನ ಆಜ್ಞೆ.

ಹೀಗಿರುವಾಗ ಈ ಸರ್ಕಾರ ಸಂಘ ಪರಿವಾರದ ಅಜೆಂಡಾಗಳನ್ನು ಕಡೆಗಣಿಸಿಲ್ಲ.

ಅತ್ಯಂತ ನಾಜೂಕಾಗಿ ಸಂಘ ಪರಿವಾರದ ಸಂಸ್ಥೆಗಳಿಗೆ ಸರ್ಕಾರದ, ಸಾರ್ವಜನಿಕ ಭೂಮಿಯನ್ನು ನೀಡುತ್ತೇವೆ. ಸಾವಯವ, ಗೋಶಾಲೆ, ಔಷದೀಯ ಸಸ್ಯ ಬೆಳೆಸುವ ಹೆಸರಿನಲ್ಲಿ ಭೂಮಿ, ಹಣವನ್ನು ದಾನ ಮಾಡುತ್ತಿದೆ. ಅಲ್ಪಸಂಖ್ಯಾತರ ಅಭಿವೃದ್ಧಿಗೆ ಎಂದು ಹಣ ನೀಡಿರುವುದು ಒಂದೆಡೆ ಅಲ್ಪಸಂಖ್ಯಾತರ ಮೇಲೆ ಕೋಮುವಾದೀ ಧಾಳಿ ನಡೆಸಿ ಇನ್ನೊಂದೆಡೆ ಮತ ಸೆಳೆಯಲು 'ಸಾಂತ್ವನ' ಹೇಳುವ ಆಮಿಷವಾಗಿದೆ.

ಈ ಸರ್ಕಾರಕ್ಕೆ ಅಂಟಿರುವ ಭ್ರಷ್ಟ, ಹಗರಣಗಳ ಜನವಿರೋಧಿ ಕಳಂಕಗಳನ್ನು ತೊಳೆದುಕೊಳ್ಳಲು ಈ ಬಜೆಟ್ ಮೂಲಕ ಯತ್ನಿಸಲಾಗಿದೆ. ಜನಪ್ರಿಯ ಘೋಷಣೆಗಳಿಂದ ಜನರ ಕಣ್ಣಿಗೆ ಮಣ್ಣೆರಚಿ ಬರಲಿರುವ ಮಧ್ಯಂತರ ಚುನಾವಣೆಯಲ್ಲಿ ಮತ ಸೆಳೆಯುವ ದಿಕ್ಕಿನಲ್ಲಿದೆ. ಇದು ಪೂರ್ಣ ವಂಚನೆಗಳ ವರಸೆಯೇ ಆಗಿದೆ. ○

ಸುಂಕ ರಹಿತ ರೇಷ್ಮೆ ಆಮದು ವಿರೋಧಿಸಿ ರೇಷ್ಮೆ ರೈತರ ಬೃಹತ್ ಪ್ರತಿಭಟನೆ

ಚೀನಾ ದೇಶದಿಂದ ಸುಂಕರಹಿತ ರೇಷ್ಮೆ ಆಮದು ಮಾಡಿಕೊಳ್ಳುವ ಕೇಂದ್ರ ಸರ್ಕಾರದ ಅಪಾಯಕಾರಿ ನಿಲುವಿನ ವಿರುದ್ಧ ದಕ್ಷಿಣ ಭಾರತ ಮಟ್ಟದ ಬೃಹತ್ ಪ್ರತಿಭಟನೆ ನಡೆದಿದೆ.

-ಒಂದು ವರದಿ **ಬಿ. ಯಶವಂತ್**

ದಕ್ಷಿಣ ಕರ್ನಾಟಕ ರೈತರ ಬದುಕಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವ ರೇಷ್ಮೆ ಕೃಷಿ ಯು.ಪಿ.ಎ. ನೇತೃತ್ವದ ಕೇಂದ್ರ ಸರ್ಕಾರದ ಸುಂಕ ರಹಿತ ಆಮದು ನೀತಿಯಿಂದ ಅಪಾಯಕ್ಕೆ ಒಳಗಾಗುತ್ತಿದೆ. ಇಡೀ ದೇಶದ ಶೇ.50 ರಷ್ಟು ರೇಷ್ಮೆ ಉತ್ಪಾದಿಸುವ ಕರ್ನಾಟಕದ ಪ್ರಮುಖ ರೇಷ್ಮೆ ಬೆಳೆಯುವ ಜಿಲ್ಲೆಗಳಾದ ಕೋಲಾರ, ಚಿಕ್ಕಬಳ್ಳಾಪುರ ರಾಮನಗರ, ಮಂಡ್ಯ ಸೇರಿದಂತೆ ತಮಿಳುನಾಡು, ಆಂಧ್ರ ಪ್ರದೇಶದ ಸಾವಿರಾರು ರೈತರು ಯು.ಪಿ.ಎ ಸರ್ಕಾರದ ರೇಷ್ಮೆ ನೀತಿಯನ್ನು ಪ್ರತಿಭಟಿಸಿ ಬೆಂಗಳೂರಿನ ಕೇಂದ್ರ ರೇಷ್ಮೆ ಮಂಡಳಿ ಕಛೇರಿ ಎದುರು ಬೃಹತ್ ಮೆರವಣಿಗೆ ಮತ್ತು ಬಹಿರಂಗ ಸಭೆ ನಡೆಸಿ ಸುಂಕ ರಹಿತ ರೇಷ್ಮೆ ಆಮದನ್ನು ನಿಲ್ಲಿಸಲು ಆಗ್ರಹಿಸಿದರು,

ಸುಂಕ ರಹಿತ ರೇಷ್ಮೆ ಆಮದು ಅಖಿಲ ಭಾರತ ಹೋರಾಟ ಸಮಿತಿ ಸಂಘಟಿಸಿದ್ದ ಈ ಪ್ರತಿಭಟನಾ ಕಾರ್ಯಕ್ರಮದಲ್ಲಿ ಸುಡು ಬೇಸಿಗೆ ಬಿಸಿಲನ್ನು ಲೆಕ್ಕಿಸದೆ ಮಡಿವಾಳ ವೃತ್ತದಲ್ಲಿ ಜಮಾಯಿಸಿದ ಸುಮಾರು 5 ಸಾವಿರದಷ್ಟಿದ್ದ ರೇಷ್ಮೆ ಬೆಳೆಗಾರರು, ಬಿಚ್ಚಣಿಕೆದಾರರು, ಮಾಟ್ಟೆ ತಯಾರಕರು, ನೇಕಾರರು ಇನ್ನಿತರ ರೇಷ್ಮೆ ಉದ್ದಿಮೆದಾರರು ಸರ್ಕಾರದ ವಿರುದ್ಧ ಘೋಷಣೆ ಹಾಕಿ 2010 ರ ಆಗಸ್ಟ್ 10 ರಂದು ಹೊರಡಿಸಿರುವ 2500 ಮೆಟ್ರಿಕ್‌ಟನ್ ಸುಂಕ ರಹಿತವಾಗಿ ರೇಷ್ಮೆ ಆಮದು ಮಾಡಿಕೊಳ್ಳುವ ಗೆಜೆಟ್ ನೋಟಿಫಿಕೇಷನ್ ಅನ್ನು ರದ್ದು ಗೊಳಿಸಿ ಇಡೀ ದೇಶಕ್ಕೆ ಅಗತ್ಯವಿರುವ ರೇಷ್ಮೆ ಉತ್ಪಾದನೆಯಲ್ಲಿ ಸ್ವಾವಲಂಬನೆ ಪಡೆದುಕೊಳ್ಳಲು ಅಗತ್ಯ ನೀತಿಗಳನ್ನು ರೂಪಿಸಬೇಕೆಂದು ಒತ್ತಾಯಿಸಿದರು.

ಮಡಿವಾಳ ವೃತ್ತದಿಂದ ಆರಂಭವಾದ ಮೆರವಣಿಗೆ ಕೇಂದ್ರ ರೇಷ್ಮೆ ಮಂಡಳಿ ಎದುರು ಬೃಹತ್ ಬಹಿರಂಗ ಸಭೆಯಾಗಿ ಕೇಂದ್ರ ರೇಷ್ಮೆ ಮಂಡಳಿ ಸಧಸ್ಯರು ಸಿ.ಪಿ.ಐ(ಎಂ) ನ ಲೋಕಸಭಾ ಸದಸ್ಯರು ಆದ ಬಸುದೇವ್ ಆಚಾರ್ಯ, ಎ.ಐ.ಕೆ.ಎಸ್. ನ ಅಖಿಲಭಾರತ ಪ್ರಧಾನ ಕಾರ್ಯದರ್ಶಿ ಕೆ.ವರದರಾಜನ್ ಸೇರಿದಂತೆ ಹಲವು ಮುಖಂಡರುಗಳ ಮಾತನ್ನು ಆಲಿಸಿತು.






ರೇಷ್ಮೆ ಆಮದು ಎಲ್ಲಿಂದ ಎಂಬುದಲ್ಲ ಮುಖ್ಯ:

ಸಭೆಯನ್ನು ಉದ್ದೇಶಿಸಿ ಮಾತಾನಾಡಿದ ಬಸುದೇವ್ ಆಚಾರ್ಯ, ಕೇಂದ್ರದ ನೀತಿಯನ್ನು ಉಗ್ರವಾಗಿ ಖಂಡಿಸಿ, ರಾಸಾಯನಿಕಗಳು, ರಸಗೊಬ್ಬರ ಇನ್ನಿತರ ವಸ್ತುಗಳ ಬೆಲೆ ನಿರಂತರವಾಗಿ ಹೆಚ್ಚಳಗೊಳ್ಳುತ್ತಿರುವಾಗ ಇನ್ನೊಂದು ಕಡೆ ರೇಷ್ಮೆ ಗೂಡಿನ ಬೆಲೆ ಕುಸಿಯುತ್ತಿರುವುದು ಲಕ್ಷಾಂತರ ರೈತರ, ಬಿಚ್ಚಣಿಕೆದಾರರನ್ನು ನಷ್ಟಕ್ಕೆ ಗುರಿಮಾಡುವುದಲ್ಲದೆ ದೈನಂದಿನ ಜೀವನದ ಮೇಲೆ ಕರಾಳ ಪರಿಣಾಮವನ್ನು ಉಂಟುಮಾಡಲಿದೆ. ಈ ವಿಷಯವನ್ನು ಕೇಂದ್ರದ ಹಣಕಾಸು ಸಚಿವರ ಬಳಿ ಚರ್ಚಿಸಿದಾಗ ಅವರು ರೇಷ್ಮೆಯನ್ನು ಆಮದು ಮಾಡಿಕೊಳ್ಳುತ್ತಿರುವುದು ಅಮೇರಿಕಾದಿಂದ ಅಲ್ಲ ಚೀನಾದಿಂದ ಎಂದು ಬೇಜಾವಾಬ್ದಾರಿಯಿಂದ ವರ್ತಿಸಿದರು. ಸರಕು ಎಲ್ಲಿಂದ ಬರುತ್ತದೆ ಎನ್ನುವುದು ನಮಗೆ ಮುಖ್ಯ ಅಲ್ಲ, ನಮ್ಮ ದೇಶಿಯ ಉತ್ಪಾದನೆ ಮೇಲೆ ಬೀರುವ ಪರಿಣಾಮ ಮುಖ್ಯವಾದದ್ದು ನಮ್ಮ ಉತ್ಪಾದನೆ ವೆಚ್ಚಕ್ಕಿಂತ ಕಡಿಮೆ ದರದ ರೇಷ್ಮೆ ಇಲ್ಲಿಗೆ ಬಂದರೆ ದೇಶಿಯ ಉತ್ಪಾದನೆಗೆ ಬೇಡಿಕೆ ಕುಸಿದು ಅಪಾರ ಪ್ರಮಾಣದ ನಿರುದ್ಯೋಗವನ್ನು ಸೃಷ್ಟಿಸಲಿದೆ ಎಂದು ವಿವರಿಸಿದ್ದಾಗಿ ತಿಳಿಸಿದರು.


ಈ ವಿಷಯವನ್ನು ಬಜೆಟ್ ಅಧಿವೇಶನದಲ್ಲಿ ಸುಂಕ ರಹಿತ ರೇಷ್ಮ ಅಮದು ನೀತಿ ನಿಲ್ಲಿಸಲು ಒತ್ತಾಯಿಸುವುದಾಗಿ ಪ್ರತಿಭಟನಾಕಾರರ ಭಾರೀ ಕರತಾಡನದ ಪ್ರತಿಕ್ರಿಯೆಯೊಂದಿಗೆ ತಿಳಿಸಿದರು.


ಈ ಸಂದರ್ಭದಲ್ಲಿ ಮಾತಾನಾಡಿದ ಎಐಕೆಎಸ್ ನ ಪ್ರಧಾನ ಕಾರ್ಯದರ್ಶಿ ಕೆ. ವರದರಾಜನ್ ರವರು, ಕೇಂದ್ರ ಸರ್ಕಾರ 2ಜಿ, 3ಜಿ ವ್ಯವಹಾರದಲ್ಲಿ ಬಿಡುವುಇಲ್ಲದೆ ತೊಡಗಿಕೊಂಡಿರುವುದರಿಂದ ರೈತರ ಸಮಸ್ಯೆಗಳನ್ನು ಪರಿಹರಿಸಲು ಸಮಯವಿಲ್ಲ ಎಂದು ಕುಟುಕಿದರು ಇಡೀ ದೇಶದ ಜನ ಬೆಲೆಏರಿಕೆಯಿಂದ ತತ್ತರಿಸುತ್ತಿರುವಾಗ ಕೃಷಿ ಉತ್ಪನ್ನಗಳ ಬೆಲೆ ಕುಸಿಯುತ್ತಿರುವುದು ಸರ್ಕಾರದ ಬಂಡವಾಳಶಾಹಿ ಪರವಾದ ಧೋರಣೆಯನ್ನು ತೋರುತ್ತದೆ. ಅಮದು ನೀತಿ ಅಥವಾ ರಫ್ತು ನೀತಿ ಈ ಎರಡರಿಂದಲೂ ದೊಡ್ಡ ದೊಡ್ಡ ವ್ಯಾಪಾರಸ್ಥರಿಗೆ, ಕಾರ್ಖಾನೆಗಳ ಮಾಲೀಕರಿಗೆ ಅನುಕೂಲ ಆಗುತ್ತಿದೆ ಹೊರತು ರೈತರಿಗೆ ಅಲ್ಲ ಎಂದರು. ಮಾರ್ಚ್ 11 ರಂದು ನಡೆಯುವ 'ಪಾರ್ಲಿಮೆಂಟ್ ಚಲೋ' ನಲ್ಲಿ ಈ ಬೇಡಿಕೆ ಇಡುವುದಾಗಿ ತಿಳಿಸಿ 2 ಕೋಟಿಗೂ ಹೆಚ್ಚು ಸದಸ್ಯರಿರುವ ಎ.ಐ.ಕೆ.ಎಸ್.ನ ಬೆಂಬಲವನ್ನು ಘೋಷಿಸಿದರು.


ಮನವಿ ಪತ್ರ ಸಲ್ಲಿಕೆ

ಪ್ರಾಸ್ತಾವಿಕವಾಗಿ ಮಾತಾನಾಡಿದ ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನಕಾರ್ಯದರ್ಶಿ ಹಾಗೂ ಸುಂಕ ರಹಿತ ರೇಷ್ಮೆ ಅಮದು ವಿರೋಧಿಸಿ ಅಖಿಲ ಭಾರತ ಹೋರಾಟ ಸಮಿತಿ ಸಂಘಟನಾ ಸಂಚಾಲಕ ಜಿ.ಸಿ ಬಯ್ಯಾರೆಡ್ಡಿ, ನಮ್ಮ ದೇಶದ ಬೇಡಿಕೆ 26 ಸಾವಿರ ಮೆಟ್ರಿಕ್ ಟನ್ ಇದ್ದು ಸದ್ಯ 19 ಸಾವಿರ ಮೆಟ್ರಿಕ್ ಟನ್ ಉತ್ಪಾದನೆ ಆಗುತ್ತಿದೆ. ಇದರ ಜೊತೆಗೆ 2500 ಮೆಟ್ರಿಕ್ ಟನ್ ಸುಂಕ ರಹಿತವಾಗಿ ಆಮದು ಮಾಡಿಕೊಳ್ಳುವ ನಿರ್ಧಾರ ಬಂದ ತಕ್ಷಣವೇ ಅಖಿಲ ಭಾರತ ಸಭೆ ನಡೆಸಿ ಸುಂಕ ರಹಿತ ರೇಷ್ಮೆ ಆಮದು ವಿರೋಧಿಸಿ ಅಖಿಲ ಭಾರತ ಹೋರಾಟ ಸಮಿತಿ ರಚಿಸಿ ಕೊಂಡು ಸಂಬಂಧಿಸಿದ ಎಲ್ಲರಿಗೂ ಈ ಸಮಸ್ಯೆ ಬಗ್ಗೆ ಗಮನ ಸೆಳೆದು ನಂತರ ಜಿಲ್ಲಾ, ತಾಲ್ಲೂಕು ಸಮಾವೇಶಗಳನ್ನು ನಡೆಸಿ, ಈ ಹೋರಾಟದ ಮುಂದುವರೆದ ಭಾಗವಾಗಿ ಈ ಪ್ರತಿಭಟನಾ ರ್‍ಯಾಲಿ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.


ಬಸುದೇವ ಆಚಾರ್ಯ


ಕೆ.ವರದರಾಜನ್


ಸಿ.ನಾರಾಯಣಸ್ವಾಮಿ


ಜಿ.ವಿ.ಶ್ರೀರಾಮರೆಡ್ಡಿ


ಜಿ.ಸಿ.ಬಯ್ಯಾರೆಡ್ಡಿ

ಸಭೆ ಉದ್ದೇಶಿಸಿ ಮಾತಾನಾಡಿದ ಸಿ.ಪಿ.ಐ.(ಎಂ) ಮಾಜಿ ಶಾಸಕ ಜಿ.ವಿ.ಶ್ರೀರಾಮರೆಡ್ಡಿರವರು, ಆಮದು ಸುಂಕ ಮತ್ತು ಸುರಿ ವಿರೋಧಿ ಸುಂಕವನ್ನು ತೆಗೆಯುವುದು ರೈತರನ್ನು ಆತ್ಮಹತ್ಯೆಗೆ ತಳ್ಳುವ ಪ್ರಯತ್ನವಾಗಿದೆ. ನೇಕಾರರಿಗೆ ಈ ಅಮದು ಕ್ರಮದಿಂದ ಅನುಕೂಲವಾಗುತ್ತದೆ ಎನ್ನುವುದು ಅಪ್ಪಟ ಸುಳ್ಳು ಶೇ 90 ರಷ್ಟು ನೇಕಾರರು ಮಾಲೀಕರ ಬಂಧನದಲ್ಲಿ ಕೆಲಸ ಮಾಡುವ ಜೀತದಾಳುಗಳು. ನಿಜವಾಗಿ ಪ್ರಯೋಜನವಾಗುವುದು ದೊಡ್ಡ ದೊಡ್ಡ ವ್ಯಾಪಾರಸ್ಥರಿಗೆ ಮತ್ತು ಕೈಗಾರಿಕೆಗಳ ಮಾಲೀಕರಿಗೆ. ಬಿಜೆಪಿ ಸರ್ಕಾರ, ಯುಪಿಎ ಸರ್ಕಾರ ಎರಡೂ ರೈತರ ವಿರೋದಿಯಾಗಿ ಕೆಲಸಮಾಡುತ್ತಿವೆ ಎಂದು ತಿಳಿಸಿದರು.

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರಾದ ಮಾರುತಿ ಮಾನ್ಪಡೆ ಮಾಜಿ ಸಂಸದ ಸಿ. ನಾರಾಯಣಸ್ವಾಮಿ ಸೇರಿದಂತೆ ಸುಂಕ ರಹಿತ ರೇಷ್ಮೆ ಅಮದು ವಿರೋದಿ ಹೋರಾಟ ಸಮಿತಿಯ ಮುಖಂಡರುಗಳು ಈ ಸಂದರ್ಭದಲ್ಲಿ ಮಾತಾನಾಡಿದರು.

ಕೇಂದ್ರ ರೇಷ್ಮೆ ಮಂಡಳಿ ಅಧ್ಯಕ್ಷರು ಪ್ರತಿಭಟನೆ ಸ್ಥಳಕ್ಕೆ ಬಂದು ಮನವಿ ಪತ್ರ ಸ್ವೀಕರಿಸಿ ಪ್ರಧಾನ ಮಂತ್ರಿ ಜೊತೆ ಚರ್ಚಿಸುವುದಾಗಿ ತಿಳಿಸಿದರು. ಬೇಡಿಕೆ ಈಡೇರಿಸದಿದ್ದರೆ, ಮುಂದಿನ ಹೋರಾಟಗಳನ್ನು ತೀವ್ರಗೊಳಿಸುವುದಾಗಿ ಈ ಸಂದರ್ಭದಲ್ಲಿ ರೈತರು ಎಚ್ಚರಿಸಿದರು.

ಶೋಷಿತರ ಗಟ್ಟಿ ದನಿ ಶೂದ್ರ ತಪಸ್ವಿ

ಹಸಿ ಹಸಿ ಜಾತಿ ಪೋಷಣೆಯ ರಾಮಾಯಣಕ್ಕೆ ಕುವೆಂಪು ಚಿಕಿತ್ಸಕ ಕಲಾಸೃಷ್ಟಿ

♦ ಜಯ

1944ರಲ್ಲಿ ಕುವೆಂಪು ರಚಿಸಿದ 'ಶೂದ್ರ ತಪಸ್ವಿ' ನಾಟಕಕ್ಕೆ ರಾಮಾಯಣದ ಒಂದು ತುಣುಕನ್ನು ಕಥೆಯಾಗಿ ಆಯ್ದುಕೊಂಡಿದ್ದಾರೆ. ಶೂದ್ರ ತಪಸ್ವಿ ನಾಟಕ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಬಹುಮುಖ್ಯವಾಗಿದ್ದು ಶೋಷಿತರ ಗಟ್ಟಿದನಿಯಾಗಿ ಹೊರಹೊಮ್ಮುತ್ತಲೇ ಅಂದಿನ ಮೇಲ್ವರ್ಗದ ಘಟಾನುಘಟಿ ಸಾಹಿತಿ, ಟೀಕಾಕಾರರ ವಾಗ್ದಾಳಿ ಮತ್ತು ಅಸಡ್ಡೆಗಳನ್ನು ಧೂಳಿಪಟ ಮಾಡಿ ಒಂದು ಅದ್ಭುತ ಕೃತಿಯಾಗಿ, ಕೆಳವರ್ಗದ ಜನತೆಯ ಆತ್ಮಸ್ಥೈರ್ಯವಾಗಿ ನಿಂತಿದೆ.

ಶೂದ್ರ ಶಂಬೂಕನ ತಲೆ ಉರುಳಿಸುವ ಮೂಲ ರಾಮಾಯಣ:

ಮೂಲ ರಾಮಾಯಣ ಕಾವ್ಯದಲ್ಲಿ ಶ್ರೀರಾಮ ಸೀತೆಯನ್ನು ಕಾಡಿಗಟ್ಟಿದ ನಂತರ ವೃದ್ಧ ಬ್ರಾಹ್ಮಣನೊಬ್ಬ ತನ್ನ ಮೃತ ಬಾಲಕನನ್ನು ಹೊತ್ತು ತಂದು ರಾಮನ ಅರಮನೆಯ ಮುಂದೆ ಗೋಳಿಡುತ್ತಾನೆ. ರಾಮ ರಾಜ್ಯದಲ್ಲಿ ಶೂದ್ರ ಶಂಬೂಕನು ತಪಸ್ಸು ಮಾಡುತ್ತಿರುವುದರಿಂದಲೇ ತನ್ನ ಮಗನಿಗೆ ಸಾವುಂಟಾಗಿದೆ ಎನ್ನುತ್ತಾನೆ. ರಾಮ ಶೂದ್ರ ಶಂಬೂಕನನ್ನು ಹುಡುಕಿ ತನ್ನ ಖಡ್ಗದಿಂದ ಶಂಬೂಕನ ತಲೆ ಕಡಿಯುತ್ತಾನೆ. ಈ ಕಾರ್ಯವನ್ನು ಗಮನಿಸಿ ಇಂದ್ರಾದಿಗಳೆಲ್ಲ ರಾಮನ ಧರ್ಮಪಾಲನೆಗಾಗಿ ಮನಮೆಚ್ಚಿ, ರಾಮನಿಗೆ ವರ ನೀಡುತ್ತಾರೆ. ರಾಮ ಆ ವರದಿಂದ ಸತ್ತಿರುವ ಬ್ರಾಹ್ಮಣ ಬಾಲಕನನ್ನು ಬದುಕಿಸಿಕೊಳ್ಳುತ್ತಾನೆ.

ಶೂದ್ರ ತಪಸ್ವಿಯ ಹಿಂದಿರುವ ಸೃಜನಶೀಲ ಪ್ರತಿಭೆ:

ಕುವೆಂಪು ಮೂಲ ರಾಮಾಯಣದಲ್ಲಿರುವ ರಾಮನನ್ನು ಜೀವ-ವಿರೋಧಿ ಮನೋಗುಣದಿಂದ ಶೂದ್ರ ತಪಸ್ವಿಯಲ್ಲಿ ಬಿಡುಗಡೆಗೊಳಿಸಿ ರಾಮ ಮತ್ತು ಬ್ರಾಹ್ಮಣನ ಮನ:ಪರಿವರ್ತನೆಗೊಳಿಸುತ್ತಾರೆ. ಮೃತ್ಯುವನ್ನು ಅಥವಾ ಮನುಷ್ಯ-ವಿರೋಧಿ ಧರ್ಮವನ್ನು ಮನುಷ್ಯ ಧರ್ಮ ಗೆಲ್ಲಬೇಕು ಎಂಬ ನಾಟಕ ಆಶಯ ಭಿತ್ತಿಗೊಳ್ಳುತ್ತದೆ. ಕುವೆಂಪು ಜಾತಿಯ ವಿಷ ಬೀಜ ಬಿತ್ತುವ ಮೂಲ ರಾಮಾಯಣಕ್ಕೆ ವಿಶ್ವಪಥದ ಉಸಿರು ತುಂಬುತ್ತಾರೆ.

ನಾಟಕದ ಪ್ರಮುಖ ಮೂರು ದೃಶ್ಯಗಳಲ್ಲಿ ಮೊದಲಿಗೆ, ಮೃತ್ಯುವು ಕೂಡ ಒಂದು ಪಾತ್ರವಾಗಿ ಬರುವ, ಅರಣ್ಯ ಕಾಯುವ ವೃಕ್ಷ ಭೈರವನೊಂದಿಗೆ ಸಂಘರ್ಷಿಸುವ ದೃಶ್ಯ ರೋಚಕವಾಗಿ ಮೂಡಿಬಂದಿದೆ. ಶೂದ್ರ ಶಂಬೂಕ ಋಷಿಯು ತಪಸ್ಸು ಮಾಡುತ್ತಿರುವ ಅರಣ್ಯದೊಳಕ್ಕೆ ಪ್ರವೇಶಿಸುವ



ಶೂದ್ರ ತಪಸ್ವಿ -ನಿನಾಸಂ ತಂಡದ ಒಂದು ಪ್ರಯೋಗ

ಮೃತ್ಯುವನ್ನು ಅರಣ್ಯ ರಕ್ಷಕ ತಾನೆಂದು ಅಪ್ಪಣೆಯಿಲ್ಲದೆ ಪ್ರವೇಶಿಸಕೂಡದೆಂದು ವೃಕ್ಷ ಭೈರವ ತಡೆಯುತ್ತಾನೆ. ಶೂದ್ರ ತಪಗೈಯುತ್ತಿರುವುದು ಅಧರ್ಮವೆಂಬಂತೆ ಬ್ರಾಹ್ಮಣ ಬಾಲಕ ಅದನ್ನು ನೋಡಿರುವುದರಿಂದ ಮೃತ್ಯುವು ಒಳಹೋಗುವುದು ಅನಿವಾರ್ಯವೆನ್ನುತ್ತಾ ಮೆಲ್ಲ ಮೆಲ್ಲನೆ ಕರಿಮಂಜಾಗಿ ಆಶ್ರಮದ ಕಡೆ ಚಲಿಸುತ್ತದೆ. ಭೈರವನಿಗೆ ರೋಷವುಕ್ಕಿ 'ಶಿವ ಶಿವಾ! ಏನ್ ಭಯಂಕರಂ ಪಾಪಂ, ಶ್ರೀರಾಮನಾಳು ತಿಪ್ಪೀರ್ ಧರ್ಮರಾಜ್ಯದೊಳ್!' ಎಂದು ಹಲುಬುತ್ತಾನೆ.

ಎರಡನೆಯ ದೃಶ್ಯದಲ್ಲಿ ಬ್ರಾಹ್ಮಣನೊಬ್ಬ ರೋದಿಸುತ್ತಾ ಶ್ರೀ ರಾಮಚಂದ್ರನ ಅಯೋಧ್ಯೆಯ ಬಳಿಯ ಉದ್ಯಾನವನದಲ್ಲಿ, ಮಗನ ದುರ್ಮರಣ ರಾಮರಾಜ್ಯದಲ್ಲಿ ಅಧರ್ಮವನ್ನು ಹುಟ್ಟು ಹಾಕುತ್ತಿದೆ ಎಂದು ಬೊಬ್ಬಿಡುತ್ತಾನೆ. ಅಲ್ಲಿಗೆ ಬರುವ ರಾಮ ಬ್ರಾಹ್ಮಣ ನನ್ನುದ್ದೇಶಿಸಿ 'ನೀಂ ಏನಾದೊಡಂ ಅಪೂಜ್ಯ ಗೆಯ್ದಿರೇನ್' ಎಂದಾಗ ಬ್ರಾಹ್ಮಣ ಹೆದರಿ ತೊದಲುತ್ತಾ, ಈ ಅಪರಾಧಕ್ಕೆ ಮೂಲ ರಾಮನೇ ಎನ್ನುತ್ತಾನೆ. ಶೂದ್ರ ತಪಸ್ವಿಯ ದರ್ಶನದ ಫಲವಾಗಿ ನನ್ನ ಮಗನಿಗೆ ಮರಣ ಉಂಟಾಗಿದೆ ಎನ್ನುತ್ತಾನೆ. ರಾಮರಾಜ್ಯದಲ್ಲಿ ತಪಸ್ಸು, ವೇದಧ್ಯಯನ, ದರ್ಶನ ಎಲ್ಲವೂ ತನ್ನ ವರ್ಗಕ್ಕೆ ಮಾತ್ರ ಮೀಸಲು, ಶೂದ್ರ ತಪಸ್ಸು ಒಂದು ಅಧರ್ಮ ಎನ್ನುವುದು ಬ್ರಾಹ್ಮಣನ ಅಭಿಪ್ರಾಯ. ಕುವೆಂಪುರವರ ರಾಮ ಬ್ರಾಹ್ಮಣನ ಮಾತಿಗೆ ಪ್ರತ್ಯುತ್ತರವನ್ನು ಮನಸ್ಸಿನಲ್ಲಿ ಯೋಚಿಸುತ್ತಾನೆ: ವರ್ಣ ಗರ್ವಾಂಧಂಗೆ ಈ ಶಾಸ್ತ್ರ ಮೂರ್ಖ ಂಗೆಂತು ಬುದ್ದಿಗಲಿಪೆನ್!'. ಅವನ ಒಡಗೂಡಿ ಪುಷ್ಪಕ ವಿಮಾನವೇರಿ ಹೊರಡುತ್ತಾನೆ.

ಮೂರನೆಯ ದೃಶ್ಯದಲ್ಲಿ, ಮಹಾತಪಸ್ಸಿನಲ್ಲಿರುವ ಶಂಬೂಕ ಮಹರ್ಷಿ ಆಶ್ರಮಕ್ಕೆ ಶ್ರೀರಾಮ, ಬ್ರಾಹ್ಮಣನ ಪ್ರವೇಶವಾಗುತ್ತದೆ. ತಪೋಗುಣ, ಶಾಂತಿನೆಲೆಸಿರುವ ವಾತಾವರಣ ಕಂಡು ಶ್ರೀರಾಮ ಭಾವಪರವಶನಾಗಿ ಶಂಬೂಕ ಋಷಿಗೆ ಶ್ರೀರಾಮ ಕೈಮುಗಿಯುತ್ತಿದ್ದರೆ, ರೋಷವುಕ್ಕಿದ ಬ್ರಾಹ್ಮಣ ರೋದಿಸುವ ನಾಟಕವಾಡುತ್ತಾ ಶಂಬೂಕನ ಶಿರಚ್ಛೇದ ಮಾಡಬೇಕೆಂದು ಅಲವತ್ತು ಮಾಡುತ್ತಾನೆ. ರಾಮ ಬ್ರಾಹ್ಮಣನಿಗೆ ಕೆಲ ಪ್ರಶ್ನೆ ಹಾಕುತ್ತಾನೆ: ತಪಸ್ಸುಗೈಯುವವನು ಪೂಜ್ಯನಲ್ಲವೇ? ಈ ತಪಸ್ವಿಯಂ ಕೊಲ್ವುದುಂ ಪಾಪಮಾಗದೆ?

ಅದಕ್ಕೆ ಬ್ರಾಹ್ಮಣ 'ನಾಯಿಯ ಹಾಲಿಗೆ ಈ ಶೂದ್ರನ ತಪಸ್ಸು ಸಮ' ಎಂದಾಗ ರಾಮ ವ್ಯಂಗ್ಯದಿಂದ 'ಸಾರ್ಥಕವಾಯ್ತು ನೀ ಕಲಿತ ವಿದ್ಯೆ ಆಚಾರ್ಯ' ಎನ್ನುತ್ತಾನೆ. ಬ್ರಾಹ್ಮಣನನ್ನು ಸಂತೈಸಲು ರಾಮ ಶಸ್ತ್ರ ಹೂಡಲು ನಿರ್ಧರಿಸಿದಾಗಲೂ, ತೊಡುವುದಿದ್ದರೆ ಬ್ರಹ್ಮಾಸ್ತ್ರವನ್ನೇ ತೊಡಬೇಕು ಎಂದು ಬ್ರಾಹ್ಮಣ ಪಟ್ಟು ಹಾಕುತ್ತಾನೆ. ಕುವೆಂಪು ರಾಮನ ಜಿಜ್ಞಾಸೆಯನ್ನು ಇಲ್ಲಿ ಪರಿಹರಿಸುವ ಪರಿಯೇ ವಿಶಿಷ್ಟ. ತಾನು ಹೂಡುವ ಬ್ರಹ್ಮಾಸ್ತ್ರ ಅಧರ್ಮದ ವಿರುದ್ಧ ಹೋರಾಡಲಿ ಎನ್ನುತ್ತಾ ರಾಮ ಶಸ್ತ್ರ ಹೂಡುತ್ತಾನೆ. ಬ್ರಹ್ಮಾಸ್ತ್ರವು ಶಂಬೂಕ ತಪಸ್ವಿಯ ಬಳಿ ತೆರಳಿ ತಪೋಮಹಿಮೆಗೆ ನಮಿಸುತ್ತದೆ. ನಂತರ ಬ್ರಾಹ್ಮಣನೆಡೆಗೆ ತಿರುಗಿ ಧಾವಿಸತೊಡಗಿದಾಗ ಅಧರ್ಮಿ ಯಾರು ಎಂಬುದು ಬ್ರಾಹ್ಮಣನಿಗೆ ಅರಿವಾಗಿ ರಕ್ಷಣೆಗಾಗಿ ಬೊಬ್ಬಿಡುತ್ತಾನೆ.

ಅಂತಿಮವಾಗಿ ಬ್ರಹ್ಮಾಸ್ತ್ರವನ್ನು ಹಿಂಪಡೆಯುವ ವೇಳೆಗೆ ಬಾಲಕ ಬ್ರಾಹ್ಮಣನನ್ನು ಹುಡುಕುತ್ತಾ ಬರುತ್ತಾನೆ. ತನ್ನ ತಾತನೊಂದಿಗೆ ಹೂವು ತರಲು ಕಾಡಿಗೆ ಬಂದ ತಾನು ಮೂರ್ಛೆ ಹೋಗಿ ಪ್ರಜ್ಞೆ ಬರುವಷ್ಟರಲ್ಲಿ ದಾರಿ ತಪ್ಪಿದೆ ಎನ್ನುತ್ತಾನೆ ಬಾಲಕ. ಬಾಲಕ ಮತ್ತು ಬ್ರಾಹ್ಮಣರಿಬ್ಬರು ಶೂದ್ರ ಶಂಬೂಕ ತಪಸ್ವಿಗೆ ನಮಿಸುವ ದೃಶ್ಯದೊಂದಿಗೆ ನಾಟಕ ಮುಕ್ತಾಯಗೊಳ್ಳುತ್ತದೆ.

ಮೂಲ ರಾಮಾಯಣದಲ್ಲಿ ಶೂದ್ರ ಶಂಬೂಕನ ಮೇಲೆ ಧಾಳಿ ಮಾಡಿ ಜೀವ-ವಿರೋಧಿಯಂತೆ ರಾಮ ಅವನನ್ನು ಕೊಂದಿದ್ದರೆ, ಇಲ್ಲಿ ಕುವೆಂಪುರವರ ರಾಮ ಜೀವ-ಪರನಂತೆ, ಸತ್ಯದ ಅಸ್ತ್ರವಿಡಿದು ಮನ:ಪರಿವರ್ತನೆಗೆ ಸಾಕ್ಷಿಯಾಗುತ್ತಾನೆ.

ಶೂದ್ರ ತಪಸ್ವಿ ನಾಟಕ ರಂಗದ ಮೇಲೆ ತರಲು ಯಾವುದೇ ನಿರ್ದೇಶಕನಿಗೂ ಸವಾಲೇ ಸರಿ. ಕುವೆಂಪು ಅವರು ಈ ನಾಟಕವನ್ನು ರಂಗದ ಮೇಲೆ ತರಲು ಸ್ವತ: ಒಪ್ಪಿರಲಿಲ್ಲ. ಅವರೇ ಹೇಳಿರುವಂತೆ ಈ ನಾಟಕ ಆಡುವ ದೃಷ್ಟಿಯಿಂದ ನಿಷ್ಪ್ರಯೋಜಕ. ಅದರ ಚಿತ್ರಗಳ ಬೃಹತ್ತನ್ನೂ ಮಹತ್ತನ್ನೂ ಹೊರಗಡೆಯ ಅಲ್ಪವೇದಿಕೆಯ ಮೇಲೆ ಕೃತಕಾಭಿನಯದಿಂದ ಪ್ರದರ್ಶಿಸುವುದು ಅಸಾಧ್ಯ. ಆದ್ದರಿಂದ ಕಲ್ಪನಾ ತಪಸ್ಸಾಧ್ಯವಾದ ಮನೋರಂಗ ಭೂಮಿಯಲ್ಲಿ ಅದನ್ನು ಸೃಷ್ಟಿಸಿ ದೃಷ್ಟಿಸಬೇಕು?. ನಿರ್ದೇಶಕ ಬಸವಲಿಂಗಯ್ಯನವರು ಈ ಸವಾಲನ್ನು ಸಮರ್ಥ ನಿರ್ದೇಶನ ಕಲೆಯಿಂದ ಯಶಸ್ವಿಯಾಗಿ ನಿಭಾಯಿಸಿದ್ದಾರೆ ಎನ್ನಬಹುದು.

ಇತ್ತೀಚೆಗೆ ಬೆಂಗಳೂರಿನಲ್ಲಿ ಜರುಗಿದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ 'ಶೂದ್ರ ತಪಸ್ವಿ'ಯನ್ನು ಪ್ರದರ್ಶಿಸಲಾಯಿತು. ಶೂದ್ರ ತಪಸ್ವಿ ನಾಟಕವು ತುಸು ಹಳಗನ್ನಡ ಶೈಲಿಯದಾದರೂ ಪ್ರೇಕ್ಷಕ ವರ್ಗದ ಪ್ರಶಂಸೆಗೆ ಪಾತ್ರವಾಯಿತು. ಮಧ್ಯೆ ಮಧ್ಯೆ ಕಥೆಯನ್ನು ಅರ್ಥೈಸುವ ಕಥೆಗಾರರು, ಪಾತ್ರಗಳ ನೈಜ ಅನಾವರಣ, ಉಪಮೆಗಳ ಸಮರ್ಥ ಬಳಕೆಯ ಮೂಲಕ ನಿರ್ದೇಶಕರ ಚಾಮತ್ಕಾರಿಕ ಶೈಲಿಯಿಂದಾಗಿ ಸುಲಭವಾಗಿ ನೋಡುಗರನ್ನು ತಲ್ಲೀನಗೊಳಿಸಿದ್ದಷ್ಟೇ ಅಲ್ಲ, ಹಲವು ಬಾರಿ ಕರತಾಡನ ಶಿಳ್ಳೆ ಗಿಟ್ಟಿಸಿತು.

ಪುಟ 3 ರಿಂದ

ಸಾವಿರ ಸುಳ್ಳುಗಳ...ಸಮಾವೇಶ

ಸ್ಪರ್ಧಿಸಬಹುದು. ಸಾಧಾರಣ ರಾಜ್ಯಸಭೆಗೆ ರಾಜ್ಯಗಳಿಂದ ಪ್ರತಿನಿಧಿಸುವವರು ವಿವಿಧ ಕ್ಷೇತ್ರಗಳಲ್ಲಿ ಅಪಾರ ಅನುಭವ ಇರುವ, ವಿಶಿಷ್ಟ ಕೊಡುಗೆ ನೀಡಬಲ್ಲ ಚಿಂತನಾಶೀಲರು ಅವರಾಗಿರಬೇಕು. ಮಾರ್ಗದರ್ಶನ ಮಾಡುವಂತಿರಬೇಕು. ಆದ್ದರಿಂದಲೇ ಅದನ್ನು 'ಹಿರಿಯರ ಮನೆ' ಎನ್ನುತ್ತಾರೆ.

ಈ ಹಿರಿಯರ ಮನೆಗೆ ಇತ್ತೀಚೆಗೆ ಬಹುತೇಕ ಪಕ್ಷಗಳು ಅಭ್ಯರ್ಥಿಯನ್ನಾಗಿಸುವಾಗ 'ರಾಜಕೀಯ ನಿರಾಶ್ರಿತರಿಗೆ ಆದ್ಯತೆ, ಇಲ್ಲವೇ ಅದು 'ಪೇಮೆಂಟ್ ಸೀಟ್! ಮತ ಪಡೆಯಲು ಒಂದಿಷ್ಟು ಸ್ಪರ್ಧೆ ಇದ್ದರಂತೂ ಮತದಾರ ಮಹಾಪ್ರಭುಗಳಾದ ಶಾಸಕರಿಗೆ ಎಲ್ಲಿಲ್ಲದ ಬೇಡಿಕೆ! ಇದನ್ನು ನಿಭಾಯಿಸಬಲ್ಲ ಸಾಮರ್ಥ್ಯ ಮಲ್ಯ, ರಾಮಸ್ವಾಮಿ, ಬಿಪಿಎಲ್ ಚಂದ್ರಶೇಖರರಂತಹ ಕುಬೇರೇ ಅಭ್ಯರ್ಥಿಗಳಾಗಲು ಮೂಲ ಅರ್ಹತೆ. ಹೀಗಾಗಿ ರಾಜ್ಯಸಭೆ ಸದಸ್ಯರ ಸ್ಥಾನ ಕುಸಿದಿದೆ ಎಂಬುದರಲ್ಲಿ ಅನುಮಾನವಿಲ್ಲ.

ಈಗಲೂ ಬಿಜೆಪಿ ಮಾಜಿ ಸಚಿವ, ಪ್ರಚಂಡ ವಿಂತಡವಾದಿ ಧನಂಜಯ ಕುಮಾರ್‌ನನ್ನು ತನ್ನ ಅಭ್ಯರ್ಥಿ ಯನ್ನಾಗಿಸುವ ಮಾತು ಕೇಳಿಬಂದಿದ್ದವು. ಆದರೆ ಬಿಜೆಪಿಯೊಳಗಿನ ಒಳಜಗಳ ಗುಂಪುಗಾರಿಕೆಯಿಂದಾಗಿ (ಅನಂತ್, ಯಡ್ಡಿ ಬಣ) ಗಳ ನಡುವೆ ಅದು ಹೈಕಮಾಂಡ್ ಕೃಪೆಯಿಂದ ಹೇಮಾ ಮಾಲಿನಿಗೆ ದೊರಕಿದೆ.

ಬಿಜೆಪಿ ಅಭ್ಯರ್ಥಿಯ ವಿರುದ್ಧ ಹಿರಿಯ ಸಾಹಿತಿ ಚಿಂತಕ ಡಾ. ಕೆ.ಮರುಳಸಿದ್ಧಪ್ಪ ನವರನ್ನು ಕಾಂಗ್ರೆಸ್, ಜೆಡಿ(ಎಸ್) ಪಕ್ಷಗಳು ಬೆಂಬಲಿಸಿ ಸ್ವತಂತ್ರ ಅಭ್ಯರ್ಥಿಯನ್ನಾಗಿಸಿವೆ. ಶಾಸಕರ ಬಲ ಗಮನಿಸಿದರೆ ಬಿಜೆಪಿಗೆ 105 ಸ್ಥಾನ, ಕಾಂಗ್ರೆಸ್, ಜೆಡಿ(ಎಸ್)ಗಳಿಗೆ 78 ಸ್ಥಾನಗಳದ್ದು ಸಂಖ್ಯಾಬಲ ಅನುಸರಿಸಿದರೆ ಬಿಜೆಪಿ ಅಭ್ಯರ್ಥಿಯೇ ಗೆಲ್ಲುವುದು ಖಚಿತ. ಅದಕ್ಕೂ ಡಾ.ಕೆ.ಎಂ.ಎಸ್.ರವರ ಸ್ಪರ್ಧೆ ಬಿಜೆಪಿ ವಿರುದ್ಧದ ಪ್ರತಿರೋಧವಾಗಬೇಕಿದೆ.

ಡಾ.ಕೆ.ಎಂ.ಎಸ್. ರವರ ಸ್ಪರ್ಧೆಯನ್ನು 'ಕರ್ನಾಟಕದ ಸ್ವಾಭಿಮಾನಿ ಕನ್ನಡಿಗರ' ಸಂಕೇತ ಎಂದು ಬಿಂಬಿಸುವುದು ಸೂಕ್ತವಲ್ಲ. ಇಲ್ಲಿ ಭಾಷೆ, ಪ್ರದೇಶಗಳ ಆಧಾರದಲ್ಲಿ ಅಭ್ಯರ್ಥಿಯನ್ನು ಎದುರಿಸಬೇಕಿಲ್ಲ. ಎದುರಿಸಬೇಕಿರುವುದು ಆ ಸ್ಥಾನದ ಹರಾಜು ಮಾಡುವ ರಾಜಕೀಯ ನಿರ್ಧಾರಗಳನ್ನು. ಇದೆಲ್ಲಕ್ಕೂ ಮುಖ್ಯವಾಗಿ ಕೆ.ಎಂ.ಎಸ್‌ರವರ ಸ್ಪರ್ಧೆ ಕೋಮುವಾದಿ, ಫ್ಯಾಸಿಸ್ಟ್ ಮನೋಭಾವದ ಭ್ರಷ್ಟ ಬಿಜೆಪಿ ವಿರುದ್ಧದ ಸಂಕೇತವಾಗಿ ಪರಿಗಣಿಸಬೇಕಿದೆ. ಕೆ.ಎಂ.ಎಸ್ ಈ ನಿಲುವುಗಳಿಗೆ ಬದ್ಧರಾಗಿ ನಿಂತವರು. ಇದನ್ನು ಗಟ್ಟಿ ಧ್ವನಿಯಲ್ಲಿ ಮಾತನಾಡುವಂತಾಗಬೇಕು ಕೂಡ. ಹೀಗಾದಲ್ಲಿ ಮಾತ್ರ ಬಿಜೆಪಿ ವಿರುದ್ಧದ ಹೋರಾಟಕ್ಕೆ ಒಂದು ಸೈದ್ಧಾಂತಿಕ ಆಯಾಮ, ತೀವ್ರತೆ ಬರಬಲ್ಲದು. ಒಂದು ವೇಳೆ ಕರ್ನಾಟಕದವರನ್ನೇ ಈ ಬಿಜೆಪಿ ಅಭ್ಯರ್ಥಿಯನ್ನಾಗಿಸಿದ್ದರೆ ಅದನ್ನು ಎದುರಿಸಿ ಯಾರೂ ಸ್ಪರ್ಧೆ ಮಾಡುತ್ತಿರಲಿಲ್ಲವೇ? ವಿರೋಧ ಪಕ್ಷಗಳೂ ಅಂತಹವರನ್ನೇ ಬೆಂಬಲಿಸುತ್ತಿದ್ದವೇ? ಹಾಗಾಗುತ್ತಿರಲಿಲ್ಲ. ಆದ್ದರಿಂದ ರಾಜಕೀಯ, ಸೈದ್ಧಾಂತಿಕ ನಿಲುವಿನ ಹೋರಾಟವೇ ಈ ಸ್ಪರ್ಧೆಯಲ್ಲಿ ಪ್ರಾಮುಖ್ಯತೆ ಪಡೆಯುವುದು.

ಇದೇ ಹೊತ್ತಿನಲ್ಲಿ ವಿರೋಧ ಪಕ್ಷಗಳಾಗಿರುವ (ಅಥವಾ ಆಡಳಿತ ಪಕ್ಷಕ್ಕೆ) ಒಂದು ಪ್ರಶ್ನೆ. ಹೇಗೂ ಸೋಲು ಖಚಿತ ಎಂದಾಗ ಸಾಹಿತಿ, ಬುದ್ಧಿಜೀವಿಗಳನ್ನು ಅಭ್ಯರ್ಥಿಯನ್ನಾಗಿಸುವ ಬದಲು ಗೆಲ್ಲುವಾಗಲೂ ಅವರು ಇವರನ್ನು ಅಭ್ಯರ್ಥಿಗಳನ್ನಾಗಿಸಿ ಆಯ್ಕೆ ಮಾಡುವರೋ? ಇಲ್ಲ....ಕುದುರೆಯ ಬಾಲದಲ್ಲಿ ಕೂದಲು ಎಷ್ಟು ಎಂದು ಎಣಿಸುವರೆ?

ಜನಶಕ್ತಿ
ಕನ್ನಡ ವಾರಪತ್ರಿಕೆ



ಕಡಲ ಕಿನಾರೆಯಲ್ಲಿ ದಲಿತ ಅಧ್ಯಯನ ಶಿಬಿರ

ತಣ್ಣೀರುಬಾವಿ ಕಡಲ ತೀರದಲ್ಲಿರುವ ಮಂಗಳೂರು ನಗರದ ಒಂದು ಪ್ರದೇಶ. ಅಲ್ಲಿ ಹಲವಾರು ವರ್ಷಗಳಿಂದ ವಾಸವಾಗಿರುವ 70 ರಷ್ಟು ದಲಿತ ಹಾಗೂ ಮತ್ಸ್ಯ ಉದ್ಯಮ ಆಶ್ರಯಿಸಿದ ಅಲ್ಪಸಂಖ್ಯಾತರ ಕುಟುಂಬಗಳಿಗೆ ಮಂಗಳೂರು ಮಹಾನಗರ ಪಾಲಿಕೆ ಮನೆ ನಂಬ್ರ ಕೊಟ್ಟಿಲ್ಲ. ಇದನ್ನು ಪ್ರತಿಭಟಿಸಿ ಈಗೆರಡು ತಿಂಗಳ ಹಿಂದೆ ಅಲ್ಲಿನ ನಿವಾಸಿಗಳು ಮಂಗಳೂರು ಮಹಾನಗರ ಪಾಲಿಕೆ ಮುಂದೆ ಸಿಪಿಐ(ಎಂ) ನಗರ ಸಮಿತಿಯ ದಲಿತ ಹಕ್ಕುಗಳ ಹೋರಾಟ ಸಮಿತಿ ಆಶ್ರಯದಲ್ಲಿ ಪ್ರತಿಭಟನಾ ಹೋರಾಟವನ್ನು ಹಮ್ಮಿಕೊಂಡಿತ್ತು. ಇದರಿಂದಾಗಿ ತಣ್ಣೀರುಬಾವಿಯಲ್ಲಿ ದಲಿತ ಹಕ್ಕುಗಳ ಸಮಿತಿ ಸಂಘಟನೆ ಬಲಗೊಳ್ಳುತ್ತಿದೆ.

ಫೆಬ್ರವರಿ 20 ರಂದು ತಣ್ಣೀರುಬಾವಿಯ ಕಡಲ ಕಿನಾರೆಯ ಗಾಳಿಮರಗಳಡಿಯಲ್ಲಿ ದಲಿತ ಹಕ್ಕುಗಳ ಸಮಿತಿಯ ಆಶ್ರಯದಲ್ಲಿ ದಲಿತ ಹಕ್ಕುಗಳ ಅಧ್ಯಯನ ಶಿಬಿರವನ್ನು ಮುಲ್ಕಿ ಹಾಗೂ ತಣ್ಣೀರುಬಾವಿಯ ಆಯ್ದ ಕಾರ್ಯಕರ್ತರಿಗಾಗಿ ಏರ್ಪಡಿಸಲಾಗಿತ್ತು. ಸಿಪಿಐ(ಎಂ) ಮಂಗಳೂರು ನಗರ ಸಮಿತಿ ಕಾರ್ಯದರ್ಶಿ ಸುನಿಲ್‌ಕುಮಾರ್ ಬಜಾಲ್ ಅವರು 'ಸಂಘಟನೆಯ ಮಹತ್ವ ಮತ್ತು ಚಳುವಳಿಗಳು' ಎಂಬ ವಿಷಯದ ಬಗ್ಗೆಯೂ ಸಿಪಿಐ(ಎಂ) ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ಸದಸ್ಯರಾದ ಕೃಷ್ಣಪ್ಪ ಕೊಂಚಾಡಿಯವರು ಎಡಪಂಥೀಯ ಚಳುವಳಿಯ ಮಹತ್ವ"ದ ಬಗ್ಗೆಯೂ ತರಗತಿ ನಡೆಸಿಕೊಟ್ಟರು. ಸ್ಥಳೀಯ ಕಾರ್ಯಕರ್ತರಾದ ಬೇಬಿ ಅಧ್ಯಕ್ಷತೆ ವಹಿಸಿದ್ದರು. ಡಿವೈಎಫ್‌ಐ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷರಾದ ಮುನೀರ್ ಕಾಟಿಪಳ್ಳ ಸುಭಾಶಯ ಕೋರಿದರು. ದಲಿತ ಹಕ್ಕುಗಳ ಸಮಿತಿಯ ನಗರ ಕಾರ್ಯದರ್ಶಿ ಲಿಂಗಪ್ಪನಂತೂರು ಕಾರ್ಯಕ್ರಮ ನಿರ್ವಹಿಸಿದರು. ಎಂ.ಮಾಧವ ಧನ್ಯವಾದ ಅರ್ಪಿಸಿದರು.

★

ಮನೆ ನಿವೇಶನ ಆಗ್ರಹಿಸಿ ಡಿವೈಎಫ್ಐ
ಮಹಾನಗರ ಪಾಲಿಕೆ ಚಲೋ



ಮನೆ ನಿವೇಶನ, ಬಾಡಿಗೆ ನಿಯಂತ್ರಣ ಕಾಯ್ದೆಗೆ ಆಗ್ರಹಿಸಿ ಡಿವೈಎಫ್‌ಐ ಪ್ರತಿಭಟನೆ :

ಮಂಗಳೂರು ನಗರ ವಿವಿಧ ಯೋಜನೆಗಳು ಮತ್ತು ಅಭಿವೃದ್ಧಿಯ ವಿಚಾರದಲ್ಲಿ ರಾಷ್ಟದ ಗಮನ ಸೆಳೆದಿದೆ. ಆದರೆ ಇಲ್ಲಿನ ಸಾಮಾನ್ಯ ಜನರು ಮತ್ತು ನಿವೇಶನರಹಿತರು ಸ್ವಂತ ನಿವೇಶನ ಹೊಂದಲು ಸಾಧ್ಯವಾಗದೆ ಮತ್ತು ದುಬಾರಿ ಮನೆಬಾಡಿಗೆಯನ್ನು ಪಾವತಿಸಲಾಗದೆ ಬೀದಿಗೆ ಬೀಳುವಂತಾಗಿದೆ. 2001 ರಿಂದೀಚೆಗೆ ನಿವೇಶನಕ್ಕೆ ಅರ್ಜಿ ಸಲ್ಲಿಸಿದವರಿಗೆ ಇನ್ನೂ ನಿವೇಶನ ಸಿಕ್ಕಿಲ್ಲ ಎಂಬುದಾಗಿ ಡಿವೈಎಫ್‌ಐ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷ ಮುನೀರ್ ಕಾಟಿಪಳ್ಳ ಹೇಳಿದರು. ಅವರು ಡಿವೈಎಫ್‌ಐ ಮಂಗಳೂರು ನಗರ ಸಮಿತಿ ನೇತೃತ್ವದಲ್ಲಿ ಫೆಬ್ರವರಿ 21 ರಂದು ಮಂಗಳೂರು ಮಹಾನಗರ ಪಾಲಿಕೆ ಎದುರು ಏರ್ಪಡಿಸಿದ್ದ 'ಮಂಗಳೂರು ಮಹಾನಗರಪಾಲಿಕೆ ಚಲೋ ಮತ್ತು ಸಾಮೂಹಿಕ ಅರ್ಜಿ ಸಲ್ಲಿಕೆ' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಸಾವಿರ ದಿನಗಳನ್ನು ಪೂರೈಸಿರುವ ಸಂಭ್ರಮದಲ್ಲಿ ಕೋಟ್ಯಾಂತರ ರೂಪಾಯಿ ದುಂದುವೆಚ್ಚ ಮಾಡುವ ಸರಕಾರಕ್ಕೆ ರಾಜ್ಯದಲ್ಲಿ ಸೂರಿಲ್ಲದೆ ಬೀದಿಪಾಲಾಗಿರುವ ಬಡವರ ಬಗ್ಗೆ ಕಾಳಜಿ ಇಲ್ಲ ಎಂಬುದಾಗಿ ವಾಗ್ದಾಳಿ ನಡೆಸಿದ ಅವರು, ನಿವೇಶನ ರಹಿತರಿಗೆ ನಿವೇಶನ ವಿತರಣೆ ಹಾಗೂ ಮನೆಬಾಡಿಗೆ ನಿಯಂತ್ರಣ ಕಾಯ್ದೆ ಅನುಷ್ಠಾನವನ್ನು ಮುಂದಿನ ಏಪ್ರಿಲ್ ತಿಂಗಳೊಳಗೆ ನೆರವೇರಿಸದಿದ್ದರೆ ಜಿಲ್ಲಾಧಿಕಾರಿ ಕಚೇರಿ ಚಲೋ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು; ಬೇಡಿಕೆ ಈಡೇರುವತನಕ ಹಂತಹಂತವಾಗಿ ಹೋರಾಟ ಮುಂದುವರಿಸಲಾಗುವುದು ಎಂದು ಎಚ್ಚರಿಸಿದರು.

ಪ್ರತಿಭಟನಾಕಾರರನ್ನುದ್ದೇಶಿಸಿ ಕರ್ನಾಟಕ ಪ್ರಾಂತ ರೈತ ಸಂಘ ದಕ್ಷಿಣ ಕನ್ನಡ ಕಾರ್ಯದರ್ಶಿ ಕೆ.ಯಾದವಶೆಟ್ಟಿ, ಸಿಪಿಐ(ಎಂ) ಮಂಗಳೂರು ನಗರ ಸಮಿತಿ ಕಾರ್ಯದರ್ಶಿ ಸುನಿಲ್‌ಕುಮಾರ್ ಬಜಾಲ್, ಡಿವೈಎಫ್‌ಐ ಜಿಲ್ಲಾ ಕಾರ್ಯದರ್ಶಿ ದಯಾನಂದ ಶೆಟ್ಟಿ, ಡಿವೈಎಫ್‌ಐ ನಗರಸಮಿತಿ ಕಾರ್ಯದರ್ಶಿ ಸಂತೋಷ್‌ಕುಮಾರ್ ಬಜಾಲ್ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು. ಡಿವೈಎಫ್‌ಐ ಯುವತಿಯರ ಸಮಿತಿ ಅಧ್ಯಕ್ಷೆ ಪ್ರಮಿಳಾ ಶಕ್ತಿನಗರ, ಬಶೀರ್, ಸಾಧಿಕ್ ಕಣ್ಣೂರು, ಪ್ರಶಾಂತ್ ಎಂ.ಬಿ. ಮೊದಲಾದವರು ಕಾರ್ಯಕ್ರಮಕ್ಕೆ ನೇತೃತ್ವ ನೀಡಿದ್ದರು. ದಲಿತ ಹಕ್ಕುಗಳ ಸಮಿತಿಯ ಲಿಂಗಪ್ಪ ನಂತೂರು, ಜಯಕುಮಾರ್, ಕಟ್ಟಡ ಹಾಗೂ ನಿರ್ಮಾಣ ಕಾರ್ಮಿಕರ ಸಂಘಟನೆಯ ಶಶಿಧರ ಶಕ್ತಿನಗರ, ಯೋಗೀಶ್ ಜಪ್ಪಿನಮೊಗರು, ಸ್ಯಾಮುವೆಲ್ ಟೈಟನ್ ಸಮುದಾಯದ ವಾಸುದೇವ ಉಚ್ಚಿಲ್, ಡಿವೈಎಫ್‌ಐ ಉಳ್ಳಾಲ ವಲಯದ ಅಶೋಕಶೆಟ್ಟಿ ಮೊದಲಾದವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಆರಂಭದಲ್ಲಿ 1000 ಸಂಖ್ಯೆಯ ಪ್ರತಿಭಟನಾಕಾರರು ಬೆಸೆಂಟ್ ಜಂಕ್ಷನ್‌ನಿಂದ ಮಂಗಳೂರು ಪಾಲಿಕೆ ಕಚೇರಿಯವರೆಗೆ ಮೆರವಣಿಗೆ ನಡೆಸಿದರು. ದೊಡ್ಡ ಸಂಖ್ಯೆಯಲ್ಲಿ ದಲಿತರು, ಮುಸ್ಲಿಂ ಮಹಿಳೆಯರು ಈ ಪ್ರತಿಭಟನಾ ರ್‍ಯಾಲಿಯಲ್ಲಿ ಭಾಗವಹಿಸಿದ್ದನ್ನು ಗುರುತಿಸಬಹುದಾಗಿತ್ತು. ನಗರದ ಕೊಂಚಾಡಿ, ಶಕ್ತಿನಗರ, ಉರ್ವಸ್ಟೋರ್, ಪಕ್ಕಲಡ್ಕ, ಬಜಾಲು, ಕಣ್ಣೂರು, ಕಾವೂರು ಪಂಜಿನಮೊಗರು ಎಂಬ ಪ್ರದೇಶಗಳಿಂದ 1400 ಕ್ಕೂ ಮೀರಿ ನಿವೇಶನರಹಿತರಿಂದ ಅರ್ಜಿಗಳನ್ನು ಸಂಗ್ರಹಿಸಿದ್ದರು, ಅವುಗಳಲ್ಲಿ 1167 ಅರ್ಜಿಗಳನ್ನು ಪ್ರತಿಭಟನಾ ಸಭೆಯ ಮಧ್ಯೆ ಸ್ಥಳಕ್ಕೆ ಬಂದ ಪಾಲಿಕೆಯ ಜಂಟಿ ಆಯುಕ್ತರಿಗೆ ಸಲ್ಲಿಸಲಾಯಿತು. ಇನ್ನುಳಿದವನ್ನು ಪರಿಶೀಲಿಸಿ ಹೆಚ್ಚುವರಿ ಅರ್ಜಿಗಳೊಂದಿಗೆ ಸಲ್ಲಿಸಲಾಗುವುದು ಎಂದು ತಿಳಿಸಲಾಯಿತು.

ಮಂಗಳೂರು ನಗರದಲ್ಲಿ ಇತ್ತೀಚಿನ ದಿನಗಳಲ್ಲಿ ನಡೆದ ಅತಿದೊಡ್ಡ ನಾಗರಿಕ ಪ್ರತಿಭಟನೆ ಇದಾಗಿರುತ್ತದೆ.

★

ಪ್ರತಿಭಟನಾ ಮೆರವಣಿಗೆ

ವಿವಿಧ ಬೇಡಿಕೆಗಳನ್ನು ಆಗ್ರಹಿಸಿ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ ಫೆಬ್ರವರಿ 23 ರಂದು ನವದೆಹಲಿಯಲ್ಲಿ ಹಮ್ಮಿಕೊಂಡಿರುವ 'ಪಾರ್ಲಿಮೆಂಟ್ ಚಲೋ' ಕಾರ್ಯಕ್ರಮಕ್ಕೆ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯ ಸಿಐಟಿಯು ಕಾರ್ಮಿಕ ಸಂಘಟನೆಗಳಿಂದಲೂ ಕಾರ್ಯಕರ್ತರು ಹೋಗಿರುತ್ತಾರೆ. ಇದನ್ನು ಬೆಂಬಲಿಸಿ ಉಡುಪಿ ಮತ್ತು ಕುಂದಾಪುರಗಳಲ್ಲೂ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ ಅದೇ ದಿನ ಬೃಹತ್ ಪ್ರತಿಭಟನಾ ಮೆರವಣಿಗೆಯನ್ನು ಆಯೋಜಿಸಿತ್ತು.

ಉಡುಪಿಯಲ್ಲಿ ಜೀವವಿಮಾ ನಿಗಮ ಕಚೇರಿ ಆವರಣದಿಂದ ಹೊರಟ ಮೆರವಣಿಗೆ ಬಸ್ ನಿಲ್ದಾಣದ ಮಹಾತ್ಮಾಗಾಂಧಿ ಪ್ರತಿಮೆ ಎದುರು ರ್‍ಯಾಲಿಯಾಗಿ ಪರಿವರ್ತನೆಯಾಯಿತು. ಪ್ರತಿಭಟನೆಯಲ್ಲಿ ಜೆಸಿಟಿಯು ಉಡುಪಿ ಜಿಲ್ಲಾ ಸಂಚಾಲಕ ಅದಮಾರು ಶ್ರೀಪತಿ ಆಚಾರ್ಯ, ಸಿಐಟಿಯುನ ಪಿ.ವಿಶ್ವನಾಥ್ ರೈ, ರಮೇಶ್ ಮೆಂಡನ್, ಎಐಟಿಯುಸಿ ಯ ಕೆ.ವಿ.ಭಟ್, ವಿಮಾ ನೌಕರರ ಸಂಘದ ಯು.ಗುರುದತ್, ಬಿಎಸ್‌ಎನ್‌ಎಲ್ ನೌಕರರ ಸಂಘದ ಶಶಿಧರ ಗೊಲ್ಲ ಮೊದಲಾದವರು ಭಾಗವಹಿಸಿದ್ದರು.

ಕುಂದಾಪುರದಲ್ಲಿ ಶಾಸ್ತ್ರಿ ವೃತ್ತದಿಂದ ಕಾರ್ಮಿಕರ ಭಾರಿ ಮೆರವಣಿಗೆ ಹೊರಟು ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಬಳಿಕ ಶಾಸ್ತ್ರಿ ವೃತ್ತದಲ್ಲಿ ಸಾರ್ವಜನಿಕ ಪ್ರತಿಭಟನಾ ಸಭೆ ನಡೆಸಲಾಯಿತು.

★

ಕೋಟೆಕಾರು ವಲಯದಲ್ಲಿ ಉದ್ಯೋಗಖಾತ್ರಿ ಕಾಮಗಾರಿ ಪರಿಶೀಲನೆ

ಕರ್ನಾಟಕ ಪ್ರಾಂತ ರೈತ ಸಂಘದ ದಕ್ಷಿಣ ಕನ್ನಡ ಜಿಲ್ಲಾ ಸಮಿತಿಯ ಅಧ್ಯಕ್ಷರಾದ ಕೆ.ಆರ್.ಶ್ರೀಯಾನ್, ಕಾರ್ಯದರ್ಶಿ ಕೆ. ಯಾದವಶೆಟ್ಟಿ, ಉಪಾಧ್ಯಕ್ಷರುಗಳಾದ ಕೃಷ್ಣಪ್ಪ ಸಾಲ್ಯಾನ್ ಮತ್ತು ವಾಸುದೇವ ಉಚ್ಚಿಲ್ ಇವರುಗಳನ್ನೊಳಗೊಂಡ ತಂಡವು ಫೆಬ್ರವರಿ 19 ರಂದು ಕೋಟೆಕಾರು ವಲಯದಲ್ಲಿ ಪ್ರಾಂತ ರೈತ ಸಂಘದ ನೇತ್ರತ್ವದಲ್ಲಿ 'ರೇಗಾ' ಅನುಷ್ಠಾನದಲ್ಲಿರುವ ಮುನ್ನೂರು, ಅಂಬ್ಲಮೊಗರು, ತಲಪಾಡಿ ಗ್ರಾಮ ಪಂಚಾಯತುಗಳಲ್ಲಿ ನಡೆಯುತ್ತಿದ್ದ ಕಾಮಗಾರಿಗಳನ್ನು ಪರಿಶೀಲಿಸಿತು.

ಕಳೆದ ಸಾಲಿನಲ್ಲಿ ಯಶಸ್ವಿಯಾಗಿ 'ರೇಗಾ' ಜಾರಿಗೊಳಿಸಿದ್ದ ಮುನ್ನೂರು ಗ್ರಾಮ ಪಂಚಾಯತ್‌ನ ಈ ಸಾಲಿನ ಕಾಮಗಾರಿ ಬಗ್ಗೆ ಈಗಾಗಲೇ 'ಜನಶಕ್ತಿ' ವರದಿ ಮಾಡಿದೆ. (2011 ಫೆಬ್ರವರಿ 27 ರ ಸಂಚಿಕೆ) ಈ ವರ್ಷ ಕಾಮಗಾರಿಗಳು ಆರಂಭವಾಗುವಲ್ಲಿ ವಿಳಂಬವಾಗಿದ್ದರೂ, ದಿನಗೂಲಿಯಲ್ಲಿ 2011 ಜನವರಿ 1 ರಿಂದ ರೂ.100 ರಿಂದ ರೂ.125 ಕ್ಕೆ ಹೆಚ್ಚಿಸಿದ ಮೇಲೆ ಗುಂಪುಗಳು ಕಾರ್ಯೋನ್ಮುಖವಾಗಿದೆ ಎಂಬುದು ತಂಡದ ಪರಿಶೀಲನೆ ವೇಳೆ ಗೊತ್ತಾಗಿರುತ್ತದೆ. ○

ಸ್ವರ್ಗಾಧಿಪತಿಗೆ

ಓ ಇಂದ್ರ ಈ ಕೋಮು ಬೆಂಕಿಯಲಿ ಸುಟ್ಟು
ಹೋದವರು ಕಡು ಬಡವ ತರುಣರೇ ಒಟ್ಟು
ಈ ಜನಕೆ ಸ್ವರ್ಗದೊಳು ವ್ಯವಸ್ಥೆ ಹೇಗೆ
ತಿಳಿಗಂಜಿ ನೀಡುವರೆ ನಮ್ಮಲ್ಲಿ ಹಾಗೆ.

-ವಿಡಂಬಾರಿ

ಜನಶಕ್ತಿ
ಕನ್ನಡ ವಾರಪತ್ರಿಕೆ

ಪಿ.ಡಿ. ಸಂಪಾದಕೀಯ

ಸಂಸತ್ತಿನತ್ತ ನಿಜ ಭಾರತದ ನಡಿಗೆ

ಇನ್ನಷ್ಟು ಬಲಿಷ್ಠ ಹೋರಾಟಗಳತ್ತ ಮುನ್ನಡೆಯಲಿ!

ಯುಪಿಎ ಸರಕಾರ ತನ್ನ ಕಾರ್ಮಿಕ-ವಿರೋಧಿ ಧೋರಣೆಗಳೊಂದಿಗೆ ಅಸಾಧ್ಯವಾದುದನ್ನು ಸಾಧಿಸಿದೆ ! ದೇಶದಲ್ಲಿನ ಎಲ್ಲ ಕೇಂದ್ರೀಯ ಕಾರ್ಮಿಕ ಸಂಘಟನೆಗಳನ್ನು ಮತ್ತು ಎಲ್ಲ ಸ್ವತಂತ್ರ ಕಾರ್ಮಿಕ ಒಕ್ಕೂಟಗಳನ್ನು ಹೋರಾಟದಲ್ಲಿ ಒಂದುಗೂಡಿಸಿದೆ. ಫೆ. 23ರಂದು ಕೆಂಬಾವುಟಗಳ ಸಾಗರ ಮತ್ತು ಎಡಪಂಥೀಯ ಕಾರ್ಮಿಕ ಸಂಘಟನೆಗಳ ಸದಸ್ಯರೊಂದಿಗೆ, ಕಾಂಗ್ರೆಸಿಗೆ ಸೇರಿದ ಐಎನ್‌ಟಿಯುಸಿ ಮತ್ತು ಇತರರೂ ಸೇರಿಕೊಂಡರು. 2011-12 ಬಜೆಟನ್ನು ಮಂಡಿಸುವ ಮೊದಲು ಈ ನಿಜಭಾರತ ಸಂಸತ್ತಿನತ್ತ ನಡೆದು ಬಂದಿದೆ, ಈ ಯುಪಿಎ ಸರಕಾರದ ಧೋರಣೆಯ ದಿಕ್ಕಿನಲ್ಲಿ ತೀವ್ರ ಪಲ್ಲಟ ತರಬೇಕೆಂದು ಆಗ್ರಹಿಸಿದೆ.





ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ಭಾರತೀಯ ಕಾರ್ಮಿಕ ವರ್ಗ, ಹಿಂದೆಂದೂ ಕಾಣದ ರೀತಿಯಲ್ಲಿ, ಲಕ್ಷೋಪಲಕ್ಷ ಸಂಖ್ಯೆಯಲ್ಲಿ ದೇಶದ ರಾಜಧಾನಿಯಲ್ಲಿ ನೆರೆದು, ಅತ್ಯಂತ ಶಿಸ್ತಿನಿಂದ, ಸಂಸತ್ತಿನತ್ತ ನಡೆಯಿತು. ಕಾರ್ಮಿಕರ ಐದಂಶಗಳ ಬೇಡಿಕೆ ಪಟ್ಟಿಯ ಬಗ್ಗೆ ಈಗಾಗಲೆ ಈ ಪತ್ರಿಕೆ ಹಿಂದಿನ ಸಂಚಿಕೆಗಳಲ್ಲಿ ಬರೆದಿದೆ. ಸಂಕ್ಷಿಪ್ತವಾಗಿ ಆ ಐದು ಬೇಡಿಕೆಗಳು: 1. ಬೆಲೆಯೇರಿಕೆಯನ್ನು ತಡೆಯಬೇಕು, ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಪಡಿಸಬೇಕು; 2. ಕಾರ್ಮಿಕ ಕಾನೂನುಗಳ ಕಟ್ಟುನಿಟ್ಟಾದ ಪಾಲನೆ; 3. ಕಾರ್ಪೊರೇಟುಗಳಿಗೆ ಉತ್ತೇಜಕ ಪ್ಯಾಕೇಜುಗಳನ್ನು ಉದ್ಯೋಗ ರಕ್ಷಣೆಯೊಂದಿಗೆ ಬೆಸೆಯಬೇಕು; 4. ಎಲ್ಲರಿಗೂ ಸಾಮಾಜಿಕ ಭದ್ರತೆ ಒದಗಿಸಲು ಅಸಂಘಟಿತ ವಲಯಕ್ಕೆ ರಾಷ್ಟ್ರೀಯ ನಿಧಿ; ಮತ್ತು 5. ಬಜೆಟ್ ಕೊರತೆಯನ್ನು ತುಂಬಿಸಲು ಸಾರ್ವಜನಿಕ ವಲಯದ ಖಾಸಗೀಕರಣ/ಶೇರು ಹಿಂಪಡಿಕೆ ನಡೆಸುವುದನ್ನು ನಿಲ್ಲಿಸಬೇಕು.

ಈ ಯುಪಿಎ ಸರಕಾರ ತನ್ನ ಕಾರ್ಮಿಕ-ವಿರೋಧಿ ಧೋರಣೆಗಳೊಂದಿಗೆ ಅಸಾಧ್ಯವಾದುದನ್ನು ಸಾಧಿಸಿದೆ. ಅದು ಈ ಹೋರಾಟದಲ್ಲಿ ದೇಶದಲ್ಲಿನ ಎಲ್ಲ ಕೇಂದ್ರೀಯ ಕಾರ್ಮಿಕ ಸಂಘಟನೆಗಳನ್ನು ಮತ್ತು ಎಲ್ಲ ಸ್ವತಂತ್ರ ಕಾರ್ಮಿಕ ಒಕ್ಕೂಟಗಳನ್ನು ಒಂದುಗೂಡಿಸಿದೆ. ಕೆಲವೇ ವರ್ಷಗಳ ಹಿಂದೆ ಇಂತಹ ಐಕ್ಯತೆಯ ಬಗ್ಗೆ ಯೋಚಿಸುವಂತೆಯೂ ಇರಲಿಲ್ಲ. ಈ ಐಕ್ಯ ಹೋರಾಟಕ್ಕೆ ಸಿದ್ಧತೆ ಸಪ್ಟಂಬರ್ 2009ರಲ್ಲಿ ಒಂದು ರಾಷ್ಟ್ರೀಯ ಜಂಟಿ ಸಮಾವೇಶದೊಂದಿಗೆ ಆರಂಭವಾಯಿತು. ಅದನ್ನನುಸರಿಸಿ ಫೆಬ್ರುವರಿ 2010ರಲ್ಲಿ ದೇಶವ್ಯಾಪಿ 'ಜೈಲ್ ಭರೋ' ಕಾರ್ಯಕ್ರಮ ನಡೆಯಿತು., ಸಪ್ಟಂಬರ್ 7, 2010ರಂದು ಚಾರಿತ್ರಿಕ ಅಖಿಲ ಭಾರತ ಮುಷ್ಕರ ನಡೆಯಿತು. ಈ 'ಸಂಸತ್ ಚಲೋ' ಈ ಕಾರ್ಯಾಚರಣೆಗಳ ಮುಂದುವರಿಕೆ. ಕೆಂಬಾವುಟಗಳ ಸಾಗರ ಮತ್ತು ಎಡಪಂಥೀಯ ಕಾರ್ಮಿಕ ಸಂಘಟನೆಗಳ ಸದಸ್ಯರೊಂದಿಗೆ, ಕಾಂಗ್ರೆಸಿಗೆ ಸೇರಿದ ಐಎನ್‌ಟಿಯುಸಿ ಮತ್ತು ಇತರರೂ ಸೇರಿಕೊಂಡರು. ಬಿಜೆಪಿಗೆ ಸೇರಿದ ಬಿಎಂಎಸ್ ಕೂಡ ಸಮಾವೇಶದಲ್ಲಿ ಮತ್ತು ಬೇಡಿಕೆ ಪಟ್ಟಿಯನ್ನು ತಯಾರಿಸುವಲ್ಲಿ ಭಾಗವಹಿಸಿತ್ತು.

ಈ 'ನಿಜ' ಭಾರತ 2011-12 ಬಜೆಟನ್ನು ಮಂಡಿಸುವ ಮೊದಲು ಸಂಸತ್ತಿನತ್ತ ನಡೆದು ಬಂದಿದೆ, ಈ ಯುಪಿಎ ಸರಕಾರ ಅನುಸರಿಸುತ್ತಿರುವ ನವ-ಉದಾರವಾದಿ ಆರ್ಥಿಕ ಸುಧಾರಣೆಗಳ ದಿಕ್ಕು-ದಾರಿಗೆ ತನ್ನ ಬಲವಾದ ವಿರೋಧವನ್ನು ದಾಖಲಿಸಿದೆ, ವಿರೋಧಕ್ಕೆ ದನಿ ನೀಡಿದೆ. ಯುಪಿಎ ಸರಕಾರ ದುಡಿಯುವ ಜನಗಳ ಈ ದನಿಗೆ ಕಿವಿಗೊಡದಿದ್ದರೆ(ಕಿವಿಗೊಡುವುದಿಲ್ಲ ಎಂಬುದು ಸರ್ವಸಾಮಾನ್ಯವಾದ ನಿರೀಕ್ಷೆ), ಆಗ ಅದು ಖಂಡಿತವಾಗಿಯೂ ಇನ್ನೂ ಹೆಚ್ಚು ಐಕ್ಯತೆಯ, ಇನ್ನಷ್ಟು ಬಲಿಷ್ಟವಾದ ಹೋರಾಟಗಳನ್ನು ಮುಂದೆ ಎದುರಿಸಬೇಕಾಗುತ್ತದೆ. ಈ ಹೋರಾಟಗಳಲ್ಲಿ ನಮ್ಮ ಜನತೆಯ ಎಲ್ಲ ದುಡಿಯುವ ಜನವಿಭಾಗಗಳು ಸೇರಿಕೊಳ್ಳುತ್ತವೆ, ಸರಕಾರದ ಧೋರಣೆಯ ದಿಕ್ಕಿನಲ್ಲಿ ತೀವ್ರ ಪಲ್ಲಟ ತರಬೇಕೆಂದು ಆಗ್ರಹಿಸುತ್ತವೆ.

ಇದೆಂಥಾ 'ಬೆಳವಣಿಗೆಯ ಕಥೆ'?

ನವ-ಉದಾರವಾದೀ ಪಂಡಿತರು ತಾವು ಜಾಗತಿಕ ಹಿಂಜರಿತದ ಬಿರುಗಾಳಿಯನ್ನು ಎದುರಿಸಿ ನಿಂತಿದ್ದೇವೆ ಎಂದು ತಮ್ಮ ಬೆನ್ನು ತಾವೇ ತಟ್ಟಿಕೊಳ್ಳುತ್ತಿದ್ದಾರೆ. ಆದರ ಅವರು ಹೇಳುವ ಭಾರತದ 'ಬೆಳವಣಿಗೆಯ ಕಥೆ' ನಮ್ಮ ಬಹುಪಾಲು ಜನಗಳನ್ನು ಮುಟ್ಟಿಯೇ ಇಲ್ಲ. ಈ ಹಿಂದೆ ಹಲವು ಬಾರಿ ಹೇಳಿದಂತೆ, ಡಾಲರ್ ಬಿಲಿಯಾಧಿಪತಿಗಳ ಸಂಖ್ಯೆಯೇನೋ 26ರಿಂದ 52ಕ್ಕೇರಿತು, ಅವರ ಒಟ್ಟು ಆಸ್ತಿ ಮೌಲ್ಯ ನಮ್ಮ ಒಟ್ಟು ರಾಷ್ಟ್ರೀಯ ಉತ್ಪನ್ನ(ಜಿಡಿಪಿ)ದ 25 ಶೇ. ದಷ್ಟಾಯಿತು. ಇತ್ತೀಚಿನ ಮಾಹಿತಿಗಳ ಪ್ರಕಾರ ಇದೀಗ ಈ ವರ್ಷದಲ್ಲಿ ಈ ಸಂಖ್ಯೆ 69ಕ್ಕೇರಿದೆ. ಭಾರತ ನಿಜವಾಗಿಯೂ ನಮ್ಮ ಜನಸಂಖ್ಯೆಯ ಈ ಹಿಡಿಯಷ್ಟು ಮಂದಿಯ ಮಟ್ಟಿಗೆ ಹೊಳೆಯುತ್ತಿದೆ. ಇನ್ನೊಂದು ಕಡೆ, ನಮ್ಮ ಹತಾಶ ರೈತರ ಆತ್ಮಹತ್ಯೆಗಳು ಮುಂದುವರಿಯುತ್ತಲೇ ಇವೆ. ಇಷ್ಟೇ ಸಾಲದೆಂಬಂತೆ ಈಗ ಆ ಸಾಲಿಗೆ ಕಿರುಸಾಲಗಳ ಶೋಷಣೆಗೆ ಬಲಿಯಾದವರು, ಗ್ರಾಮೀಣ ಉದ್ಯೋಗ ಯೋಜನೆಗಳಲ್ಲಿ ನ್ಯಾಯಯುತ ಕೂಲಿಯಿಂದ ವಂಚಿತರಾದವರು ಕೂಡ ಸೇರಿಕೊಳ್ಳುತ್ತಿದ್ದಾರೆ. ಬಹುಪಾಲು ಭಾರತೀಯ ಜನತೆಗೆ ಬೆಲೆಯೇರಿಕೆಗಳು ಅಭೂತಪೂರ್ವ ರೀತಿಯಲ್ಲಿ ಇನ್ನಷ್ಟು ಹೊರೆಗಳನ್ನು ಹಾಕುತ್ತಲೇ ಇವೆ.



ನವ-ಉದಾರವಾದದ ಕಾರ್ಯತಂತ್ರ, ಬೆಳವಣಿಗೆಗೆ ಪ್ರೋತ್ಸಾಹ ನೀಡಲು ತೆರಿಗೆ ರಿಯಾಯ್ತಿಗಳ ಮೂಲಕ ಉತ್ತೇಜನೆ ಒದಗಿಸಬೇಕು ಎಂಬುದರ ಸುತ್ತಲೇ ಗಿರಕಿ ಹೊಡೆಯುತ್ತಿದೆ. ಇದು ಜಾಗತಿಕ ರಂಗದಲ್ಲಿ, ಪ್ರಸಕ್ತ ಬಿಕ್ಕಟ್ಟಿಗೆ ಕಾರಣರಾದವರನ್ನೇ, ಅಂದರೆ ಹಣಕಾಸು ದೈತ್ಯರು ಮತ್ತು ಕಾರ್ಪೊರೇಟುಗಳನ್ನೇ ಪಾರು ಮಾಡುವ ನವ-ಉದಾರವಾದಿ ಪಥ್ಯಗಳಂತೆಯೇ ಇದೆ. ಇದರ ಪರಿಣಾಮವೆಂದರೆ ಕಾರ್ಪೊರೆಟ್ ದಿವಾಳಿಗಳು ಸಾರ್ವಭೌಮ(ಅಂದರೆ ಇಡೀ ದೇಶದ) ದಿವಾಳಿಯಾಗಿ ಪರಿವರ್ತನೆಗೊಂಡವು. ಏಕೆಂದರೆ ದೊಡ್ಡ-ದೊಡ್ಡ ಕಂಪನಿಗಳನ್ನು ದಿವಾಳಿಯಿಂದ ಪಾರು ಮಾಡುವ ಪ್ಯಾಕೇಜುಗಳಿಗಾಗಿ ಸರಕಾರಗಳು ಭಾರೀ ಪ್ರಮಾಣದಲ್ಲಿ ಹಣಕಾಸಿನ ಸಾಲಗಳನ್ನು ತರಬೇಕಾಯಿತು. ಈ ಸಾಲಗಳನ್ನು ಹೊಂದಿಸಲು ಬಹಳಷ್ಟು ದೇಶಗಳಲ್ಲಿ ಕಾರ್ಮಿಕ ವರ್ಗದ ಸೌಲಭ್ಯಗಳು ಮತ್ತು ಹಕ್ಕುಗಳ ಮೇಲೆ ನಿರ್ದಯ ದಾಳಿಗಳು ನಡೆಯುತ್ತಿವೆ. ಅಂದರೆ, ಇದರಿಂದಾಗಿ ಸಾಮಾಜಿಕ ವಲಯದಲ್ಲಿ ಸರಕಾರದ ಖರ್ಚುಗಳನ್ನು ಸಂಪೂರ್ಣವಾಗಿ ನಿಲ್ಲಿಸದಿದ್ದರೂ, ದೊಡ್ಡ ಪ್ರಮಾಣದಲ್ಲಿ ಕಡಿತ ಮಾಡಿ ಜನಗಳ ಮೇಲೆ ಹಿಂದೆಂದೂ ಕಾಣದಷ್ಟು ದೊಡ್ಡ ಪ್ರಮಾಣದಲ್ಲಿ ಹೊರೆಗಳನ್ನು ಹಾಕಲಾಗುತ್ತಿದೆ.

ತೀವ್ರ ಪಲ್ಲಟ ಅಗತ್ಯ

ಭಾರತದ ಅಧಿಕಾರದ ಮೊಗಸಾಲೆಗಳಲ್ಲಿ ಕೂಡ ಇಂತಹುದೇ ಸದ್ದುಗಳು ಕೇಳಬರುತ್ತಿವೆ. 'ಉತ್ತೇಜಕ ಪ್ಯಾಕೇಜು'ಗಳಿಂದ ಲಾಭ ಗಿಟ್ಟಿಸಿರುವ(ಈ ಮೂಲಕ ತಮ್ಮನ್ನು ಬಿಲಿಯಾಧಿಪತಿಗಳ ಪಟ್ಟಿಯಲ್ಲಿ ಸೇರಿಸಿಕೊಂಡಿರುವ) ಆಳುವ ವರ್ಗಗಳ ವಿಭಾಗಗಳೇ ಮುಂಬರುವ ಬಜೆಟ್ 'ಹಣಕಾಸು ಕ್ರೋಡೀಕರಣ'ದ ಮೇಲೆ ಒತ್ತು ಕೊಡಬೇಕು ಎಂದು ಒತ್ತಡಗಳನ್ನು ಹಾಕುತ್ತಿದ್ದಾರೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಸರಕಾರ ಆರೋಗ್ಯ, ಶಿಕ್ಷಣ

ಪುಟ 11ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಜನತೆಯ ಹೃದಯಕ್ಕೆ ಇರಿಯುವ ಬಜೆಟ್

ನಿನ್ನೆ ಮಂಡಿಸಿದ ಬಜೆಟ್ ಹಾಗೂ ಕೃಷಿ ಬಜೆಟ್, ಹಾಗೂ ಇತ್ತೀಚಿನ ಸಂಪುಟ ಸಭೆಯಲ್ಲಿ ಕೈಗೊಳ್ಳಲಾದ ತೀರ್ಮಾನಗಳು, ಅವುಗಳಲ್ಲಿ ಅಡಕವಾಗಿರುವ ಬಿಜೆಪಿ ಸರಕಾರದ ನೀತಿಗಳು ಜನರ ಜೀವನದ ಮೇಲೆ ಬೀರುವ ಪರಿಣಾಮದ ಬಗ್ಗೆ ಸಿ.ಪಿ.ಐ.(ಎಂ) ಪಕ್ಷದ ನಿಲುವು ಪತ್ರಿಕಾ ಗೋಷ್ಠಿಯಲ್ಲಿ ಬಿಡುಗಡೆ ಮಾಡಲಾದ ಈ ಹೇಳಿಕೆಯಲ್ಲಿದೆ.

ಮತದಾರರನ್ನ ಕೊಳ್ಳಲು ಸರ್ಕಾರದ ಹಣ : ರಾಜ್ಯದ ಬೀಜೆಪಿ ಸರ್ಕಾರ ಎದುರಿಸುತ್ತಿರುವ, ಹೊರ ಹಾಗೂ ಒಳ ಕುತ್ತುಗಳ ಹಿನ್ನೆಲೆಯಲ್ಲಿ ಸರ್ಕಾರದ ಉಳಿವಿನ ಬಗ್ಗೆ ಗಾಬರಿಗೊಂಡಿರುವ ಬಿಜೆಪಿ ಸರ್ಕಾರ ರಾಜ್ಯದಲ್ಲಿ ಮತದಾರರನ್ನ ಕೊಂಡುಕೊಳ್ಳಲು ಸರ್ಕಾರದ ಹಣವನ್ನ ಬಳಕೆಮಾಡಲು ಬಜೆಟ್ ಎಂಬ ಸಂವಿಧಾನಿಕ ಸಾಧನವನ್ನ ದುರ್ಬಳಕೆ ಮಾಡುವದೇ ಬಜೆಟ್ ಹಾಗೂ ಕೃಷಿ ಬಜೆಟ್‌ನ ಉದ್ದೇಶವಾಗಿದೆ. ಮುಖ್ಯಮಂತ್ರಿ ಯಡಿಯೂರಪ್ಪನವರಂತೂ, ಇದು ತಮ್ಮ ಕೊನೆಯ ಬಜೆಟ್ ಎಂದೇ ಭಾವಿಸಿ 17,000 ಕೋಟಿ ರೂ,ಗಳ ಹೆಚ್ಚಿನ ಸಾಲವನ್ನೆತ್ತಿ ಮುಂದಿನ ಬಜೆಟ್‌ಗಳನ್ನ ಅಪಾಯಕ್ಕೆ ಸಿಲುಕಿಸಿದ್ದಾರೆ.

ಕೃಷಿ ಬಜೆಟ್ : ಕೃಷಿ ಬಜೆಟ್ ಎಂದು ಬಹಳ ಬಾಜಾಬಜಂತ್ರಿಗಳಿಂದ ನಿನ್ನೆ ಮಂಡಿತವಾಗಿರುವ ಬಜೆಟ್, ಒಂದುಕಡೆ ಮತದಾರರನ್ನ ಕೊಳ್ಳುವಬಜೆಟ್ ಆದರೆ ಮತ್ತೊಂದುಕಡೆ ಭೂಮಾಫಿಯಾಗಳ ಬಜೆಟ್, ರೈತರಿಂದ ಭೂಅಪಹರಣದ ಬಜೆಟ್ ಆಗಿದೆ. ದೇವರಾಜ್ ಅರಸುಕಾಲದ ಜನಪರ ಭೂಸುಧಾರಣೆಯ ಹೃದಯಕ್ಕೇ ಇರಿಯುವ ಬಜೆಟ್ ಆಗಿದೆ. ಹೀಗಾಗಿ ರೈತರನ್ನ ನಿರ್ಗತಿಕರನ್ನಾಗಿಸುವ ರೈತವಿರೋಧಿ ಹಾಗೂ ಕೃಷಿವಿರೋಧಿ ಬಜೆಟ್ ಆಗಿದೆ. ಅದೇಸಮಯದಲ್ಲಿ ಕೃಷಿಯಲ್ಲಿ ತೊಡಗಿರುವ ಜನರಲ್ಲಿ ಶೇ.80 ಶೇ.ರಷ್ಟು ಭಾಗದ ಕೃಷಿಕೂಲಿಕಾರರ ಬಗ್ಗೆ ಒಂದೇ ಒಂದು ಮಾತಾಡದ ಬಜೆಟ್ ಕೃಷಿಬಜೆಟ್ ಆಗುವುದು ಹೇಗೆ?

ಭೂಸ್ವಾಧಿನವೋ ಭೂಅಪಹರಣವೋ : ರಾಜ್ಯ ಸರಕಾರ ಕಳೆದ ಮೂರುವರ್ಷಗಳಿಂದ ಸರ್ಕಾರದಿಂದ ಹಾಗೂ ಇತರ ಖಾಸಗಿ ಉದ್ಯಮಿಗಳಿಂದ ಅಪಾರ ಪ್ರಮಾಣದ ಭೂಸ್ವಾಧೀನಕ್ಕೆ ಮುಂದಾಗಿರುವದು ಎಲ್ಲರಿಗೂ ತಿಳಿದ ವಿಷಯ. ಈ ದಿಶೆಯಲ್ಲಿ, ಕೆ.ಐ.ಎ.ಡಿ.ಬಿ.ಯ ಭೂಹಗರಣಗಳೂ ಬೆಳಕಿಗೆ ಬಂದಿವೆ. ಜಾಗತಿಕ ಬಂಡವಾಳಿಗರ ಸಮಾವೇಶ, ಭೂಬ್ಯಾಂಕ್, ಖಾಸಗಿ - ಸರ್ಕಾರಿ ಸಹಭಾಗಿತ್ವದ ರಸ್ತೆಗಳು, ಇತ್ಯಾದಿಗಳ ಹೆಸರಿನಲ್ಲಿ ಹಲವು ಲಕ್ಷ ಎಕರೆಗಳನ್ನ ಭೂಸ್ವಾಧೀನ ಮಾಡಿಕೊಳ್ಳಲು ಮುಂದಾಗಿದೆ. ರಾಜ್ಯದಲ್ಲಿ, ಮುಖ್ಯವಾಗಿ ಬಳ್ಳಾರಿ, ಬಿಜಾಪುರ, ಜಿಲ್ಲೆಗಳಲ್ಲಿ ಒಂದು ಉಕ್ಕು ಕಾರ್ಖಾನೆಯ ಸ್ಥಾಪನೆಗೆ, 8-10,000 ಎಕರೆಗಳನ್ನ ಯಾವುದೇ ಮಾನದಂಡಗಳಿಲ್ಲದೇ, ಹುಚ್ಚಾಪಟ್ಟೆ ಭೂಮಿ ಸ್ವಾಧೀನಪಡಿಸಿಕೊಳ್ಳಲು ಹೊರಟಿರುವದನ್ನ, ಅಗ್ಗದ ಬೆಲೆಗೆ ರೈತರು ಭೂಮಿಯನ್ನ ಮಾರಲು ನಿರ್ಭಂಧ ಹೇರಿರುವದನ್ನ ಕಾಣುತ್ತಿದ್ದೇವೆ. ಇದಕ್ಕೆ ಬಳ್ಳಾರಿಜಿಲ್ಲೆಯ ರೈತರು ನಿರಂತರ ಸಂಘರ್ಷ ನಡೆಸಿದ್ದಾರೆ. ಈ ಭೂಸ್ವಾಧೀನಗಳನ್ನ ನಿಲ್ಲಿಸಿ ರೈತರ ಬದುಕನ್ನ ನಾಶಮಾಡುವದನ್ನ ನಿಲ್ಲಿಸುವದರ ಬಗ್ಗೆ, ಒಂದು ಸಕಾರಣ ಬೂಸ್ವಾಧೀನ ನೀತಿ ಆರೋಗ್ಯಕರ ಭೂಬೆಲೆ ನೀತಿಯ ಬಗ್ಗೆ ಒಂದು ಮಾತೂ ಈ ಬಜೆಟ್‌ನಲ್ಲಿಲ್ಲ. ರಾಜ್ಯದ ಕೃಷಿಯ ಉಳಿವಿನ, ರೈತರ ಬದುಕಿನ ಒಂದುಪ್ರಮುಖ ಪ್ರಶ್ನೆಯ ಬಗ್ಗೆ ಈ ಕೃಷಿಬಜೆಟ್ ಗಮನ ಹರಿಸಿಲ್ಲ ಎನ್ನುವದೇ, ಇದು ಕೃಷಿಯ ಉದ್ಧಾರಕ್ಕಾಗಿ ತಂದ ಬಜೆಟ್ ಅಲ್ಲಾ ಎನ್ನುವದನ್ನ ಸಾಬೀತುಪಡಿಸುತ್ತದೆ.

ಆದರೆ ಅದೇ ಸಮಯದಲ್ಲಿ, "ಸಾರ್ವಜನಿಕರಿಗೆ ಭೂಲಭ್ಯತೆ ಹೆಚ್ಚಿಸಲು" ಎಲ್ಲಾ ಉದ್ದೇಶಗಳಿಗೆ ಸುಲಭವಾಗಿ ಭೂಮಿ ದೊರಕುವಂತೆ ಮಾಡಲು" ಭೂಸುಧಾರಣಾಕಾಯ್ದೆ ಹಾಗೂ ಭೂಕಂದಾಯ ಕಾಯ್ದೆಗಳನ್ನ ತಿದ್ದುಪಡಿಮಾಡುವದೆಂದು ಸರ್ಕಾರ



ಘೋಷಿಸಿದೆ. ಬಜೆಟ್ ಘೋಷಣೆಯ ಜೊತೆಜೊತೆಯಲ್ಲಿಯೇ ಭೂಸುಧಾರಣಾ ಕಾಯ್ದೆಗೆ ತಿದ್ದುಪಡಿಗಳನ್ನೂ ಸಚಿವ ಸಂಪುಟ ಅಂಗೀಕರಿಸಿದೆಯೆಂದೂ ವರದಿಯಾಗಿದೆ.

ಈ ತಿದ್ದುಪಡಿಗಳು ಈಗಾಗಲೇ ಹೇಳಿದಂತೆ ಯಾವುದೇ ನಿರ್ಭಂಧಗಳಿಲ್ಲದೇ, ಯಾರು ಬೇಕಾದರೂ ಎಷ್ಟು ಬೇಕಾದರೂ, ಕೃಷಿಭೂಮಿಯನ್ನ ಕೊಳ್ಳಲು, ಅಮಾಯಕ ರೈತರನ್ನ ಬಲಿತೆಗೆದುಕೊಳ್ಳಲು, ಭೂಮಾಫಿಯಾಕ್ಕೆ, ದೊಡ್ಡಕಂಪೆನಿಗಳಿಗೆ ನೀಡುವ ಸ್ವಾತಂತ್ರ್ಯವಾಗಿದೆ. ಜಾಗತಿಕ ಹೂಡಿಕೆದಾರರ ಸಮಾವೇಶದಂತೆ, ಕೃಷಿಬಂಡವಾಳ ಹೂಡಿಕೆದಾರರ ಜಾಗತಿಕ ಸಮಾವೇಶ, ಕೃಷಿ-ವಾಣಿಜ್ಯನೀತಿ, ಜಾಗತಿಕ ಹಾಗೂ ದೇಶದ ದೊಡ್ಡಬಂಡವಾಳದಾರರಿಗೆ, ಕೃಷಿಭೂಮಿಯನ್ನ ಲಪಟಾಯಿಸಲು ಸಹಕಾರನೀಡುವ ಯೋಜನೆಗಳೇ ಆಗಿವೆ. ಇದು ರೈತರಿಗೆ, ಆಹಾರೋತ್ಪಾದನೆಗೆ ಒಟ್ಟಾರೆ ಕೃಷಿಗೆ ಮಾರಕವಾಗಿದೆ.

ಸಾವಯವ ಕೃಷಿ, ಗೋಶಾಲೆ, ಆಯುರ್ವೇದದ ಮೂಲಿಕೆಗಳ ಬೆಳವಣಿಗೆಗೆ, ಜೈವಿಕ ಇಂಧನದ ಹೆಸರಿನಲ್ಲಿ ಅರಣ್ಯ ಭೂಮಿಯು ಸೇರಿದಂತೆ ಸರ್ಕಾರಿ ಭೂಮಿಯನ್ನು ಸಂಘ ಪರಿವಾರದ ಅನೇಕ ಸಂಸ್ಥೆಗಳಿಗೆ ಭೂಮಿ ನೀಡುವ, ಭೂಮಿಯನ್ನು ಕೊಂಡು ನೀಡುವ ಒಳಹುನ್ನಾರವನ್ನು ಅನೇಕ ಯೋಜನೆಗಳು ಹೊಂದಿವೆ.

ಮತದಾರರನ್ನ ಕೊಳ್ಳಲು ಸರಕಾರದ ಹಣ : ಸರ್ಕಾರ ಹಣವನ್ನ ಅಪಾರ ಪ್ರಮಾಣದಲ್ಲಿ ಸಾಲಎತ್ತಿ ಮಾಡಲು ಹೊರಟಿರುವದೇನು? ಹಲವು ಸಾವಿರ ಕೋಟಿಗಳನ್ನ ಕೃಷಿಅಭಿವೃದ್ಧಿಯ ಹೆಸರಿನಲ್ಲಿ, ಇನ್ನೂ ಬೇರೆ ಬೇರೆ ಹೆಸರಿನಲ್ಲಿ ಜನರಿಗೆ ಹಣ ಹಂಚುವುದೇ ಕೃಷಿ ಬಜೆಟ್ ಹಾಗೂ ಸಾಮಾನ್ಯ ಬಜೆಟ್‌ನ ಮುಖ್ಯಧ್ಯೇಯವಾಗಿದೆ. ಇದಕ್ಕೆ ಅನೇಕ ಉದಾಹರಣೆಗಳನ್ನು ನೀಡಬಹುದಾಗಿದೆ, ಅದರಲ್ಲಿ ಒಂದು ಉದಾಹರಣೆ ಮಾತ್ರ ಸಾಕು. ಎರಡು ಎಕರೆಗಿಂತ ಕಡಿಮೆ ಭೂಮಿ ಇರುವ ಸುವರ್ಣಭೂಮಿ ಎಂಬ ಹೆಸರಿನಲ್ಲಿ 10 ಲಕ್ಷ ಕುಟುಂಬಗಳಿಗೆ ಒಂದು ಕುಟುಂಬಕ್ಕೆ 10,000 ರೂನಂತೆ ನೇರ ಹಣ ಸಂದಾಯ ಮಾಡುವುದು ಈ ಯೋಜನೆ. ಅದಕ್ಕೆ ಪ್ರೋತ್ಸಾಹಧನವೆಂದು ಹೆಸರಿಡಲಾಗಿದೆ. ಹೀಗೆ ಹಣ ಹಂಚುವ ಈ ಯೋಜನೆಯನ್ನು ಯಾವುದೇ ತಾಂತ್ರಿಕ ಮಾತುಗಳಲ್ಲಿ ಮುಚ್ಚಿಕೊಂಡರೂ ಕೂಡ 35-40 ಲಕ್ಷ ಮತದಾರರಿಗೆ ಅವರ ಮತಗಳನ್ನು ಕೊಳ್ಳುವ ಸರ್ಕಾರದ ಹಣವನ್ನು, ಸಾಲ ಮಾಡಿದ ಹಣವನ್ನು ನೀಡುವುದೇ ಆಗಿದೆ.

ಕೃಷಿ ಬಜೆಟ್‌ನಲ್ಲಿ ಕೂಲಿಕಾರರಿಗೆ ಎಡೆಯಿಲ್ಲ: ರಾಜ್ಯದಲ್ಲಿ ಕೃಷಿಯಲ್ಲಿ ತೊಡಗಿರುವ ಜನತೆಯಲ್ಲಿ ರೈತಾಪಿ ಜನತೆ ಒಂದು ಭಾಗವಾದರೆ ಕೃಷಿ ಕೂಲಿಕಾರರು ಅದರ ಅರ್ಧ ಭಾಗಕ್ಕಿಂತ ಹೆಚ್ಚು. ಕೃಷಿ ಕೂಲಿಕಾರರಲ್ಲಿ ಶೇ 60ಕ್ಕಿಂತ ಹೆಚ್ಚು ಭಾಗ ಮಹಿಳೆಯರು, ದಲಿತ, ಹಿಂದುಳಿದ ಜಾತಿಗಳ ಸಮುದಾಯವೇ ಶೇ 80ರಷ್ಟು ಕೆಲಸ ಕಡಿಮೆಯಾಗಿರುವುದರಿಂದ, ತೀವ್ರವಾಗಿ ಬಳಲಿರುವವರು ಕೃಷಿ ಕೂಲಿಕಾರರು. ಕೃಷಿ ಕೂಲಿಕಾರರೇ ಇಲ್ಲವೆಂಬುವಂತೆ ರೂಪಿಸಿರುವ ಬಜೆಟ್ ಕೃಷಿ ಬಜೆಟ್ ಹೇಗಾಗುತ್ತದೆ ? ಅವರ ಕನಿಷ್ಠ ಕೂಲಿಯ ಬಗ್ಗೆ, ಆಹಾರ, ಆರೋಗ್ಯಗಳ ಬಗ್ಗೆ ಒಂದು ಮಾತಿಲ್ಲ. ಉದ್ಯೋಗ ಖಾತರಿ ಯೋಜನೆಯ ಬಗ್ಗೆ ಅದನ್ನು ಬಳಸಿ ಬಿಜೆಪಿ ಬೆಂಬಲಿತ ಕಂಟ್ರಾಕ್ಟರ್‌ಗಳು ಲೂಟಿ ಹೊಡೆಯುತ್ತಿರುವ ಬಗ್ಗೆ ಅದನ್ನು ನಿಯಂತ್ರಿಸುವ ಬಗ್ಗೆ ಒಂದು ಚಕಾರವಿಲ್ಲ. ಅದರ ಕೂಲಿ ಹೆಚ್ಚಳ ಮಾಡುವ ಬಗ್ಗೆ, ರಾಜ್ಯದಲ್ಲೂ ಕೂಲಿಕಾರರಿಗೆ ಕೆಲಸ ನೀಡುವ ಬಗ್ಗೆ ಅವರ ವಲಸೆ ನಿಲ್ಲಿಸುವ ಬಗ್ಗೆ, ವಲಸೆ ಕಾರ್ಮಿಕರಿಗೆ ಆಹಾರ, ವಸತಿ, ರಕ್ಷಣೆಯ ಬಗ್ಗೆ ಸಾಮಾನ್ಯ ಬಜೆಟ್‌ನಲ್ಲಿಯೂ ಒಂದೇ ಒಂದು ಇಲ್ಲ.

ಕೃಷಿ ಕೂಲಿಕಾರರ ಹೊಟ್ಟೆಯ ಮೇಲೆ ಹೊಡೆಯುವ ನೀತಿ : ಈಗ ಕೃಷಿ ಕೂಲಿಕಾರರಿಗೆ ಲಭ್ಯವಿರುವ ಕೆಲಸವೇ ಕಡಿಮೆಯಾಗುತ್ತಿರುವ ಕಬ್ಬು ನಾಟಿಯಂತ್ರ, ಕಬ್ಬು ಕಟಾವು ಯಂತ್ರಗಳಿಗೆ ಶೇ 50 ರಷ್ಟು ಸಹಾಯಧನ ನೀಡಿ ಅವರ ಬದುಕನ್ನು ಕತ್ತಲೆಗೆ ದೂಡುವ ನೀತಿಯು ಥಾಳಾಗಿದೆ.

ಸಾವಯುವ ಕೃಷಿಯ ಹೆಸರಿನಲ್ಲಿ ಕಂಪನಿ ಕೃಷಿಯನ್ನು ಪ್ರೋತ್ಸಾಹಿಸುವ ಬಜೆಟ್ : ಸರ್ಕಾರ ಸಾವಯವ ಕೃಷಿಯ ಬಗ್ಗೆ ಬಹಳ ಮಾತನಾಡುತ್ತಿದೆ. ಮುಖ್ಯಮಂತ್ರಿಗಳೂ ತಮ್ಮ ಅಮೂಲ್ಯ ವೇಳೆಯನ್ನು ಅದಕ್ಕಾಗಿ ಮೀಸಲಿಡುತ್ತಿದ್ದಾರೆ. ಆದರೆ ಅವೆಲ್ಲವೂ ಹೊರ ತೋರಿಕೆಯ ಮಾತುಗಳಷ್ಟೇ ಆಗಿವೆ. ಆದರೆ ಕೃಷಿ ಬಜೆಟ್‌ನ ದಿಕ್ಕು ಪೂರ್ಣವಾಗಿ ಕೃಷಿಯ ಕಂಪನೀಕರಣದತ್ತ. ರೈತ ಕೃಷಿಯ ನಾಶ ಕಂಪನಿ ಕೃಷಿಯ ಬೆಳವಣಿಗೆ ಇದು ಕೃಷಿ ಬಜೆಟ್‌ನ ಗುರಿಯಾಗಿದೆ. ಭೂ ದಾಖಲೆಗಳ ನವೀಕರಣ ಮಾರುಕಟ್ಟೆಗಳ ಕಂಪ್ಯೂಟರೀಕರಣದ ಗುರಿಯೂ ಇದೇ ಆಗಿದೆ.

ಕೃಷಿ ಸಾಲದ ಕೊರತೆಗಳು ಮತ್ತು ರೈತರ ಆತ್ಮಹತ್ಯೆಗಳು : ಬಡ್ಡಿಯ ಪ್ರಮಾಣವನ್ನು ಕೇಂದ್ರ ಸರ್ಕಾರವೂ ಇಳಿಸುತ್ತಿದೆ. ಧರ್ಮಸಿಂಗ್ ಸರ್ಕಾರದಿಂದ ಆರಂಭಿಸಿ ರಾಜ್ಯ ಸರ್ಕಾರವು ಶೇ 3ರಷ್ಟು ಬಡ್ಡಿಯ ವಿನಾಯಿತಿ ನೀಡುತ್ತಿದೆ. ಆದರೆ ರಾಜ್ಯ ಸರ್ಕಾರವೇ ಹೇಳಿದಂತೆ ರಾಜ್ಯದಲ್ಲಿ ಶೇ76 ಲಕ್ಷ ಕೃಷಿ ಕುಟುಂಬಗಳಿವೆ. ಇತ್ಯಾದಿಗಳಲ್ಲಿ ಕೇವಲ 25-26ಲಕ್ಷ ಕುಟುಂಬಗಳಿಗೆ ಮಾತ್ರ ಕೃಷಿಯ ಸಾಂಸ್ಥಿಕ ಸಾಲದ ಕಡಿಮೆ ಬಡ್ಡಿಯ ಪ್ರಯೋಜನೆ ಸಿಗುತ್ತಿದೆ. ಉಳಿದವರ ಪಾಡಿನ ಬಗ್ಗೆ ಕೃಷಿ ಬಜೆಟ್‌ನಲ್ಲಿ ಚಕಾರವಿಲ್ಲ. ಖಾಸಗಿ ಲೇವಾದೇವಿಗಾರರ ಸುಳಿಯಲ್ಲಿ ಸಿಲುಕಿದ ರೈತರ ಆತ್ಮಹತ್ಯೆಗಳ ಬಗ್ಗೆ ಪ್ರಸ್ತಾಪವಿಲ್ಲ. ಖಾಸಗೀ ಲೇವಾದೇವಿಯ ವಿಪರೀತ ಬಡ್ಡಿಗಳು, ಅವರ ಕಿರುಕುಳ ತಪ್ಪಿಸುವ, ನಿಯಂತ್ರಿಸುವ ಒಂದೇ ಒಂದು ಮಾತಿಲ್ಲ. ಅದಕ್ಕೆ ಬದಲಾಗಿ ಸಹಕಾರಿ ಸಂಘಗಳ ಆರೋಗ್ಯವನ್ನು ಕೆಡಿಸುವ ವೈದ್ಯನಾಥ್ ವರದಿ ಜಾರಿ ಮಾಡಲು ಸರ್ಕಾರ ಮುಂದಾಗಿದೆ.

ಬೆಲೆ ಏರಿಕೆ ನಿಯಂತ್ರಣ, ಪಡಿತರ ವ್ಯವಸ್ಥೆ, ಪೆಟ್ರೋಲ್ ಬೆಲೆಗಳು : ಬೆಲೆ ಏರಿಕೆ ವಿಪರೀತವಾಗಿದೆ ಎಂಬ ತುಟಿಯಂಚಿನ ಮಾತುಗಳನ್ನು ಹೊರತುಪಡಿಸಿದರೆ ರಾಜ್ಯದಲ್ಲಿನ ಕಾಳಸಂತೆಕೋರರ ಪಾತ್ರ ಅವರನ್ನು ನಿಯಂತ್ರಿಸುವ ಕೆಲಸ, ಒಬ್ಬರಿಗೆ ನಾಲ್ಕೇ ಕೆ.ಜಿ.ಎನ್ನು ಯೂನಿಟ್ ಪದ್ಧತಿ, ಸಾರ್ವತ್ರಿಕ ಪಡಿತರ ವ್ಯವಸ್ಥೆ, ಎಪಿಎಲ್ ಕಾರ್ಡುದಾರರಿಗೆ ಆಹಾರ ಧಾನ್ಯಗಳು, ಇವುಗಳ ಬಗ್ಗೆ ಚಕಾರವಿಲ್ಲ ಬೆಲೆ ಏರಿಕೆಗೆ ತಕ್ಕನಾಗಿ ಕನಿಷ್ಠ ಕೂಲಿ ಏರಿಸುವ ಬಗ್ಗೆ 2 ವರ್ಷಗಳಿಂದ ಕಾರ್ಮಿಕರು ಲಾಠಿಯೇಟು ಎದುರಿಸಿ ಹಲವಾರು ಹೋರಾಟ ಮಾಡಿದರೂ ಅದರ ಬಗ್ಗೆ ಚಕಾರವಿಲ್ಲ. ಸರ್ಕಾರಿ ನೌಕರರು, ಖಾಸಗಿ ಕಂಪನಿಗಳ ನೌಕರರ ವೇತನ ಏರಿಕೆ ಬಗ್ಗೆ, ಒಂದೇ ಶಬ್ದವಿಲ್ಲ ಆದರೆ ಸಚಿವ ಸಂಪುಟ ಬಂಡವಾಳಶಾಹಿ ಮಾಲಿಕರ ಓವರ್ ಟೈಂ ಹೆಚ್ಚಿಸುವ ನೀತಿಯನ್ನು ದಿಢೀರ್ ಎಂದು ಒಪ್ಪಿಬಿಟ್ಟಿದೆ.

ಖಾಸಗೀ ಸಹಭಾಗಿತ್ವ : ರಾಜ್ಯ ಸರ್ಕಾರ ಬೃಹತ್‌ಬಜೆಟ್ ಎಂದು ಜಾಗಟೆ ಬಾರಿಸುತ್ತಿದ್ದರೂ ಕೂಡ ಪ್ರತಿಯೊಂದು ವಿಷಯದಲ್ಲಿಯೂ ಖಾಸಗೀ ಸಹಭಾಗಿತ್ವಕ್ಕೆ ಮುಂದಾಗಿದೆ. ರಾಜ್ಯದ ಜನತೆ ಖಾಸಗಿ ಬಂಡವಾಳಿಗರ ಲಾಭದಾಹಕ್ಕೆ ತುತ್ತಾಗಿ ಬಳಲುವುದು ಬಿಜೆಪಿಯ ನೀತಿಯ ಅವಶ್ಯವಾದ ಭಾಗವಾಗಿದೆ. ವಿದ್ಯುತ್ ಉತ್ಪಾದನೆ, ರಸ್ತೆ ಮತ್ತಿತರ ಮೂಲಭೂತ ಸೌಕರ್ಯಗಳ ಜೊತೆ ತೋಟಗಾರಿಕೆ ಕ್ಷೇತ್ರಗಳು ಪಶುಸಂಗೋಪನಾ ಕ್ಷೇತ್ರಗಳ ಭೂಮಿ, ಆಸ್ಪತ್ರೆಗಳು ಇತ್ಯಾದಿಗಳನ್ನು ಖಾಸಗಿಯವರ ಕೈಗೊಪ್ಪಿಸುವ ಹುನ್ನಾರ ಬಜೆಟ್‌ನಲ್ಲಿ ಅಡಗಿದೆ.

ಪದೇ ಪದೇ 'ಪರಿಣತ ಸಂಸ್ಥೆಗಳ' ಎಂಬ ಮಾತು ಬಜೆಟ್‌ನಲ್ಲಿ ಬಂದಿದೆ. ಇದರಲ್ಲಿ ಕೆಲವು ಸಾರ್ವಜನಿಕ ಸಂಶೋಧನ ಸಂಸ್ಥೆಗಳು ಬರಬಹುದಾದರೂ ಬಹುಪಾಲು ವಿದೇಶಿ ಖಾಸಗಿ ಕನ್ಸಲ್ಟೆಂಟುಗಳು ಮತ್ತು ಖಾಸಗಿ ಕಂಪನಿಗಳನ್ನು ಪ್ರೋತ್ಸಾಹಿಸುವ ಐ.ಐ.ಎಂ.ನಂತಹ ಸಂಸ್ಥೆಗಳು ಇವು ಎನ್ನುವ ಅನುಮಾನಕ್ಕೆ ಎಡೆ ಮಾಡಿದೆ.

ಭ್ರಷ್ಟಾಚಾರದ ಬಗ್ಗೆ ಸೊಲ್ಲೆತ್ತದ ಬಜೆಟ್ : ರಾಜ್ಯದಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಹಗರಣಗಳ ಮೇಲೆ ಹಗರಣಗಳು ಹೊರಬೀಳುತ್ತಿವೆ. ಅಧಿಕಾರಿಗಳ ಮೇಲೆ ಲೋಕಾಯುಕ್ತರು ಅನೇಕ

ಪುಟ 4 ಕ್ಕೆ

ನೆರೆ ಹೊರೆ

ತಮಿಳುನಾಡು: ಡಿಎಂಕೆ ಮತ್ತು ಕಾಂಗ್ರೆಸ್ ಮೈತ್ರಿಕೂಟ ಸೋಲಿಸುವತ್ತ .....

ಕೇರಳ,ಬಂಗಾಳಗಳಂತೆಯೇ ವಿಧಾನಸಭಾ ಚುನಾವಣೆಯ ಹೊಸ್ತಿಲಲ್ಲಿ ಇರುವ ರಾಜ್ಯ ತಮಿಳು ನಾಡು. ಅಲ್ಲಿನ ಪರಿಸ್ಥಿತಿ ಏನಿದೆ ಎಂಬುದು ಸಹಜವಾಗಿ ಕುತೂಹಲದ ವಿಷಯ. ಯುಪಿಎ ಕೂಟದ ಭಾಗವಾದ ಡಿಎಂಕೆ ಪಕ್ಷವು ಇಲ್ಲಿ ಅಧಿಕಾರದಲ್ಲಿದೆ. ಕೇಂದ್ರ ಯುಪಿಎ ಸರ್ಕಾರದಲ್ಲಿ ಡಿಎಂಕೆಯನ್ನು ಪ್ರತಿನಿಧಿಸಿದ್ದ ಡಿ. ರಾಜಾ ಈಗ ತಿಹಾರ್ ಜೈಲಿನಲ್ಲಿ ಕಂಬಿ ಎಣಿಸಬೇಕಾಗಿ ಬಂದಿದೆ ಎಂಬುದು ಮತ್ತು ಯಾಕೆ ಎಂಬುದು ಈಗ ದೇಶಕ್ಕೆಲ್ಲಾ ಗೊತ್ತಿರುವ ಸಂಗತಿ. ಇನ್ನು ಕರುಣಾನಿಧಿಯವರ ಸಚಿವ ಸಂಪುಟದ ಸದಸ್ಯರು ತಾವು ಯಾರಿಗೇನೂ ಕಮ್ಮಿ ಇಲ್ಲ ಎಂದು ಅಲ್ಲಿ ಸಾಬಿತು ಮಾಡುತ್ತಿದ್ದಾರೆ. ಭ್ರಷ್ಟಾಚಾರವೇ ಕಾರ್ಯ ವಿಧಾನವಾಗಿರುವ ರಾಜ್ಯದಲ್ಲಿ ರಾಜ್ಯವ್ಯಾಪಿ ಸಿಕ್ಕಷ್ಟು ಗೋರಿಕೊಂಡು ಆಸ್ತಿ ಗುಡ್ಡೆ ಹಾಕಿಕೊಳ್ಳುವ ಯತ್ನ ಸಚಿವರದು.

ಇಂತಹ ನಾಡಿನಲ್ಲಿ ಅಕ್ರಮ ಆಲ್ಕೋಹಾಲ್ ದಂಧೆ, ಅಕ್ರಮ ಲೇವಾದೇವಿ ವ್ಯವಹಾರಗಳು, ಭೂ ಮಾಫಿಯಾ, ಭೂಗಳ್ಳತನ, ಅಕ್ರಮ ಮರಳು ಸಾಗಣೆ, ಶಿಕ್ಷಣ ರಂಗದಲ್ಲಿ ಅಕ್ರಮ ವಂತಿಗೆ ಹಾವಳಿ ಇವೆಲ್ಲಾ ಸೇರಿ ರಾಜ್ಯದಲ್ಲಿ ಪರ್ಯಾಯ ಆಡಳಿತನ್ನೇ ನಡೆಸುತ್ತಿರುವ ಹಾಗಿದೆ.

ಇಂತಹ ಪರಿಸ್ಥಿತಿಯ ಫಲವಾಗಿ ಕೊಲೆ, ಹಲ್ಲೆಗಳು, ಲಾಕಪ್ ಡೆತ್‌ಗಳು ಸಾಮಾನ್ಯ ಎಂಬಂತಾಗಿವೆ. ಅಪರಾಧ ಪ್ರಮಾಣ ಬೆಲೆಗಳು ಏರಿದಂತೆಯೇ ಏರುತ್ತಿದೆ.

ಕಳೆದ ಚುನಾವಣೆಯ ಸಂದರ್ಭದಲ್ಲಿ ಡಿಎಂಕೆ ಪಕ್ಷವು ಪ್ರತಿ ಭೂಹೀನ ಕುಟುಂಬಕ್ಕೂ ತಲಾ ಎರಡು ಎಕರೆ ಭೂಮಿ ನೀಡುವುದಾಗಿ ಭರವಸೆ ನೀಡಿತ್ತು. ಅದು ಜಾರಿಯಾಗಲಿಲ್ಲ ಅಂತ ಬೇರೆ ಹೇಳಬೇಕಾಗಿಲ್ಲ. ಧಾರಾಳ ಭೂಮಿ ಸಿಕ್ಕಿರುವುದುಂಟು. ಆದರೆ ಬಡವರಿಗಲ್ಲ, ಬಹುರಾಷ್ಟ್ರೀಯ ಕಂಪನಿಗಳಿಗೆ.

ರೈತರ ಆತ್ಮಹತ್ಯೆಗಳು ತಡೆ ಇಲ್ಲದೇ ಸಾಗಿವೆ. ರಾಜ್ಯದಲ್ಲಿ 62 ಲಕ್ಷ ನೋಂದಾಯಿತ ಶಿಕ್ಷಿತ ನಿರುದ್ಯೋಗಿಗಳು ಕೆಲಸಕ್ಕಾಗಿ ಕಾಯುತ್ತಿದ್ದಾರೆ. ಲಕ್ಷ ಲಕ್ಷ ಜನ ಬಡವರು ಕೂಲಿ ಹುಡುಕುತ್ತಾ ಗುಳೆ ಎದ್ದು ಊರೂರು ಅಲೆಯುವ ಪರಿಸ್ಥಿತಿ ತಪ್ಪಲಿಲ್ಲ. ಅಸ್ಪೃಶ್ಯತೆ, ಅಪಮಾನಗಳ ವಿರುದ್ಧದ ಹೋರಾಟಗಾರರು ಸರ್ಕಾರಕ್ಕೆ ಅನಗತ್ಯ ಕಿರಿಕಿರಿ ಮಾಡುವವರಾಗಿದ್ದಾರೆ.

ಕೇಂದ್ರದ ಜನ ವಿರೋಧಿ ನೀತಿಗಳನ್ನೇ ಜಾರಿಗೆ ತರುತ್ತಿರುವ ಸರ್ಕಾರ ಅವಶ್ಯಕ ವಸ್ತುಗಳ ಬೆಲೆ ಏರಿಕೆ ಗಗನಕ್ಕೆ ಏರಿದರೂ ಏನೊಂದು ಮಾತನಾಡದೇ ಸುಮ್ಮನಿರುತ್ತದೆ. ದುಡಿಮೆ ತಕ್ಕ ಪ್ರತಿಫಲ-ನ್ಯಾಯ ಕೇಳಿ ಹೋರಾಟ ನಡೆಸುವ ಕಾರ್ಮಿಕರ ಮೇಲೆ ಪೋಲೀಸರ ಲಾಠಿ ಏಟೋ ಅಥವಾ ಡಿಎಂಕೆ ಭೂ ಬಿಟ್ಟ ಗೂಂಡಾಗಳ ಏಟೋ ಎಂಬುದಷ್ಟೆ ಪ್ರಶ್ನೆ. ಏಟು ಮಾತ್ರ ಗ್ಯಾರಂಟಿ. ಇದು ಪರಿಸ್ಥಿತಿ.

ಇಂತಹ ರಾಜಕೀಯ ಪರಿಸ್ಥಿತಿಯಲ್ಲಿ ಜನಾಂದೋಲನ ಬೆಳೆಸಲು ಶ್ರಮಿಸುತ್ತಿರುವ ಸಿಪಿಐ(ಎಂ) ರಾಜ್ಯದಲ್ಲಿ ಡಿಎಂಕೆ-ಕಾಂಗ್ರೆಸ್ ಮೈತ್ರಿ ಕೂಟವನ್ನು ಸೋಲಿಸುವ ನಿಟ್ಟಿನಲ್ಲಿ ಕೆಲಸ ಮಾಡಲು ಹಾಗೂ ಮುಂದಿನ ವಿಧಾನ ಸಭಾ ಚುನಾವಣೆಗಳನ್ನು ಎಐಎಡಿಎಂಕೆ ಪಕ್ಷದ ಜೊತೆ ಹೊಂದಾಣಿಕೆ ಯೊಂದಿಗೆ ಎದುರಿಸಲು ತೀರ್ಮಾನಿಸಿದೆ.

ಸಿಪಿಐ(ಎಂ) ಪಕ್ಷದ ತಮಿಳು ನಾಡು ರಾಜ್ಯ ಸಮಿತಿಯು ಕೈಗೊಂಡಿರುವ ಈ ತೀರ್ಮಾನದೊಂದಿಗೆ ಚುನಾವಣಾ ಪ್ರಕ್ರಿಯೆಗೆ ಹೊಸ ಚಾಲನೆ ಸಿಕ್ಕಂತಾಗಿದೆ. ಮುಂದಿನ ಬೆಳವಣಿಗೆಗಳೇನೇನು? ಕಾದು ನೋಡೋಣ. ಪಟ್ಟಾಳಿ ಮಕ್ಕಳ್ ಕಚ್ಚಿ (ಪಿಎಂಕೆ)ಯು ಡಿಎಂಕೆಯೊಂದಿಗೆ ಹೊಂದಾಣಿಕೆಗೆ ಮುಂದಾಗಿದೆ ಎಂಬುದು ಈ ಸಂಬಂಧದ ಇನ್ನೊಂದು ಸುದ್ದಿ.

★

ಜಾರ್ಖಂಡ್; ಒಕ್ಕಲೆಬ್ಬಿಸುವಿಕೆ ವಿರುದ್ಧ ಹೋರಾಟ

ಜಾರ್ಖಂಡ್ ರಾಜ್ಯದಲ್ಲಿ ಒಟ್ಟು 445 ಜಿಲ್ಲಾ ಪಂಚಾಯ್ತಿ ಕ್ಷೇತ್ರಗಳ ಪೈಕಿ 40 ರಲ್ಲಿ ಸ್ಪರ್ಧಿಸಿ 11 ಸ್ಥಾನಗಳಲ್ಲಿ ಸಿಪಿಐ(ಎಂ) ಪಕ್ಷವು ಗೆದ್ದಿದೆ ಎಂಬ ಸುದ್ದಿಯನ್ನು (ಆಗ 10 ಸ್ಥಾನ ಗೆದ್ದ ಬಗ್ಗೆ ವರದಿ ಇತ್ತು.) ಇತ್ತೀಚೆಗೆ ಇದೇ ಅಂಕಣದಲ್ಲಿ ಓದಿದ್ದೀರಿ. ಈ ಹಿಂದಿನ ಚುನಾವಣಾ ಫಲಿತಾಂಶಗಳ ಬಗೆಗೆ ಹೋಲಿಸಿದರೆ ಇದು ಕೊಂಚ ಉತ್ಸಾಹದಾಯಕವಾದ ಫಲಿತಾಂಶವೇ.

ಇಂಥಾ ಕೆಲವು ಗೆಲುವಿನ ಬಲವನ್ನು ಬೆನ್ನಿಗಿಟ್ಟು ಕೊಂಡು ಸಿಪಿಐ(ಎಂ) ಪಕ್ಷವು ಅಲ್ಲೀಗ ವಿವಿಧ ಕಾರಣಗಳಿಗಾಗಿ ಒಕ್ಕಲೆಬ್ಬಿಸಲಾಗುತ್ತಿರುವ ಬುಡಕಟ್ಟು ಜನರ ಬದುಕಿನ ರಕ್ಷಣೆಗಾಗಿ ಹೋರಾಟವನ್ನು ತೀವ್ರಗೊಳಿಸುವ ಪ್ರಯತ್ನಕ್ಕೆ ಕೈ ಹಾಕಿದೆ.

ಸಿಪಿಐ(ಎಂ) ಮುತುವರ್ಜಿಯ ಆಧಾರದಲ್ಲಿ ಜಾರ್ಖಂಡ್ ರಾಜಧಾನಿ ರಾಂಚಿಯಲ್ಲಿ ಫೆಬ್ರವರಿ 5 ರಂದು ಬುಡಕಟ್ಟು ಜನರು, ದಲಿತರು ಮತ್ತು ಇತರ ಸಮುದಾಯಗಳ ಒಕ್ಕಲೆಬ್ಬಿಸುವಿಕೆ ವಿರೋಧಿ ಸಮಾವೇಶವೊಂದು ನಡೆಯಿತು. ರಾಜ್ಯದ ಐದು ಎಡಪಕ್ಷಗಳು ಈ ಪ್ರಯತ್ನದಲ್ಲಿ ಕೈ ಜೋಡಿಸಿದ್ದು ಹೋರಾಟದ ಯತ್ನಕ್ಕೆ ಹೊಸ ಹುರುಪು ತಂದಿದೆ.

ಚೋಟಾ ನಾಗಪುರ ಗೇಣಿ (ಸಿಎನ್‌ಟಿ) ಕಾಯ್ದೆ-(1908), ಸಂತಾಲ್ ಪರಗಣ ಗೇಣಿ (ಎಸ್‌ಪಿಟಿ)ಕಾಯ್ದೆ ಎಂಬ ಎರಡು ಪ್ರಮುಖ ಕಾಯ್ದೆಗಳು ಜಾರ್ಖಂಡ್ ನಲ್ಲಿ ಇವೆ. ಇವು ಗೇಣಿದಾರರಿಗೆ ಒಕ್ಕಲೆಬ್ಬಿಸುವಿಕೆಯಿಂದ ಒಂದಷ್ಟು ರಕ್ಷಣೆ ಒದಗಿಸುವ ಕಾಯ್ದೆಗಳು. ಇವು ಬ್ರಿಟೀಷರ ಕಾಲದಲ್ಲಿ ತರಲಾದಂತಹವು. ಹಾಗಂತ ಬ್ರಿಟಿಷರ ಬಗೆಗೆ ನಾವೇನೂ ಕೊಂಡಾಡುವುದೇನು ಇಲ್ಲ. ಈ ಕಾಯ್ದೆಗಳು ಬಂದ ಹಿನ್ನೆಲೆ ಭರ್ಜರಿಯಾಗಿಯೇ ಇದೆ.

ಇವತ್ತಿನ ಜಾರ್ಖಂಡ್‌ನ ಪ್ರದೇಶವು ಸುಮಾರು 150 ವರ್ಷಗಳಿಗೂ ಹಿಂದೆ ಅಂದರೆ 1857 ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಒಂದು ಕುದಿ ಬಿಂದುವಾಗಿತ್ತು. ಸ್ವಾತಂತ್ರ್ಯ ಹೋರಾಟದಿಂದ ಸ್ಫೂರ್ತಿಗೊಂಡ ಇಲ್ಲಿನ ಬುಡಕಟ್ಟು ಜನ ತಮ್ಮ ಪಾರಂಪರಿಕ ಭೂಮಿ ಹಕ್ಕಿನ ರಕ್ಷಣೆಗಾಗಿ ತೀವ್ರವಾಗಿ ಬಂಡಾಯವೆದ್ದಿದ್ದರು. ಇಂತಹ ಹಲವು ಬಂಡಾಯ ಹೋರಾಟಗಳ ನಂತರ ಬ್ರಿಟೀಷರು ಈ ಮೇಲೆ ಹೇಳಿದ ಕಾಯ್ದೆಯನ್ನು ತರಲೇ ಬೇಕಾಯಿತು.

ಕಾನೂನು ಬಂತು. ದೇಶಕ್ಕೆ ಸ್ವಾತಂತ್ರ್ಯವೂ ಬಂತು. 2000 ದಲ್ಲಿ ಜಾರ್ಖಂಡ್ ಬಿಹಾರ ರಾಜ್ಯದಿಂದ ಬೇರೆಯಾಗಿ ಪ್ರತ್ಯೇಕ ರಾಜ್ಯವಾಯಿತು. ಅಭಿವೃದ್ಧಿ ನಾಗಾಲೋಟ ಸಾಧ್ಯವೆಂದೇ ಹೇಳಲಾಯಿತು. ಹಿಂದೆ ಕಾಂಗ್ರೆಸ್ ಸರ್ಕಾರಗಳು, ಆ ನಂತರ ಬಿಜೆಪಿ ಸರ್ಕಾರಗಳು ಬಂದವು. ಆದರೆ ಕಾಯ್ದೆ ಸರಿಯಾಗಿ ಜಾರಿಯಾಗಲಿಲ್ಲ ಮಾತ್ರವಲ್ಲ, ಅದನ್ನು ದುರ್ಬಲಗೊಳಿಸುವ ಪ್ರಯತ್ನಗಳು ನಡೆದವು. ಈಗ ಅರ್ಜುನ್ ಮುಂಡಾ ನೇತೃತ್ವದ ಬಿಜೆಪಿ ಸರ್ಕಾರವು ಅದೇ ಪ್ರಯತ್ನ ಮುಂದುವರೆಸಿದೆ. ಬುಡಕಟ್ಟು ಇತರ ದುರ್ಬಲ ವರ್ಗಗಳ ಜನರು ಬಹಳ ಸುಲಭವಾಗಿ ತಮ್ಮ ಭೂಮಿಯನ್ನು ಮಾರುಕಟ್ಟೆಯಲ್ಲಿ ಹರಾಜಿಗೆ ಇಟ್ಟು ಬಿಡಲು ಸಾಧ್ಯವಾಗಬೇಕು, ಇದು ಸರ್ಕಾರದ ಉದ್ದೇಶ. ಮತ್ತು ಜಾಗತೀಕರಣ ಯುಗದ ಒತ್ತಡ. ಸಮಾವೇಶ ಈ ಧೋರಣೆಗಳನ್ನು ತೀವ್ರವಾಗಿ ಖಂಡಿಸಿದೆ. ಜೊತೆಗೆ ಐದೂ ಎಡಪಕ್ಷಗಳು ಸೇರಿ ಬುಡಕಟ್ಟು ಜನರ ಭೂಮಿಯ ಹಕ್ಕಿನ ರಕ್ಷಣೆಗಾಗಿ ಆಂದೋಲನದ ತೀರ್ಮಾನ ಕೈಗೊಂಡಿವೆ.

ನಿರುದ್ಯೋಗಿ ಯುವಜನರ ದಂಡು



★

ಎದ್ದು ಬಂದರೋ ಜಮ್ಮು-ಕಾಶ್ಮೀರದ ಯುವ ಜನ

ಜನಸಂಖ್ಯೆಯ ದೃಷ್ಟಿಯಿಂದ ನೋಡಿದರೆ ಅದೊಂದು ಪುಟ್ಟ ರಾಜ್ಯ. ಜಮ್ಮು-ಕಾಶ್ಮೀರ ಅಂತಾ ಅದರ ಹೆಸರು. ಅದು ಇಡೀ ದೇಶದ ಗಮನ ಸೆಳೆಯುವ ರಾಜ್ಯ. ಭಾರತದ ಸ್ವಿಟ್ಜರ್ ಲ್ಯಾಂಡ್ ಎಂದು ಕರೆಯಲಾಗುವ ಸುಂದರ ರಾಜ್ಯ. ನಿಸರ್ಗವೇನೋ ಬಲು ಸುಂದರವಾಗಿದೆ. ಆದರೆ ಅಲ್ಲಿನ ಜನರ ಬದುಕು ?

ಈ ರಾಜ್ಯದಲ್ಲಿ ಈಗ ಒಟ್ಟು 7 ಲಕ್ಷ ಪೋಲೀಸರು ಮತ್ತು ಸೈನಿಕರು ಬೀಡು ಬಿಟ್ಟಿದ್ದಾರೆ. ಕಳೆದ ಜೂನ್ ತಿಂಗಳಿಂದೀಚೆಗೆ ಕೇವಲ 5 ತಿಂಗಳ ಅವಧಿಯಲ್ಲಿ 111 ಜನ ಯುವಕ, ಯುವತಿಯರು ಇಲ್ಲಿ ಪೋಲೀಸರ ಗುಂಡಿಗೆ ಬಲಿಯಾಗಿದ್ದಾರೆ. ಬಲಿಯಾದವರ ಕೈಯಲ್ಲಿ ಬಂದೂಕು ಬಾಂಬ್‌ಗಳಿರಲಿಲ್ಲ. ಅವರು ಉಗ್ರಗಾಮಿ ಗಳೋ ಅಥವಾ ಭಯೋತ್ಪಾದಕರೋ ಅಲ್ಲವೇ ಅಲ್ಲ. ಆದರೂ ಅವರು ನಡು ಬೀದಿಗಳಲ್ಲಿ ಹೆಣವಾಗಿ ಉರುಳಿ ಹೋದರು. ಅವರಲ್ಲಿ ಎಷ್ಟೋ ಜನ ಯಾವ ಚಳುವಳಿಯಲ್ಲೂ, ಪ್ರತಿಭಟನೆಯಲ್ಲೂ ಪಾಲ್ಗೊಳ್ಳದ ಅಮಾಯಕರು, ಮುಗ್ಧರು.

ಭಾರತ ದೇಶದ ಸೈನ್ಯದ ಅಧಿಕಾರಿಗಳು ಮೂವರು ಅಮಾಯಕ ಯುವಕರನ್ನು ಬಂಧಿಸುತ್ತಾರೆ. ಅವರನ್ನು ಎಳೆದೊಯ್ದು ನಡು ಬಿದಿಯಲ್ಲಿ ನಕಲಿ ಎನ್ ಕೌಂಟರ್ ನಡೆಸಿ ಕೊಂದು ಬಿಸಾಡಿ ಆಮೇಲೆ ಅವರು ಪಾಕಿಸ್ತಾನದಿಂದ ನುಸುಳಿ ಬಂದ ಭಯೋತ್ಪಾದಕರು ಎಂಬ ಹಣೆ ಪಟ್ಟಿ ಹಚ್ಚಿ ಪ್ರಕರಣವನ್ನು ಮುಚ್ಚಿ ಹಾಕಲಾಗುತ್ತದೆ. ತದ ನಂತರ ಹೇಗೋ ಪ್ರಕರಣದ ರಹಸ್ಯ ಸ್ಫೋಟವಾಗುತ್ತದೆ.(ತಪ್ಪಿತಸ್ಥ ಅಧಿಕಾರಿಗಳು ಈಗ ತಮ್ಮ ಸ್ಥಾನಗಳಿಂದ ವಜಾ ಆಗಿದ್ದಾರೆ. ವಿಚಾರಣೆ ನಡೆಯುತ್ತಿದೆ.

ಇಂತಹ ಎಷ್ಟೋ ಘೋರ ದಾಳಿ ದಬ್ಬಾಳಿಕೆಯನ್ನು ಎದುರಿಸುತ್ತಾ ಜಮ್ಮು ಕಾಶ್ಮೀರದ ಯುವಜನರು ದಿನ ದಿನಗಳನ್ನು ದೂಡ ಬೇಕಾಗಿದೆ.

ನಿನ್ನೆ ತಮ್ಮ ಸಂಗಡ ಇದ್ದ ಜೊತೆಗಾರರು ಇಂದು ಇಲ್ಲ. ನಡು ಬೀದಿಯಲ್ಲಿ ಕ್ರೂರವಾಗಿ ಕಗ್ಗೊಲೆಯಾಗಿ ಹೋಗಿದ್ದಾರೆ. ಇಂತಹ ಅತ್ಯಾಚಾರ ಅನ್ಯಾಯದ ಅತಿರೇಕಗಳನ್ನು ಸಹಿಸಿಕೊಂಡು ಸುಮ್ಮನಿರಬಹುದೇ? ಬೀದಿಗೆ ಬಂದು ಧಿಕ್ಕಾರ ಕೂಗಿದರೆ, ಪ್ರತಿಭಟನೆಯ ಬೇರೆ ದಾರಿ ಕಾಣದೆ ಕೈಲಿ ಕಲ್ಲು ಹಿಡಿದು ನಿಂತರೆ ಮತ್ತೆ ಸೈನಿಕರ ಗುಂಡಿನ ಮಳೆ. ಪೋಲೀಸರ ಗೋಲಿಬಾರ್. ಮತ್ತೆ ಬೀದಿಗಳ ಮೇಲೆ ರಕ್ತದೋಕುಳಿ. ತಿರುಗುವ ಸಾವಿನ ವಿಷ ಚಕ್ರ. ಇದು ಸಮಸ್ಯೆಯ ಒಂದು ಮುಖ.

ಉದ್ಯೋಗ ಸೃಷ್ಟಿಗಾಗಿ ಆಗ್ರಹಿಸಿ ಕುಲಗಂನಲ್ಲಿ ರ್‍ಯಾಲಿ



ಮತ್ತೊಂದೆಡೆ... ಕೃಷಿಗೆ ತುಂಬಾ ಸೀಮಿತ ಅವಕಾಶ. ಕೈಗಾರಿಕೆಗಳ ಬೆಳವಣಿಗೆಗೆ ಬೇಕಾದ ಅಡಿಪಾಯವನ್ನೇ ಹಾಕಲಾಗಿಲ್ಲ. ಉಗ್ರರ ಉಪಟಳ; ಇಲ್ಲ ವ್ಯಾಪಾರ- ವಾಣಿಜ್ಯ ವಹಿವಾಟು, ಪ್ರವಾಸೋದ್ಯಮಕ್ಕೆ ಬಂದಿದೆ ಸಂಚಕಾರ. ಏನು ಮಾಡುವುದು ಯುವಜನ. ಪಾಕಿಸ್ತಾನಿ ಏಜೆಂಟರು ಕೊಡುವ ಬಂದೂಕು, ಬಾಂಬುಗಳಿಗೆ ದುಡ್ಡಿಗೆ ಕೈ ಚಾಚುವುದಾ? ಹೀಗೆ ದಾರಿ ತಪ್ಪಿ ಹೋದವರು ಹಿಂಸೆ, ಕೊಲೆ,ರಕ್ತಪಾತ ಬಿಟ್ಟು ಸಾಧಿಸಿದ್ದೇನು? ಎಲ್ಲವೂ ಕಣ್ಣ ಮುಂದೆಯೇ ಇದೆ...

ಇಂತಹ ವಿಷಮ ಸನ್ನಿವೇಶದಲ್ಲಿ ರಾಜ್ಯದಲ್ಲಿ ಖಾಲಿ ಹುದ್ದೆಗಳ ಭರ್ತಿಗಾಗಿ, ಕೈಗಾರಿಕೆಗಳ ಸ್ಥಾಪನೆಗಾಗಿ, ಉದ್ಯೋಗ ಸೃಷ್ಟಿಗಾಗಿ, ಪೋಲೀಸು ಪಡೆ, ಮಿಲಿಟರಿಗಳ ದಮನಕಾರಿ ನೀತಿಗಳ ವಿರುದ್ಧ ಜಮ್ಮು ಕಾಶ್ಮೀರದ ಯುವಜನರನ್ನು ಪ್ರಜಾಸತ್ತಾತ್ಮಕ ಹೋರಾಟದ ಕಡೆಗೆ ಸೆಳೆಯುವ ಯತ್ನಗಳು ನಡೆದಿವೆ. ಆಶಾದಾಯಕ ಫಲಿತಾಂಶಗಳು ಕೂಡ ಸಿಗುತ್ತಿವೆ ಎಂಬುದು ತುಂಬಾ ಸಂತೋಷದ ವಿಚಾರ.

ಜಮ್ಮು-ಕಾಶ್ಮೀರ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಜೆಕೆಡಿವೈಎಫ್) ಈ ಮೇಲ್ಕಂಡ ಬೇಡಿಕೆಗಳ ಆಧಾರದಲ್ಲಿ ಬೃಹತ್ ಪ್ರತಿಭಟನೆ ಯೊಂದನ್ನು ಸಂಘಟಿಸಿತ್ತು. ಕುಲ್ಗಂನಲ್ಲಿ ನಡೆದ ಈ ಪ್ರತಿಭಟನೆಯಲ್ಲಿ ಜಮ್ಮು-ಕಾಶ್ಮೀರದ ಸಹಸ್ರಾರು ಯುವಕರು, ಹಾಗೂ ಯುವತಿಯರು ಪಾಲ್ಗೊಂಡಿದ್ದರು.

ಪುಟ 8 ರಿಂದ

ಸಂಸತ್ತಿನತ್ತ ನಿಜ ಭಾರತದ ನಡಿಗೆ

ಮುಂತಾದ ಸಾಮಾಜಿಕ ವಲಯಗಳಲ್ಲಿ ಮಾಡುವ ಖರ್ಚುಗಳನ್ನು ಕಡಿತ ಮಾಡಬೇಕು ಮತ್ತು ಅಗತ್ಯವಿರುವವರಿಗೆ ಕೊಡುವ ಸಬ್ಸಿಡಿಗಳನ್ನು ಸಂಪೂರ್ಣ ರದ್ದು ಮಾಡದಿದ್ದರೂ, ಅವನ್ನು ಭಾರೀ ಪ್ರಮಾಣದಲ್ಲಿ ಇಳಿಸಬೇಕು ಎಂದು ಸರಕಾರದ ಮೇಲೆ ಒತ್ತಡಗಳನ್ನು ಹಾಕುತ್ತಿದ್ದಾರೆ. ಇದು ಈಗಾಗಲೇ ದುಡಿಯುವ ಜನಗಳ ಮೇಲೆ ಹೇರುತ್ತಿರುವ ಹೊರೆಗಳನ್ನು ಇನ್ನಷ್ಟು ಹೆಚ್ಚಿಸುತ್ತದಷ್ಟೇ.

ಧೋರಣೆಯ ದಿಕ್ಕಿನಲ್ಲಿ ತೀವ್ರ ಪಲ್ಲಟ ಎಂದರೆ ಇಂತಹ ದಿಕ್ಪಥದಿಂದ ದೂರ ಸರಿಯುವುದು. ಇದು ಪೂರ್ಣವಾಗಿ ಸಾಧ್ಯವಿದೆ. ಈ ಬಗ್ಗೆ ಈ ಹಿಂದೆ ಬರೆದಿದ್ದೇವೆ; ಪುನರಾವರ್ತನೆಯೆನಿಸಿದರೂ, ಅದನ್ನು ಇನ್ನೊಮ್ಮೆ ಪರಿಶೀಲಿಸೋಣ:

ಕಳೆದ ವರ್ಷದ ಬಜೆಟು ದಸ್ತಾವೇಜುಗಳಲ್ಲಿ 'ಬಿಟ್ಟುಕೊಟ್ಟ ಆದಾಯದ ಹೇಳಿಕೆ' ಎಂಬುದಿತ್ತು. 2008-09ರಲ್ಲಿ ರೂ. 4,14,099 ಕೋಟಿ ತೆರಿಗೆ ಆದಾಯಗಳನ್ನು ಬಿಟ್ಟುಕೊಡಲಾಯಿತು ಎಂದು ಈ ಹೇಳಿಕೆಯಲ್ಲಿದೆ. 2009-10ರಲ್ಲಿ ಇದು ರೂ. 5,02,299 ಕೋಟಿ. ಇಷ್ಟೊಂದು ಅಗಾಧ ಪ್ರಮಾಣದಲ್ಲಿ ಸರಕಾರ ತನ್ನ ಆದಾಯವನ್ನು ಬಿಟ್ಟು ಕೊಟ್ಟದ್ದು, ಸಂಗ್ರಹಿಸಬೇಕಾಗಿದ್ದ ತೆರಿಗೆ ಆದಾಯದ 79.54ಶೇ.ದಷ್ಟು ತೆರಿಗೆ ರಿಯಾಯ್ತಿಗಳನ್ನು ಕೊಡಮಾಡಿದ್ದರಿಂದ. ಅಬಕಾರಿ ಸುಂಕಗಳು ಮತ್ತು ಕಸ್ಟಮ್ಸ್ ಸುಂಕಗಳ ರಿಯಾಯ್ತಿಗಳಿಂದ ಜಾಗತಿಕ ಹಿಂಜರಿತದ ಪರಿಣಾಮಗಳನ್ನು ಎದುರಿಸಲು ನೆರವಾಯಿತೆಂದೇ ಇಟ್ಟುಕೊಳ್ಳೋಣ. ಆದರೆ, ಕಾರ್ಪೊರೇಟ್‌ಗಳಿಗೆ ಮತ್ತು ಉನ್ನತ ಆದಾಯಗಳವರಿಗೆ ವೈಯಕ್ತಿಕ ತೆರಿಗೆಗಳಲ್ಲಿ ಕೊಡಮಾಡಿದ ರಿಯಾಯ್ತಿಗಳ ಮೊತ್ತವೇ 2008-09ರಲ್ಲಿ ರೂ.1.,04,471 ಕೋಟಿ ಮತ್ತು 2009-10ರಲ್ಲಿ ರೂ.1,20,483 ಕೋಟಿ. ಅಂದರೆ ಎರಡೇ ವರ್ಷಗಳಲ್ಲಿ ಸುಮಾರು 2.25ಲಕ್ಷ ಕೋಟಿರೂ.ಗಳಷ್ಟು ನ್ಯಾಯಯುತವಾಗಿ ಸರಕಾರಕ್ಕೆ ಬರಬೇಕಾಗಿದ್ದ ಆದಾಯವನ್ನು ಬಿಟ್ಟುಕೊಡಲಾಯಿತು. ಇದನ್ನು ಬಿಟ್ಟುಕೊಡುವ ಬದಲು ಈ ಸಂಪನ್ಮೂಲವನ್ನು ಸಂಗ್ರಹಿಸಿ ಸಾರ್ವಜನಿಕ ಹೂಡಿಕೆಗಳಿಗೆ ಬಳಸಿದ್ದರೆ, ಇದರಿಂದ ನಮ್ಮ ಬಹಳಷ್ಟು ಅಗತ್ಯವಾದ ಮೂಲರಚನೆಗಳನ್ನು ಕಟ್ಟಬಹುದಾಗಿತ್ತು, ಆಮೂಲಕ ಗಮನಾರ್ಹ ಪ್ರಮಾಣದಲ್ಲಿ ಉದ್ಯೋಗಾವಕಾಶಗಳನ್ನು ಕಲ್ಪಿಸಿ ಜನಗಳ ಬದುಕನ್ನು ಉತ್ತಮಗೊಳಿಸಬಹುದಾಗಿತ್ತು. ಇದರ ಪರಿಣಾಮವಾಗಿ ಹೆಚ್ಚುವ ಆಂತರಿಕ ಬೇಡಿಕೆಗಳು ನಮ್ಮ ಆರ್ಥಿಕ ವ್ಯವಸ್ಥೆಯ ಮೂಲಭೂತ ಅಂಶಗಳನ್ನು ಉತ್ತಮ ಪಡಿಸಲು, ಆಮೂಲಕ ಬಹು ಕಾಳಿಕೆಯ ಬೆಳವಣಿಗೆಯ ದಿಕ್ಕಿನಲ್ಲಿ ಸಾಗಲು ಬುನಾದಿ ಹಾಕಬಹುದಾಗಿತ್ತು. ಈ ವರ್ಷದ ಬಜೆಟ್ ಧೋರಣೆಯ ದಿಕ್ಕಿನಲ್ಲಿ ಇಂತಹ ಒಂದು ಪಲ್ಲಟವನ್ನು ತರುತ್ತದೆಯೇ?

ಈಗಲೂ ಅದೇ ಗೀಳು?

ಕಳೆದ ವರ್ಷ ದೇಶದೊಳಗೆ ಹರಿದು ಬಂದ ವಿದೇಶಿ ಬಂಡವಾಳದ ಪ್ರಮಾಣದಲ್ಲಿ 31ಶೇ.ದಷ್ಟು ತೀವ್ರವಾದ ಇಳಿಕೆಯಾಗಿದೆ ಎಂಬ ಸಂಗತಿ ಅಧಿಕೃತ ವಲಯಗಳಲ್ಲಿ ಒಂದು ಪ್ರಧಾನ ಆತಂಕದ ವಿಷಯವಾಗಿದೆ. ಈ ಇಳಿಕೆಯ ಪ್ರವೃತ್ತಿ ನಮ್ಮ ಆರ್ಥಿಕದ ಮೂಲಭೂತ ಅಂಶಗಳಿಂದಾಗಿಯೇನೂ ಅಲ್ಲ; ಬದಲಾಗಿ ಜಾಗತಿಕ ಹಿಂಜರಿತದಿಂದಾಗಿ. ಆದರೂ, ಈ ಪ್ರವೃತ್ತಿಯನ್ನು ಬದಲಿಸಿ ಹಿಂದಿನಂತೆ ಮಾಡುವ ಗೀಳಿನಿಂದಾಗಿ, ಅಂತರ್‍ರಾಷ್ಟ್ರೀಯ ಹಣಕಾಸು ಬಂಡವಾಳವನ್ನು ಸುಪ್ರೀತಗೊಳಿಸುವ ಕಾತುತರೆಯಿಂದಾಗಿ ಈ ವರ್ಷದ ಬಜೆಟ್ ವಿದೇಶಿ ಬಂಡವಾಳಕ್ಕೆ ಇನ್ನಷ್ಟು ರಿಯಾಯ್ತಿಗಳನ್ನು ಕೊಡಲು ಮುಂದಾಗಬಹುದು, ಅಂದರೆ ವಿಮಾ ವಲಯದಲ್ಲಿ ವಿದೇಶಿ ಹೂಡಿಕೆಯ ಮಿತಿ ಹೆಚ್ಚಿಸುವುದು, ಬ್ಯಾಂಕಿಂಗ್ ಸುಧಾರಣೆಗಳು, ಪೆನ್ಶನ್ ನಿಧಿಗಳ ಖಾಸಗೀಕರಣ ಮುಂತಾದ ಕ್ರಮಗಳಿಗೆ ಮತ್ತೆ ಮುಂದಾಗಬಹುದು. ಇಂತಹ ಹಣಕಾಸು ಉದಾರೀಕರಣ ಭಾರತವನ್ನು ಜಾಗತಿಕ ಜೂಜುಕೋರ ಚಟುವಟಿಕೆಗಳಿಗೆ ಬಲಿಕೊಡಲು ಇನ್ನಷ್ಟು ಅವಕಾಶಗಳನ್ನು ಕಲ್ಪಿಸುತ್ತದೆ. ಎಡಪಕ್ಷಗಳು ಯುಪಿಎ-1 ಸರಕಾರ ಇಂತಹ ಕ್ರಮಗಳನ್ನು ಕೈಗೊಳ್ಳದಂತೆ ತಡೆದುದರಿಂದಲೇ ಬಹಳಷ್ಟು ಮಟ್ಟಿಗೆ ಭಾರತಕ್ಕೆ ಜಾಗತಿಕ ಹಿಂಜರಿತದ ವಿನಾಶಕಾರಿ ಪರಿಣಾಮಗಳನ್ನು ಎದುರಿಸಿ ನಿಲ್ಲಲು ಸಾಧ್ಯವಾದದ್ದು. ಈಗ ಇಂತಹ ಕ್ರಮಗಳಿಗೆ ಮುಂದಾದರೆ ಈ ಚೈತನ್ಯ ಗಂಭೀರ ರೂಪದಲ್ಲಿ ದುರ್ಬಲಗೊಳ್ಳುತ್ತದೆ.


ಆದ್ದರಿಂದ, ಭವಿಷ್ಯದಲ್ಲಿ ಜನತೆಯ ಒತ್ತಡಗಳನ್ನು, ಇನ್ನಷ್ಟು ಬಲಿಷ್ಟ ಹೋರಾಟಗಳ ಮೂಲಕ ತೀವ್ರಗೊಳಿಸಬೇಕು, ಈ ಮೂಲಕ ಸರಕಾರ ತನ್ನ ಧೋರಣೆಯ ದಿಕ್ಕಿನಲ್ಲಿ ತೀವ್ರವಾದ ಪಲ್ಲಟವನ್ನು ತರುವಂತೆ ಬಲವಂತವನ್ನು ತರಬೇಕು. ಅದು ಮತ್ತಷ್ಟು ಹಣಕಾಸು ಉದಾರೀಕರಣವನ್ನು ಕೈಗೊಂಡು ವಿನಾಶಕಾರಿ ಪರಿಣಾಮಗಳಿಗೆ ಎಡೆಮಾಡಿಕೊಡದಂತೆ, ಇನ್ನಷ್ಟು ಹೊರೆಗಳನ್ನು, ಸಂಕಟಗಳನ್ನು ದುಡಿಯುವ ಜನಗಳ ಮೇಲೆ ಹೇರದಂತೆ ತಡೆಯಬೇಕು.

ಭಾರತೀಯ ಕಾರ್ಮಿಕ ವರ್ಗದೊಂದಿಗೆ ಸೌಹಾರ್ದವನ್ನು ವ್ಯಕ್ತಪಡಿಸುತ್ತಲೇ, 'ಇನ್ನಷ್ಟು ಬಲಿಷ್ಟ ಹೋರಾಟಗಳತ್ತ ಮುನ್ನಡೆಯಿರಿ' ಎಂದಷ್ಟೇ ನಾವು ಹೇಳುತ್ತೇವೆ.

(ಫೆಬ್ರುವರಿ 23, 2011)

ಕೆಲಸದ ಅವಧಿ ಹೆಚ್ಚಳ ವಿರೋಧಿಸಿ ಸಿಐಟಿಯು ಪ್ರತಿಭಟನೆ

ಕಾರ್ಖಾನೆ ಕಾಯ್ದೆ-1948 ಕ್ಕೆ ತಿದ್ದುಪಡಿ ಮಾಡಿ ಕಾರ್ಮಿಕ ಕೆಲಸದ ಅವಧಿಯನ್ನು ಹಾಲಿ 8 ಗಂಟೆಯಿಂದ 10 ಗಂಟೆಗೆ ಹೆಚ್ಚಿಸುವ ರಾಜ್ಯ ಸಚಿವ ಸಂಪುಟ ತೀರ್ಮಾನವನ್ನು ಖಂಡಿಸಿ ಇಂದು ನಗರದ ವಿವಿಧ ಕಾರ್ಖಾನೆಗಳ ಕಾರ್ಮಿಕ ಪ್ರತಿನಿಧಿಗಳು ಸಿಐಟಿಯು ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದರು. ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್, ಬೆಂಗಳೂರು ಜಿಲ್ಲಾ ಸಮಿತಿ ನೇತೃತ್ವದಲ್ಲಿ ನಗರದ ಮೈಸೂರು ಬ್ಯಾಂಕ್ ವೃತ್ತದಲ್ಲಿ ಪ್ರತಿಭಟನೆ ನಡೆಸಿದ ಕಾರ್ಮಿಕರು, ಬಿಜೆಪಿ ಸರ್ಕಾರದ ಈ ಕಾರ್ಮಿಕ ವಿರೋಧಿ ಕ್ರಮವನ್ನು ಕೂಡಲೇ ಹಿಂದೆ ಪಡೆಯಬೇಕೆಂದು ಆಗ್ರಹಿಸಿದರು. ಈ ಹಿಂದೆ ಗುತ್ತಿಗೆ ಕಾರ್ಮಿಕರಿಗೆ ನೀಡಲಾಗುವ OT ವೇತನವನ್ನು ಕೇವಲ ಬೇಸಿಕ್ ಮತ್ತು DA ದುಪ್ಪಟ್ಟು ನೀಡಿದರೆ ಸಾಕೆಂದು ಕಾರ್ಖಾನೆ ಕಾಯ್ದೆಗೆ ಭಿನ್ನವಾಗಿ ಸರ್ಕಾರವು ಆದೇಶ ಹೊರಡಿಸಿದೆ. ಅಂತೆಯೇ ಕಳೆದ ಅಧಿವೇಶನದಲ್ಲಿ ಗದ್ದಲದ ನಡುವೆ ಮಸೂದೆ ಮಂಡಿಸಿ ಕರ್ನಾಟಕ ಕೈಗಾರಿಕೆಗಳ ಮಾದರಿ ಸ್ಥಾಯಿ ಆದೇಶಗಳ ಕಾಯ್ದೆಗೆ ತಿದ್ದುಪಡಿ ತಂದು ಕೈಗಾರಿಗಳ ಸ್ಥಾಯಿ ಆದೇಶಕ್ಕೆ ಕಾರ್ಮಿಕ ಅಧಿಕಾರಿಗಳ ದೃಢೀಕರಣವಿಲ್ಲದೆ ಜಾರಿಗೊಳಿಸಲು ಮಾಲೀಕರಿಗೆ ಅವಕಾಶ ಕಲ್ಪಿಸಿದೆ. ಅಂತೆಯೇ ಗುತ್ತಿಗೆ ಕಾರ್ಮಿಕರು ನಿರಂತರವಾಗಿ 5 ದಿನಗಳ ಕಾಲ ಕೆಲಸಕ್ಕೆ ಗೈರು ಹಾಜರು ಆದರೆ ಯಾವುದೇ ಪೂರ್ವ ಸೂಚನೆಯಿಲ್ಲದೆ ಕೆಲಸದಿಂದ ವಜಾಗೊಳಿಸಬಹುದೆಂಬ ಪ್ರಾಕೃತಿಕ ನ್ಯಾಯಕ್ಕೆ ವಿರುದ್ಧವಾಗಿ ಆದೇಶವನ್ನು ಹೊರಡಿಸಿದೆ.



2010-2011 ರಲ್ಲಿ ಬೆಲೆ ಏರಿಕೆ ಅನುಗುಣವಾಗಿ ಸಿಗಬೇಕಿದ್ದ ತುಟ್ಟಿ ಭತ್ಯೆ ಹೆಚ್ಚಳವನ್ನು ಖಾತ್ರಿಪಡಿಸದೆ ಹಿಂದೆ ಇದ್ದ ತುಟ್ಟಿ ಭತ್ಯೆಯನ್ನು ದಿನಕ್ಕೆ 5 ರೂಪಾಯಿ ಅಂತೆ ಕಡಿತ ಮಾಡಿ ಆದೇಶ ಹೊರಡಿಸುವ ಮೂಲಕ ರಾಜ್ಯದ 10 ಲಕ್ಷಕ್ಕೂ ಹೆಚ್ಚು ಗಾರ್ಮೆಂಟ್ಸ್ ಕಾರ್ಮಿಕರಿಗೆ ದ್ರೋಹ ಮಾಡಿ ಮಾಲೀಕರಿಗೆ ಲಾಭ ಮಾಡಿಕೊಡುವ ಕ್ರಮವನ್ನು ರಾಜ್ಯ ಸರ್ಕಾರ ಕೈಗೊಂಡಿದೆ.


ಈ ಎಲ್ಲಾದಕ್ಕೂ ಮೊದಲು ಬೆಂಗಳೂರು ನಗರದಲ್ಲಿ ಸಭೆ-ಮೆರವಣಿಗಳನ್ನು ನಿಯಂತ್ರಿಸುವ ಹೆಸರಿನಲ್ಲಿ ಕಾರ್ಮಿಕ ದ್ವಾರ ಸಭೆ ಹೋರಾಟಗಳನ್ನು ಹತ್ತಿಕ್ಕುವ ದುರುದ್ದೇಶದೊಂದಿಗೆ ಪೊಲೀಸ್ ಆಯುಕ್ತರ ಮೂಲಕ ಆದೇಶವನ್ನು ಸಹ ಸರ್ಕಾರ ಹೊರಡಿಸಿದೆ. ಈ ಎಲ್ಲಾ ಕಾರ್ಮಿಕ ವಿರೋಧಿ ಕ್ರಮಗಳ ಮುಂದುವರಿಸಿದ ಭಾಗವಾಗಿ ರಾಜ್ಯ ಸರ್ಕಾರವು ಕೆಲಸದ ಅವಧಿಯನ್ನು ವಿಸ್ತರಿಸಿ ಮಾಲೀಕರಿಗೆ ಬಂಡವಾಳಶಾಹಿಗಳಿಗೆ ಲಾಭ ಮಾಡಿಕೊಡುವ ಕ್ರಮವನ್ನು ಕೈಗೊಂಡಿದೆ. ಕಾರ್ಮಿಕರ ಶ್ರಮವನ್ನು ಆದರಿಂದ ಉತ್ಪಾದನೆಯಾಗುವ ಮೌಲ್ಯವನ್ನು ದೋಚಲು ಮಾಲೀಕರಿಗೆ ಬಂಡವಾಳಗಾರರಿಗೆ ಕೆಲಸದ ಅವಧಿಯ ವಿಸ್ತರಣೆಯೂ ಅನುವುಗೊಳಿಸಲಿದೆ.

ಬೆಲೆ ಏರಿಕೆಗೆ ಅನುಗುಣವಾಗಿ ಕನಿಷ್ಠ ಕೂಲಿಯನ್ನು ಹೆಚ್ಚಿಸಬೇಕು ರಾಜ್ಯವ್ಯಾಪಿ ಸಮಾನ ಕನಿಷ್ಠ ಕೂಲಿಯನ್ನು ನಿಗಧಿ ಪಡಿಸಬೇಕು ಬೆಂಗಳೂರು BMRDA ವ್ಯಾಪ್ತಿಯಲ್ಲಿ ರೂ.10,000/- ಸಮಾನ ಕನಿಷ್ಠ ಕೂಲಿ ನಿಗದಿಗೊಳಿಸಬೇಕು ಎಂಬ ಕಾರ್ಮಿಕ ಬೇಡಿಕೆಗೆ ಕಿವಿಗೊಡದ ಸರ್ಕಾರ ಕಾರ್ಮಿಕ ಕಾನೂನನ್ನು ಜಾರಿಗೊಳಿಸದೆ, ಅಕ್ರಮ ಬೀಗ ಮುದ್ರೆಗಳನ್ನು ನಿಷೇಧಿಸದೆ, ಕಾರ್ಮಿಕರನ್ನು ಬಲಿಪಶುಮಾಡುತ್ತ, ಮಾಲೀಕರ ಮೇಲೆ ಕ್ರಮವಹಿಸದೆ ರಾಜ್ಯ ಸರ್ಕಾರವು ಮಾಲೀಕರ ಬೇಡಿಕೆಯಾದ ಕೆಲಸದ ಅವಧಿ ಹೆಚ್ಚಳ ಮಾಡಿರುವುದು ಸರ್ಕಾರದ ಬಂಡವಾಳಶಾಹಿ ಪರ ಧೋರಣೆಯನ್ನು ತೋರುತ್ತದೆ.

ಅಂಗನವಾಡಿ ನೌಕರರು ಪ್ರತಿಭಟನೆ ನಡೆಸಿದರೆ ಗೌರವಧನ ಕಡಿತ ಮಾಡುವ, ಕೆಲಸದಿಂದ ತೆಗೆದುಹಾಕುವ ಸುತ್ತೋಲೆಯನ್ನು ಇತ್ತೀಚೆಗೆ ಹೊರಡಿಸಿದೆ. ಆ ಮೂಲಕ ಪ್ರತಿಭಟನೆಯ ಹಕ್ಕನ್ನು ಕಸಿಯಲು ಹಾಗೂ ಅವರ ಪಿಂಚಣಿಯನ್ನು ಷೇರು ಮಾರುಕಟ್ಟೆಯ ಜೂಜುಕೋರುತನಕ್ಕೆ ಬಲಿಕೊಡಲು ಹೊರಟಿದೆ. ಅಂತೆಯೇ ಅಸಂಘಟಿತ ಕಾರ್ಮಿಕರ ಕಲ್ಯಾಣ ಮಂಡಳಿಗೆ ಕಾರ್ಮಿಕರನ್ನು ನೊಂದಾಯಿಸಿ ಕಲ್ಯಾಣ ಯೋಜನೆಗಳನ್ನು ರೂಪಿಸಿ ಜಾರಿಗೊಳಿಸುವ ಬದಲು ಅವರಿಗೂ ನೂತನ ಪಿಂಚಣಿ ಯೋಜನೆ ಅಡಿ ಪಿಂಚಣಿ ಜಾರಿಗೊಳಿಸಿ, ಅವರ ಪಿಂಚಣಿಯನ್ನು ಸಹ ಷೇರು ಮಾರುಕಟ್ಟೆಯ ಜೂಜುಕೋರತನಕ್ಕೆ ಬಲಿಕೊಡಲು ರಾಜ್ಯ ಸರ್ಕಾರ ಮುಂದಾಗಿದೆ. ಈ ಎಲ್ಲಾ ಕಾರ್ಮಿಕ ವಿರೋಧಿ ಕ್ರಮಗಳ ಮೂಲಕ ಬಂಡವಾಳಶಾಹಿ, ಬಹುರಾಷ್ಟ್ರೀಯ ಕಂಪನಿಗಳ ಪರ ಇದ್ದೇವೆ ಎಂಬುದನ್ನು ತೋರಲು ಕಾತುರವಾಗಿ ಬಿಜೆಪಿ ಈ ಕ್ರಮವನ್ನು ಕೈಗೊಳ್ಳಲು ಮುಂದಾಗಿದೆ. ಎಂದು ಅಖಖಿಗ ಖಂಡಿಸಿದೆ. ಕೆಲಸದ ಅವಧಿ ವಿಸ್ತರಣೆಯ ತಿದ್ದುಪಡಿ ಮಸೂದೆಗೆ ಪಕ್ಷಬೇಧ ಮರೆತು ಶಾಸಕರು ಸಮತಿಸಬಾರದೆಂದು ಸಿಐಟಿಯು ಒತ್ತಾಯಿಸಿದೆ. ಸರ್ಕಾರವು ತನ್ನ ಕಾರ್ಮಿಕ ವಿರೋಧಿ ಕ್ರಮಗಳೊಂದಿಗೆ ಕೆಲಸದ ಅವಧಿ ವಿಸ್ತರಣೆಯ ಮಸೂದೆಯನ್ನು ಮಂಡಿಸಲು ಮುಂದಾದಲ್ಲಿ ಉಗ್ರ ಹೋರಾಟ ನಡೆಸಬೇಕಾಗುತ್ತದೆಂದು, ಯಾವುದೇ ಕಾರಣಕ್ಕೂ ಕೆಲಸದ ಅವಧಿ ಹೆಚ್ಚಳಕ್ಕೆ ಜಾರಿ ಮಾಡಲು ಬಿಡುವುದಿಲ್ಲವೆಂದು ಅದು ಸರ್ಕಾರವನ್ನು ಎಚ್ಚರಿಸಿದೆ.

ಸಿಐಟಿಯು ಜಿಲ್ಲಾಧ್ಯಕ್ಷರಾದ ಹೆಚ್.ಎನ್. ಗೋಪಾಲ ಗೌಡ, ಪ್ರಧಾನಕಾರ್ಯದರ್ಶಿ ಯಾದ ಕೆ.ಎನ್. ಉಮೇಶ್ ಮತ್ತಿತರೆ ಮುಖಂಡರು ಮಾತನಾಡಿದರು.

ಅಲ್ಪಸಂಖ್ಯಾತರ ಜುಟ್ಟು ಹಿಡಿಯುವ ಸಂಘದ ಯತ್ನ - ಮುಖಭಂಗ



ಬಿಜೆಪಿ ದರ್ಬಾರ್


ಆರೆಸ್ಸೆಸ್, ಬಿಜೆಪಿಗಳಿಗೆ ಈ ಧಾರ್ಮಿಕ ಅಲ್ಪ ಸಂಖ್ಯಾತರುಗಳನ್ನು ಕುಟುಕುವುದು, ಕಚ್ಚುವುದು ಮುಂತಾದ ಕೆಲಸಗಳೆಂದರೆ ಅದೇನು ಆನಂದವೋ !? ಅದು ಈ ಸಂಘ ಪರಿವಾರದ ಹುಟ್ಟುಗುಣ. ಅಂಥಹದ್ದೇನು ಮಾಡದೆ ಈ ಪರಿವಾರ ಹಾಗೆ ನೆಮ್ಮದಿಯಾಗಿ ಇರಲು ಸಾಧ್ಯವೇ ಇಲ್ಲ ಅಂತ ಕಾಣಿಸುತ್ತದೆ.

ಈ ಬಾರಿ ಅಲ್ಪಸಂಖ್ಯಾತ ಧಾರ್ಮಿಕ ಸಂಸ್ಥೆಗಳ ಜುಟ್ಟು ಹಿಡಿದು ಕೊಳ್ಳಲು ಹೋಗಿ ಸಂಘ ಪರಿವಾರ ಸರಿಯಾಗಿ ಮುಖಭಂಗ ಅನುಭವಿಸಿದೆ. ಈ ಸಾರಿ ಒಂದು ವಿಶೇಷವೂ ಇದೆ.

ವಿಶೇಷ ಏನೆಂದರೆ ಸಂಘ ಪರಿವಾರ ಈ ಬಾರಿ ಗುರಿ ಇಟ್ಟಿದ್ದದ್ದು ಜೈನ, ಬೌದ್ಧ,ಸಿಖ್ ಧರ್ಮಗಳಿಗೆ ಸೇರಿದ ಧಾರ್ಮಿಕ ಸಂಸ್ಥೆಗಳನ್ನು. ಈಗ ನಡೆದದ್ದಿಷ್ಟು. ಕರ್ನಾಟಕ ಧಾರ್ಮಿಕ ದತ್ತಿ ಕಾಯ್ದೆಗೆ ಜೈನ, ಬೌದ್ಧ,ಸಿಖ್ ಧಾರ್ಮಿಕ ಸಂಸ್ಥೆಗಳನ್ನು ನಿಯಂತ್ರಿಸಲು ಅನುಕೂಲವಾಗುವಂತೆ, ಹಾಗೂ ಅವುಗಳ ಲೆಕ್ಕಪತ್ರಗಳ ತನಿಖೆಗೆ ಅನುವಾಗುವಂತೆ ತಿದ್ದುಪಡಿ ತರಲು ರಾಜ್ಯ ಬಿಜೆಪಿ ಸರ್ಕಾರದ ಮಂತ್ರಿಮಂಡಲ ನಿರ್ಧಾರವನ್ನು ಕೈಗೊಂಡಿತ್ತು. ಮತ್ತೆ ಈ ಕಾಯ್ದೆಯಲ್ಲಿ ಹಿಂದೂ ಮಠಗಳನ್ನು ಹಾಗೂ ಅವುಗಳು ನಡೆಸುವ ಧಾರ್ಮಿಕ ಸಂಸ್ಥೆಗಳನ್ನು ನಿಯಂತ್ರಣದ ವ್ಯಾಪ್ತಿಯಿಂದ ಹೊರಡಲಾಗಿತ್ತು.

ಇಂಥದ್ದೊಂದು ತೀರ್ಮಾನ ಕೈಗೊಳ್ಳುವ ಮೊದಲು ಬದಲಾವಣೆಯ ಹಿಂದಿರುವ ಉದ್ದೇಶ ಏನು ? ಅದರಲ್ಲಿ ಇರುವ ಸಾಮಾಜಿಕ ಹಿತಾಸಕ್ತಿ ಏನು ?(ಅದು ಇದ್ದರೆ) ಎಂದು ಜನತೆ ಮತ್ತು ಸಂಬಂಧಿಸಿದವರಿಗೆ ಮನವರಿಕೆ ಮಾಡಿಕೊಡುವ ಕರ್ತವ್ಯ ಆಳುವವರಿಗೆ ಇರುತ್ತದೆಯಲ್ಲವೇ ? ಸರ್ಕಾರ ಯಾರನ್ನೂ ವಿಶ್ವಾಸಕ್ಕೆ ತೆಗೆದುಕೊಂಡಿರಲಿಲ್ಲ. ಸ್ವತ: ಬೌದ್ಧ ಜೈನ ಧಾರ್ಮಿಕ ಸಂಘಟನೆಗಳ ಮುಖಂಡರು ಸರ್ಕಾರದ ಕ್ರಮವನ್ನು ತೀವ್ರವಾಗಿ ಖಂಡಿಸಿದರು. ವಿರೋಧಿಸಿದರು. ಈ ಪಕ್ಷಪಾತದ ಧೋರಣೆ ವಿರುದ್ಧ ಇತರ ಸಮುದಾಯಗಳಿಂದಲೂ ವಿರೋಧ ಬಂದ ಮೇಲೆ ಕೊನೆಗೆ ಸರ್ಕಾರ ತಿದ್ದುಪಡಿ ಕ್ರಮವನ್ನು ಕೈ ಬಿಡಬೇಕಾಯಿತು. 'ಸಿಖ್, ಜೈನ, ಮತ್ತು ಬೌದ್ಧರು ಹಿಂದೂ ಧರ್ಮದ ಭಾಗ ಎಂದು ಸಂವಿಧಾನ ಹೇಳಿದೆ. ಹೀಗಾಗಿ ಅವುಗಳ ಹಣಕಾಸು ವಹಿವಾಟು, ಆಸ್ತಿ, ಇತ್ಯಾದಿ ವಿಷಯಗಳಲ್ಲಿ ಲೆಕ್ಕ ಪರಿಶೀಲನೆ ನಡೆಸಲು ಸರ್ಕಾರಕ್ಕೆ ಅವಕಾಶವಿದೆ.....' ಅಂತ ಮುಜರಾಯಿ ಇಲಾಖೆ ಸಚಿವ ಡಾ। ಆಚಾರ್ಯರು ಏನೆಲ್ಲಾ ಸಮರ್ಥನೆ ಮಾಡಿಕೊಂಡರೂ ಕೊನೆಗೆ ಸರ್ಕಾರ ತನ್ನ ತೀರ್ಮಾನ ಕೈಬಿಡಬೇಕಾಗಿ ಬಂತು.

ಹೌದು, ಈ ಬಿಜೆಪಿ ಸರ್ಕಾರ ಯಾಕಾಗಿ ಈ ನಿರ್ಧಾರ ಕೈಗೊಂಡಿತು. ಪ್ರಾಚೀನ ಕಾಲದಲ್ಲಿ ವೈದಿಕ ಧರ್ಮದ ಕ್ರೌರ್ಯ,ಜಾತಿಯತೆ, ಡಾಂಬಿಕತೆ, ಮೋಸ, ಮೂಢನಂಬಿಕೆಗಳು, ದುಂದುಗಾರಿಕೆ, ಹಿಂಸೆಗಳ ವಿರುದ್ಧ ಒಂದು ಬಂಡಾಯವೆಂಬಂತೆ ಹುಟ್ಟಿಬಂದ ಬೌದ್ಧ, ಜೈನ ಧರ್ಮಗಳನ್ನು ಹಿಂದೂ ಧರ್ಮದ ಭಾಗವೆನ್ನಬಹುದೆ ? ಇದು ಪ್ರತಿಭಟನಾ ಪರಂಪರೆಗಳನ್ನೇ ನುಂಗಿ ನೊಣೆಯುವ ವೈದಿಕಶಾಹಿ ಕುತಂತ್ರಗಾರಿಕೆಯಲ್ಲವೇ ? ಇಂತಹ ಕುತಂತ್ರಕ್ಕೆ ಸಾಕಷ್ಟು ಧೀರ್ಘ ಇತಿಹಾಸವೇ ಇದೆ.



ಸರ್ಕಾರದ ಈಗಿನ ನಡೆ ಕೂಡ ಅಂತಹ 'ತಿಳುವಳಿಕೆ'ಯ ಭಾಗವೇ ಇರಬಹುದು.

ಈ ಹಂತದಲ್ಲಿ ಮುಸ್ಲಿಂ, ಕ್ರಿಶ್ಚಿಯನ್ ಸಂಸ್ಥೆಗಳನ್ನು ಈ ರೀತಿಯ ನಿಯಂತ್ರಣ ಯತ್ನದಿಂದ ಯಾಕೆ ಕೈ ಬಿಡಲಾಯಿತು ? ಎಲ್ಲರನ್ನು ಒಮ್ಮೆಗ್ಗೆ ಯಾಕೆ ಎದುರು ಹಾಕಿಕೊಳ್ಳುವುದು ಎಂದೋ ? ಅಥವಾ ಬೌದ್ಧ ಜೈನ, ಸಿಖ್ ಧರ್ಮೀಯರ ಹೆಗಲ ಮೇಲೆ ಬಂದೂಕಿಟ್ಟು ಮುಂದೆ ಮುಸ್ಲಿಂ, ಕ್ರಿಶ್ಚಿಯನ್ ಧರ್ಮೀಯರನ್ನು ಉಡಾಯಿಸುವ ತಂತ್ರವೋ ? ಯಾವುದನ್ನೂ ಕಾಲವೇ ಹೇಳಬೇಕಾಗಿದೆ.

★

ಖುರ್ಚಿ ರಾಜಕಾರಣವೂ, ಬಜೆಟ್ ಘೋಷಣೆಯೂ

ಬಜೆಟ್‌ನಲ್ಲಿ ಪ್ರಸ್ತಾಪಿಸಿಲ್ಲದ, ವಿಧಾನ ಸಭೆಯಲ್ಲಿ ಚರ್ಚಿಸಿಲ್ಲದ, ಕಡೆಗೆ ಸಚಿವ ಸಂಪುಟದಲ್ಲಿಯೂ ಒಪ್ಪಿಗೆ ನೀಡದ ದಿಢೀರ್ ದಿಢೀರ್ ಕೊಡುಗೆ, ಇನಾಮು ಘೋಷಣೆ ಮಾಡುವುದೆಂದರೆ ನಮ್ಮ ರಾಜ್ಯದ ಮುಖ್ಯಮಂತ್ರಿ ಯಡಿಯೂರಪ್ಪನವರಿಗೆ ಆಹಾ! ಅದೇನು ಪ್ರೀತಿಯೋ ಏನೋ !!

ಹೋದ ಹೋದಲ್ಲೆಲ್ಲ, ಭಾಗವಹಿಸಿದ ಸಭೆ, ಸಮಾರಂಭದಲ್ಲೆಲ್ಲ ಐದೋ, ಹತ್ತೋ, ಇಪ್ಪತ್ತೋ, ಇಪ್ಪತ್ತೈದೋ ಕೋಟಿ ರೂಪಾಯಿಗಳ ಕೊಡುಗೆ ಘೋಷಣೆ ಮಾಡದೇ ಹೋದರೆ, ಅಥವಾ ಅಂತಹ ಯೋಜನೆ ಪ್ರಕಟಿಸದೇ ಹೋದರೆ ನಮ್ಮ ಮು.ಮ.ಗಳಿಗೆ ರಾತ್ರಿ ನಿದ್ರೆಯೇ ಬರುವುದಿಲ್ಲ ಎಂದು ಕಾಣುತ್ತದೆ.

ಮೊನ್ನೆ ಮೊನ್ನೆ ಅಂದರೆ ಫೆಬ್ರವರಿ 18 ರಂದು ಏನಾಗಿದೆ. ಮು.ಮ.ಗಳು ಸಿರಿಗೆರೆ ತರಳ ಬಾಳು ಹುಣ್ಣಿಮೆ ಮಹೋತ್ಸವದ ಕೊನೆಯ ದಿನದ ಆಚರಣೆಯಲ್ಲಿ ಭಾಗವಹಿಸಿದ್ದರು. ಅಲ್ಲಿ ಮಾತನಾಡುವಾಗ ಬಸವೇಶ್ವರ ವಿಶ್ವ ವಿದ್ಯಾಲಕ್ಕೆ 25 ಕೋಟಿ ಕೊಡುಗೆ ನೀಡುವುದಾಗಿ ಘೋಷಿಸಿಯೇ ಬಿಟ್ಟರು. ಶಿಕ್ಷಣಕ್ಕೆ, ವಿಶ್ವ ವಿದ್ಯಾಲಯಕ್ಕೆ ಹಣ ಕೊಟ್ಟರೆ ಒಳ್ಳೆಯದೇ ಅಲ್ಲವೇ ಅಂತ ಯಾರಾದರೂ ಕೇಳಬಹುದು.

ಬಸವೇಶ್ವರ ವಿಶ್ವ ವಿದ್ಯಾಲಯ ಎಂಬುದು ಈಗ ಇಲ್ಲ. ಇನ್ನು ಮುಂದೆ ಶುರು ಮಾಡುವವ ಎನ್ನುತ್ತಿರುವ ವಿಶ್ವ ವಿದ್ಯಾಲಯ ಅದು. ಹೊಸದೊಂದು ವಿಶ್ವ ವಿದ್ಯಾಲಯ ಶುರು ಮಾಡುವುದೆಂದರೆ ಗಾಂಧಿ ಬಜಾರಿನ ವಿದ್ಯಾರ್ಥಿ ಭವನ್ ಹೋಟೆಲ್ ಮುಂದೆ ಒಂದು ಬೀಡಾ ಅಂಗಡಿ ಶುರು ಮಾಡಿದಂತೆ ಅಂತ ಭಾವಿಸಿದ್ದಾರೇನೋ ನಮ್ಮ ಡಾ। ಬಿ.ಎಸ್. ಯಡ್ಡಿಯೂರಪ್ಪ !!. ಒಂದು ಹೊಸ ವಿಶ್ವ ವಿದ್ಯಾಲಯ ಎಂದರೆ ಅದರ ಉದ್ದೇಶವೇನು? ಅದರ ಸ್ವರೂಪವೇನು? ಅದರ ಕಾರ್ಯವ್ಯಾಪ್ತಿಯೇನು ? ಅದರ ಅಗತ್ಯತೆ ಏನು? ಇಟ್ಟುಕೊಂಡ ಉದ್ದೇಶ ಸಾಧಿಸಲು ಹೊಸ ವಿಶ್ವ ವಿದ್ಯಾಲಯವೇ ಬೇಕೇ ? ಅಥವಾ ಇರುವ ವಿಶ್ವ ವಿಶ್ವವಿದ್ಯಾಲಯಗಳಲ್ಲೇ ಉದ್ದೇಶಿತ ಗುರಿಯನ್ನು ಸಾಧಿಸಲು ಯೋಜಿಸಬಹುದೇ? ಇಂತಹ ಹಲವು ಮೂಲಭೂತ ಪ್ರಶ್ನೆಗಳನ್ನು ಕೇಳಿಕೊಂಡು ಅದನ್ನು ಬಗೆ ಹರಿಸಿಕೊಳ್ಳಬೇಕಾದ ಅಗತ್ಯವಿರುತ್ತದೆ.

ಇವೆಲ್ಲ ಆಗಬೇಕಾದರೆ ನಾಡಿನ ಶಿಕ್ಷಣ ತಜ್ಞರು, ವಿಷಯ ತಜ್ಞರು, ಶಿಕ್ಷಣಾಸಕ್ತ ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಚರ್ಚಿಸಿ ತೀರ್ಮಾನಕ್ಕೆ ಬರಬೇಕಾಗುತ್ತದೆ.

ಇದಕ್ಕೂ ಮೊದಲು ತಮ್ಮ ರಾಜ್ಯದಲ್ಲಿ ಈಗಾಗಲೇ ಇರುವ ಯಾವ ಯಾವ ವಿಶ್ವ ವಿದ್ಯಾಲಯಗಳಿಗೆ ಕನಿಷ್ಠ ಮರ್ಯಾದೆಯಾದ ಕಟ್ಟಡವೂ ಇಲ್ಲ. ಯಾವ ವಿಶ್ವವಿದ್ಯಾಲಯದಲ್ಲಿ ಸೂಕ್ತ ಅಧ್ಯಾಪಕ ವರ್ಗ, ಸಿಬ್ಬಂದಿಗಳಿಲ್ಲ, ಎಲ್ಲಿ ವಿದ್ಯಾರ್ಥಿಗಳಿಗೆ ಒಂದು ವಾಸ ಯೋಗ್ಯ ಹಾಸ್ಟೆಲ್ ಇಲ್ಲ ಎಂಬ ಮಾಹಿತಿಯನ್ನು ಸರ್ಕಾರ ತನ್ನ ಮುಂದೆ ತರಿಸಿ ಇಟ್ಟುಕೊಳ್ಳಬಕಾಗುತ್ತದೆ.

ತನ್ನ ವಿರುದ್ಧ ಯಾವಾಗ ಯಾವ ಪ್ರಕರಣ ದಾಖಲಾಗುತ್ತದೋ ? ತನ್ನ ಯಾವ ಹಗರಣ ಯಾವಾಗ ಬಯಲಿಗೆ ಬೀಳುತ್ತದೋ ? ವಿಚಾರಣೆಗೆ ಹಾಜರಾಗಲು ಯಾವಾಗ ಕೋರ್ಟಿನಿಂದ ನೋಟಿಸ್ ಜಾರಿಯಾಗುತ್ತದೋ ?.... ಅಂತ ತಲೆ ಬಿಸಿ ಮಾಡಿಕೊಂಡಿರುವ ಮುಖ್ಯಮಂತ್ರಿಯೊಬ್ಬರಿಗೆ ಇಷ್ಟೆಲ್ಲಾ ಯೋಚಿಸಲು ಪಾಪ ಸಮಯವಾದರೂ ಎಲ್ಲಿರುತ್ತದೆ.?**ತನ್ನದೇ ವಿಕೆಟ್ ಉದುರಿ ಚುನಾವಣೆಗೆ ಯಾವಾಗ ಹೋಗಬೇಕಾಗಿ ಬರುತ್ತದೋ** ಎಂಬ ಆತಂಕದಲ್ಲಿರುವವರಿಗೆ ಯಾವ ಸಮಾರಂಭದಲ್ಲಿ ಯಾವ ಘೋಷಣೆ ಮಾಡಿದರೆ ಓಟುಬ್ಯಾಂಕು ಗಟ್ಟಿಯಾಗುತ್ತದೆ ಎಂಬುದರತ್ತಲೇ ಯೋಚನೆ ಗಿರಕಿ ಹೊಡೆಯುವುದು ಸಹಜವೇ.

ಸದ್ಯ, ಯಡಿಯೂಪ್ಪನವರು ಬಸವೇಶ್ವರರ ಪ್ರತಿಮೆ ಸ್ಥಾಪನೆಗೆ 25 ಕೋಟಿ ರೂಪಾಯಿ ಅಂತ ಘೋಷಣೆ ಮಾಡಿಲ್ಲವಲ್ಲ ಎಂಬುದೊಂದೇ ಈಗ ನಮಗೆಲ್ಲಾ ಸಂತೋಷದ ವಿಷಯ. ಅಲ್ಲವೇ

ಘೋಷಣೆ ಮತ್ತು ಜಾರಿ

ಸನ್ಮಾನ್ಯ ಡಾ। ಬಿ.ಎಸ್.ಯಡಿಯೂರಪ್ಪನವರು ಎಂತಹ ಘೋಷಣೆ ವೀರರು ಅಂತ ಈಗಾಗಲೇ ನಾಡಿಗೆ ಸಾಕಷ್ಟು ಗೊತ್ತಾಗಿದೆ. ಉದಯವಾಣಿ ಪತ್ರಿಕೆಯಲ್ಲಿ ಫೆಬ್ರವರಿ, 20 ನೇ ತಾರೀಕಿನಂದು ಒಂದಷ್ಟು ಅಂಕಿ ಸಂಖ್ಯೆ,ವಿವರ ಪ್ರಕಟವಾಗಿವೆ. ಅವು ನಮ್ಮ ಯಡಿಯೂರಪ್ಪನವರು ಕಳೆದ ವರ್ಷದ ಬಜೆಟ್‌ನಲ್ಲಿ ಯಾವ ಯಾವ ಬಾಬ್ತಿಗೆ ಎಷ್ಟೆಷ್ಟು ಘೋಷಣೆ ಮಾಡಿದ್ದಾರೆ. ಹಾಗೇ ಇಲ್ಲಿಯವರೆಗೆ ಯಾವ ಬಾಬ್ತಿಗೆ ಎಷ್ಟೆಷ್ಟು ಖರ್ಚಾಗಿದೆ ಅಂತ. ಒಟ್ಟಾರೆಯಾಗಿ ಹೇಳುವುದಾದರೆ ಮತ್ತೊಂದು ಬಜೆಟ್ ಮಂಡನೆ ಆಗಿರುವ ಈ ಹೊತ್ತಿಗೆ ಕೂಡ ಕಳೆದ ಘೋಷಿತ ಯೋಜನಾ ಬಜೆಟ್ ನಲ್ಲಿ ಬಳಕೆಯಾಗಿರುವುದು ಕೇವಲ ಶೇ.51 ಮಾತ್ರ ಯೋಜನೇತರದಲ್ಲಿ ಶೇ.52. (ವಿವರಗಳಿಗೆ ಬಾಕ್ಸ್ ನೋಡಿ.) ಇನ್ನುಳಿದ ಸಮಯದಲ್ಲಿ ಬಾಕಿ ಹಣ ಖರ್ಚಾಗಬಹುದಲ್ಲವೇ ಎಂಬ ಪ್ರಶ್ನೆ ಬರಬಹುದು. ನಿಜ ಬಾಕಿ ಉಳಿದ ದಿನಗಳಲ್ಲಿ ಒಂದಷ್ಟು ಬಜೆಟ್ ಖಾಲಿ ಆಗಬಹುದು. ಆದರೆ ನಿರ್ದಿಷ್ಟ ಉದ್ದೇಶಕ್ಕೆಂದು ನೀಡಲಾದ ಹಣ, ಅದೂ ಕೃಷಿ, ಗ್ರಾಮೀಣಾಭಿವೃದ್ಧಿ ಇತ್ಯಾದಿಗಳಿಗಾಗಿ ಕೊಟ್ಟ ಹಣ ಖರ್ಚಾಗದೇ ವಾಪಸ್ಸಾಗುತ್ತದೆ, ಅದೂ ನಮ್ಮ ಗ್ರಾಮೀಣ ಜನರ ಬದುಕನ್ನು ಕೃಷಿ ಬಿಕ್ಕಟ್ಟೆಂಬುದು ಇಷ್ಟೊಂದು ದೊಡ್ಡದಾಗಿ ಹಿಂಡುತ್ತಿರುವ ಈ ಹೊತ್ತಿನಲ್ಲಿ !!

ಅದರ ಅರ್ಥ ಏನೆಂದರೆ ರಾಜ್ಯ ಬಿಜೆಪಿ ಸರ್ಕಾರ ತನ್ನದೇ ಘೋಷಿತ ಕಾರ್ಯಕ್ರಮ, ಬಜೆಟ್ ಜಾರಿಯಲ್ಲಿ ಇಷ್ಟೊಂದು ದಕ್ಷತೆ ಮೆರೆಯುತ್ತಿದೆ ಅಂತ. ಮತ್ತೊಂದು ಮಾತು.ಸಾಕಷ್ಟು ಕಾಲಾವಕಾಶ ಇರುವಾಗ ಜಾರಿಯಾಗುವ ಯೋಜನೆಗಳಲ್ಲೇ ನಿಜವಾಗಿಯೂ ಜನರ ಕೈಗೆ ಹೋಗಿ ತಲುಪುವುದು ಬಾರಿ ಅಲ್ಪ. ಇನ್ನು ಇರುವ ಅಲ್ಪ ಸಮಯದಲ್ಲಿ ಹೇಗಾದರೂ ಸರಿ ಬಜೆಟ್ ಖಾಲಿಯಾಗಬೇಕು ಎಂದು ಯೋಜನೆ ಜಾರಿಗೆ ಹೊರಟರೆ ಬಜೆಟ್ಟು ಹೋಗಿ ಯಾರ ಹೊಟ್ಟೆ ಸೇರುತ್ತದೆ ಎಂಬುದನ್ನು ಯಾರೇ ಆದರೂ ಅತ್ಯಂತ ಸುಲಭವಾಗಿ ಊಹೆ ಮಾಡಿಬಿಡಬಹುದಾದ ವಿಚಾರ. ಅಲ್ಲವೇ ?

ರಾಜ್ಯದ 2009-10 ನೇ ಸಾಲಿನ ಬಜೆಟ್‌ನಲ್ಲಿ ಯೋಜಿಸಲಾಗಿದ್ದು...

ಒಟ್ಟು ವೆಚ್ಚದ ಗುರಿ	ಕೋಟಿಗಳಲ್ಲಿ	ಆಗಿರುವ ವೆಚ್ಚ ಕೋಟಿಗಳಲ್ಲಿ
ಯೋಜನೆ - ಯೋಜನೇತರ ಎರಡೂ ಸೇರಿ	77,763.40	40,768.33 ಜನವರಿ ಕೊನೆಗೆ
ಕೃಷಿ ಮತ್ತು ತೋಟಗಾರಿಕೆ	1261.50	370.00
ಪಶು ಸಂಗೋಪನೆ ಮೀನುಗಾರಿಕೆ (ಹಾಲು ಉತ್ಪಾದಕರ ಸಬ್ಸಿಡಿ ಸೇರಿ)	751.75	387.28
ಕೃಷಿ ಮಾರುಕಟ್ಟೆ ಸೇರಿ ಸಹಕಾರ ಇಲಾಖೆ	313.97	135.98
ಜಲ ಸಂಪನ್ಮೂಲ	4,751.88	2,236.59
ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್	2,522.43	1,249.88
ರಸ್ತೆ ಸುಧಾರಣೆ	2,533.68	1,457.[illegible]
ನಗರ ಸುಧಾರಣೆ ನಗರಾಭಿವೃದ್ಧಿ ಇಲಾಖೆ	4,257.27	1,867.39
ಭಾಗ್ಯಲಕ್ಷ್ಮಿ ಮಕ್ಕಳ ಕಲ್ಯಾಣ	1,555.17	804.06
ಸಮಾಜ ಕಲ್ಯಾಣ ಇಲಾಖೆ	2196.97	1,429.[illegible]



2 ಜಿ ಹಗರಣದ ಮೇಲೆ ಕೊನೆಗೂ ಜೆಪಿಸಿ

1.76ಲಕ್ಷ ಕೋಟಿ ರೂ.ಗಳ 2ಜಿ ಹಗರಣದ ತನಿಖೆಗೆ ಜೆಪಿಸಿ ರಚಿಸಬೇಕೆಂಬ ಬೇಡಿಕೆಯನ್ನು ತಿರಸ್ಕರಿಸಿ ಒಂದಿಡೀ ಸಂಸದ್ ಅಧಿವೇಶನವನ್ನು ವ್ಯರ್ಥ ಮಾಡಿದ ಯುಪಿಎ-2 ಸರಕಾರ ಕೊನೆಗೂ ಜೆಪಿಸಿ ರಚಿಸಲು ಒಪ್ಪಿರುವುದಾಗಿ ಪ್ರಕಟಿಸಿದೆ. ಈಗಲೂ, ಅದರ ಅಗತ್ಯವಿರಲಿಲ್ಲ, ಆದರೆ ಸಂಸತ್ತಿನ ಅಧಿವೇಶನ ನಡೆಯುವಂತೆ ಮಾಡಲು ವಿರೋಧ ಪಕ್ಷಗಳ ಬೇಡಿಕೆಗೆ ಒಪ್ಪಲಾಗಿದೆ ಎಂದು ಪ್ರಧಾನ ಮಂತ್ರಿಗಳು ಉದಾರತೆಯ ಸೋಗು ಹಾಕಿದ್ದಾರೆ. ಈ ಅರಿವಾದರೂ ಈ ಮೊದಲೇ ಇರಬಹುದಿತ್ತಲ್ಲ, ಆದೇಕೆ ಇದುವರೆಗೆ ಕಾಣಿಸಲಿಲ್ಲ ಎಂಬ ಪ್ರಶ್ನೆಗೆ ಅವರ ಬಳಿ ಉತ್ತರವಿದ್ದಂತಿಲ್ಲ.

ಎಡಪಕ್ಷಗಳು ಜೆಪಿಸಿ ಕೇಳುತ್ತಿದ್ದುದು ಇಡೀ ವ್ಯವಸ್ಥೆಯನ್ನು ಹೇಗೆ ಮನಬಂದಂತೆ ಮಣಿಸಿ ಇಂತಹ ಬೃಹತ್ ಹಗರಣಕ್ಕೆ ಅವಕಾಶ ಕೊಡಲಾಯಿತು ಎಂದು ತನಿಖೆ ಮಾಡಿ ಸರಿಪಡಿಸಲಿಕ್ಕಾಗಿ. ಹೊಸ ದೂರಸಂಪರ್ಕ ಮಂತ್ರಿಗಳು ಸರಕಾರದ ಬೊಕ್ಕಸಕ್ಕೆ ನಷ್ಟವೇ ಆಗಿಲ್ಲ ಎಂದರೆ, ಪ್ರಧಾನ ಮಂತ್ರಿಗಳು ಇದನ್ನು ಕಾರ್ಪೊರೇಟುಗಳಿಗೆ ನೀಡಿದ ಸಬ್ಸಿಡಿ ಎಂಬಂತೆ ಹಗುರವಾಗಿ ಮಾತಾಡಿದ್ದಾರೆ. ಆದರೆ ಈ 'ಸಬ್ಸಿಡಿ' ಸರಕಾರದ ಬೊಕ್ಕಸದಿಂದ ಬಂದದಲ್ಲವೇ ಎಂಬ ಬಗ್ಗೆ, ಅದನ್ನು ಪಡೆದ ಕಂಪನಿಗಳು ಅವನ್ನು ಆರು ಪಟ್ಟು ಬೆಲೆಗೆ ಮಾರಿಕೊಂಡ ಬಗ್ಗೆ ಮೌನವಾಗಿದ್ದಾರೆ. ಕಳೆದ ಮೂರು ತಿಂಗಳ ನಿಷ್ಕ್ರಿಯತೆಯೇ ಒಂದು ಸಾಧನೆ ಎಂಬಂತೆ, ಜೆಪಿಸಿ ಎಂಬುದು ಒಂದು ಉದಾರ ಕೊಡುಗೆ ಎಂಬಂತೆ ಪ್ರಧಾನಿಗಳು ಮಾತಾಡಿರುವುದು, ವಾಸ್ತವವಾಗಿ ಈ ಸರಕಾರದ ದಿಕ್ಕುಗೇಡಿತನವನ್ನು ಬಿಂಬಿಸುತ್ತದೆ ಎಂದು ಸಿಪಿಐ(ಎಂ) ಮುಖಂಡ ಸೀತಾರಾಂ ಯೆಚುರಿ ಟೀಕಿಸಿದ್ದಾರೆ.

ಎಲ್ಲಾ ಸಂಸದೀಯ ಸಮಿತಿಗಳಂತೆಯೆ ಈ ಜೆಪಿಸಿಯಲ್ಲೂ 20 ಲೋಕಸಭಾ ಮತ್ತು 10 ರಾಜ್ಯಸಭಾ ಸದಸ್ಯರಿರಬೇಕು, ಎಲ್ಲಾ ಪಕ್ಷಗಳಿಗೆ ನ್ಯಾಯಯುತ ಪ್ರಾತಿನಿಧ್ಯವಿರಬೇಕು, ಕೆಲವು ಪಕ್ಷಗಳನ್ನು ಸೇರಿಸಿಕೊಂಡು ಕೆಲವನ್ನು ಹೊರಗಿಡುವ ತಂತ್ರ ನಡೆಸಬಾರದು ಎಂದು ಅವರು ಎಚ್ಚರಿಸಿದ್ದಾರೆ.

ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ಯುಪಿಎ-2 ಸರಕಾರ 30 ಸದಸ್ಯರುಳ್ಳ ಜೆಪಿಸಿಯನ್ನು ರಚಿಸಲು ಕೂಡ ಒಪ್ಪಿಕೊಂಡಿದೆಯೆಂಬ ಸುದ್ದಿ ಬಂದಿದೆ. ಮೊದಲಿಗೆ ಕೇವಲ 21 ಸದಸ್ಯರಿರುವ ಸಮಿತಿಯನ್ನು ರಚಿಸುವ ಯೋಚನೆ ಅದರದ್ದಾಗಿತ್ತಂತೆ.

★


ಘಟಾನುಘಟಿಗಳ ಸಿಬಿಐ ವಿಚಾರಣೆ, ದಾಳಿ

ಈ ನಡುವೆ ದೂರಸಂಪರ್ಕ ವಲಯದ ಖಾಸಗೀ ಘಟಾನುಘಟಿಗಳನ್ನು ಸಿಬಿಐ ತನ್ನ ಕಚೇರಿಗೆ ಕರೆಸಿಕೊಂಡು ವಿಚಾರಣೆ ನಡೆಸಿದೆ-ರಿಲಯೆನ್ಸ್‌ನ ಅನಿಲ್ ಅಂಬಾನಿ, ಎಸ್ಸಾರ್‌ನ ಪ್ರಶಾಂತ್ ರುಯಾ, ಯುನಿಟೆಕ್‌ನ ಸಂಜಯ್‌ಚಂದ್ರ ಹಾಗೂ ವಿಡಿಯೊಕೋನ್‌ನ ಅಧ್ಯಕ್ಷ ವೇಣುಗೋಪಾಲ ಧೂತ್ ಮತ್ತು ಆತನ ಸೋದರ ಹಾಗೂ ರಾಜ್ಯಸಭಾ ಸದಸ್ಯ ರಾಜಕುಮಾರ್ ಧೂತ್. ಮಾಜಿ ಮಂತ್ರಿ ರಾಜ ಮತ್ತು ಸ್ವಾನ್ ಟೆಲಿಕಾಂನ ಶಾಹಿದ್ ಉಸ್ಮಾನ್ ಬಲ್ವ 'ನಿಜಸಂಗತಿಗಳನ್ನು ಬಚ್ಚಿಟ್ಟಿದ್ದಾರೆ' ಎಂದು ವಿಚಾರಣೆಗಳ ನಂತರ ಸಿಬಿಐ ಆಪಾದಿಸಿದೆ. ಇವರಿಬ್ಬರನ್ನೂ ಮಾರ್ಚ್ 3 ರವರೆಗೆ ತಿಹಾರ್ ಜೈಲಿಗೆ ಕಳಿಸಲಾಗಿದೆ.

ಸಿಬಿಐ ತನಿಖೆ ಈಗ ಯುಪಿಎ ಅಂಗಪಕ್ಷ ಡಿಎಂಕೆಯ ಮನೆಬಾಗಿಲಿಗೂ ತಲುಪಿದೆ. ಡಿಎಂಕೆ ಸಂಸತ್ ಸದಸ್ಯೆ ಹಾಗು ಮುಖ್ಯಮತ್ರಿಗಳ ಪುತ್ರಿ ಕನ್ನಿಮೋಳಿ ಹಾಗೂ ಆಕೆಯ ತಾಯಿ ಪ್ರಧಾನ ಶೇರುದಾರರಾಗಿರುವ ಕಲೈನಾರ್ ಟಿವಿಯ ಮುಖ್ಯ ಕಚೇರಿಯ ಮೇಲೆ ಸಿಬಿಐ ದಾಳಿ ನಡೆದು ಏಳು ಗಂಟೆಗಳ ಕಾಲ ತನಿಖೆ ನಡೆದಿದೆ. ಮಾರ್ಚ್ 1ರೊಳಗೆ ಕನ್ನಿಮೋಳಿಯವರ ವಿಚಾರಣೆ ಮಾಡುವ ಸಂಭವವೂ ಇದೆಯಂತೆ. ಇದರ ಹಿನ್ನೆಲೆಯಲ್ಲಿಯೇ ಕಾಂಗ್ರೆಸ್ ಮುಂಬರುವ ವಿಧಾನ ಸಭಾ ಚುನಾವಣೆಗಳಲ್ಲಿ 65 ಸ್ಥಾನಗಳನ್ನು ಕೇಳಲಿದೆ, ಡಿಎಂಕೆ ಅಧಿಕಾರಕ್ಕೆ ಮರಳಿದರೆ, ಮಂತ್ರಿಮಂಡಲದಲ್ಲೂ ಪಾಲು ಕೇಳಲಿದೆ ಎಂದು ವರದಿಯಾಗಿದೆ. ಇದುವರೆಗೆ ಡಿಎಂಕೆ ತಮಿಳುನಾಡಿನಲ್ಲಿ ಬೇರೆ ಯಾವ ಪಕ್ಷದೊಂದಿಗೂ ಅಧಿಕಾರ ಹಂಚಿಕೊಳ್ಳಲು ಒಪ್ಪುತ್ತಿರಲಿಲ್ಲ.

ಕಲ್ಮಾಡಿಯವರಿಗೂ ಜೆಪಿಸಿ ಬೇಕಂತೆ!

ಕಾಮನ್ವೆಲ್ತ್ ಕ್ರೀಡಾಕೂಟದ ಹಗರಣದಲ್ಲಿ ಕ್ರೀಡಾಕೂಟದ ಸಂಘಟನಾ ಸಮಿತಿಯ ಅಧ್ಯಕ್ಷ ಸ್ಥಾನದಿಂದ ವಜಾ ಆಗಿರುವ ಸುರೇಶ ಕಲ್ಮಾಡಿ ಈ ಹಗರಣದ ತನಿಖೆಗೂ ಜಂಟಿ ಸಂಸದೀಯ ಸಮಿತಿ ರಚಿಸಿ ಎಂದು ಆಗ್ರಹಿಸಿದ್ದಾರೆ. 2ಜಿಗೆ ಮಾಡುವುದಾದರೆ , ಕಾಮನೆವೆಲ್ತ್ ಕ್ರೀಡಾಕೂಟಕ್ಕೆ ಏಕಿಲ್ಲ, ಇದರಿಂದ ಸತ್ಯ ಹೊರಬರುತ್ತದೆ ಎಂದು ಅವರ ತರ್ಕ. ಅವರು ಒಂದು ರೂಪಾಯಿ ಕೂಡ ಇದರಿಂದ ಪಡೆದಿಲ್ಲವಂತೆ. ಸಂಘಟನಾ ಸಮಿತಿಗೆ ಕೊಟ್ಟಿರುವ ಬಜೆಟ್ ಒಟ್ಟು ಕ್ರೀಡಾಕೂಟದ ಬಜೆಟಿನ ಶೇ.5 ಮಾತ್ರ, ಆದರೂ ತನ್ನ ಮೇಲೆಯೇ ಏಕೆ ಗುರಿ ಇಡಲಾಗುತ್ತಿದೆ ಎಂಬುದು ಅವರ ಪ್ರಶ್ನೆ. ಅವರ ಪಕ್ಷದವರು, ಯುಪಿಎ-2 ನಡೆಸುವವರು ಅದಕ್ಕೆ ಉತ್ತರ ಕೊಟ್ಟಿಲ್ಲ.



ಕೃಪೆ: ದಿ ಹಿಂದೂ

ಈ ನಡುವೆ ಕಲ್ಮಾಡಿಯವರ ಪ್ರಮುಖ ಸಹಾಯಕ ಶೇಖರ ದೇವರುಕ್ಕರ್ ಮತ್ತು ವ್ಯಾಪಾರಿ ಬಿನು ನಾನು ಎಂಬುವರನ್ನು ಈ ಹಗರಣಕ್ಕೆ ಸಂಬಂಧಪಟ್ಟಂತೆ ನ್ಯಾಯಾಂಗ ಕಸ್ಟಡಿಗೆ ಒಪ್ಪಿಸಲಾಗಿದೆ. ಸಂಘಟನಾ ಸಮಿತಿಯ ಐವರು ಅಧಿಕಾರಿಗಳ ಮನೆಗಳ ಮೇಲೆ ಸಿಬಿಐ ದಾಳಿ ನಡೆದಿದೆ. ಕ್ರೀಡಾಕೂಟಕ್ಕೆ ಸಂಬಂಧಪಟ್ಟ ಕಾಂಟ್ರಾಕ್ಟುಗಳನ್ನು ಕೊಡುವಲ್ಲಿ ಲಂಚ ತೆಗೆದುಕೊಂಡಿರುವ ಆಪಾದನೆ ಇವರ ಮೇಲಿದೆ. ಇದರ ಮೊತ್ತ 685 ಕೋಟಿ ರೂ. ಎಂದು ಅಂದಾಜು ಮಾಡಲಾಗಿದೆ.

ಫೆಬ್ರುವರಿ 23ರಂದು ಇನ್ನಿಬ್ಬರನ್ನು ಈ ಹಗರಣದಲ್ಲಿ ಸಿಬಿಐ ಬಂಧಿಸಿದೆ-ಸಂಘಟನಾ ಸಮಿತಿಯ ಅಡಿಶನಲ್ ಮಹಾನಿರ್ದೇಶಕ ಕೆಯುಕೆ ರೆಡ್ಡಿ ಮತ್ತು ಒಂದು ಖಾಸಗಿ ಕಂಪನಿಯ ನಿರ್ದೇಶಕ ಪ್ರವೀಣ್ ಭಕ್ಷಿ ಎಂಬವರನ್ನು.

★

ಸಲಹಾ ಮಂಡಳಿ-ಯುಪಿಎ ಸರಕಾರದ ಜಟಾಪಟಿ

ರಾಷ್ಟ್ರೀಯ ಸಲಹಾ ಮಂಡಳಿ(ಎನ್‌ಎಸಿ) ಎಂಬುದು ಯುಪಿಎ ಸರಕಾರ 'ನಾಗರಿಕ ಸಮಾಜ'ದೊಂದಿಗೆ ಸಂವಾದ ನಡೆಸಲೆಂದು ರಚಿಸಿದ, ವಿವಿಧ ರಂಗಗಳ ಪ್ರತಿಷ್ಠಿತ, ಅನುಭವಿ ಪರಿಣತರು ಸದಸ್ಯರಾಗಿರುವ ಒಂದು ಮಂಡಳಿ. ಸಾಮಾಜಿಕ ಧೋರಣೆ ಮತ್ತು ಅನನುಕೂಲಕ್ಕೆ ಒಳಗಾಗಿರುವ ಜನಗಳ ಹಕ್ಕುಗಳ ಮೇಲೆ ಒತ್ತಿ ನೀಡಿ ಸರಕಾರ ಎಂತಹ ಶಾಸನಗಳನ್ನು ರಚಿಸಬೇಕು ಎಂದು ಸರಕಾರಕ್ಕೆ ಇದು ಸಲಹೆ ನೀಡಬೇಕು. ಇದು ಕೇರಾಫ್ ಪಿಎಂಒ, ಅಂದರೆ ಇದರ ಕಚೇರಿ ಇರುವುದು ಪ್ರಧಾನ ಮಂತ್ರಿಗಳ ಕಚೇರಿಯಲ್ಲೇ. ಇತ್ತೀಚಿನ ದಿನಗಳಲ್ಲಿ ಆಹಾರ ಭದ್ರತಾ ಕಾನೂನಿನ ಕರಡಿನ ಮೇಲಿನ ಜಟಾಪಟಿಯೊಂದಿಗೆ ಇದು ಯುಪಿಎ-2 ಸರಕಾರದ ಇನ್ನೊಂದು ಸೋಗಿನ ರೂಪ ಪಡೆಯುತ್ತಿದೆಯೇ ಎಂಬ ಸಂದೇಹ ಬರದಿರದು. ಎನ್‌ಎಸಿ ಬಯಸುವ ಆಹಾರ ಭದ್ರತೆಯನ್ನು ಒದಗಿಸುವ ಶಕ್ತಿ ಯುಪಿಎ-2 ಸರಕಾರಕ್ಕೆ ಇಲ್ಲವೆಂದು ಹಣಕಾಸು ಮಂತ್ರಿಯಾದಿಯಾಗಿ ಯುಪಿಎ ವಕ್ತಾರರು ಹೇಳುತ್ತಿದ್ದಾರೆ. ಇದನ್ನು ಎನ್‌ಎಸಿಯ ಪರಿಣತರು ಒಪ್ಪುತ್ತಿಲ್ಲ. ಅವರು ಹೇಳುತ್ತಿರುವುದನ್ನು ಯುಪಿಎ-2 ಸರಕಾರದ ಮುಖಂಡರು ಒಪ್ಪುತ್ತಿಲ್ಲ. ಅಷ್ಟೇ ಅಲ್ಲ, ಅಂತಿಮ ನಿರ್ಧಾರ ಯುಪಿಎ-2 ಸರಕಾರದ ಮುಖಂಡರದ್ದೇ.

ಈ ಜಟಾಪಟಿ ಕೇವಲ ಆಹಾರ ಭದ್ರತಾ ಕಾನೂನಿಗೇ ಸೀಮಿತಗೊಂಡಿಲ್ಲ. ಕೋಮುವಾದಿ ಹಿಂಸಾಚಾರ(ತಡೆ, ಹತೋಟಿ ಮತ್ತು ಮರುವಸತಿ) ಮಸೂದೆ,2005 ಇದಕ್ಕೆ ಮತ್ತೊಂದು ಉದಾಹರಣೆ. ಸರಕಾರದ ಕರಡನ್ನು ಎನ್‌ಎಸಿ ಸಾರಾಸಗಟು ತಿರಸ್ಕರಿಸಿ ತಾನೇ ಒಂದು ಕರಡನ್ನು ತಯಾರಿಸಲು ಕಳೆದ ಜುಲೈನಲ್ಲೇ ಮುಂದಾಗಿತ್ತು. ಈ ಕಾನೂನಿನಲ್ಲಿ ಏನೇನು ಇರಬೇಕು ಎಂಬ ಬಗ್ಗೆ ತನ್ನ ಸಲಹೆಗಳನ್ನು ತನ್ನ ವೆಬ್ ತಾಣದಲ್ಲಿ ಪ್ರಕಟಿಸಿ ಇದಕ್ಕೆ ಪ್ರತಿಕ್ರಿಯೆ, ಸಲಹೆ-ಸೂಚನೆಗಳನ್ನು ಆಹ್ವಾನಿಸಿತ್ತು. ಫೆಬ್ರುವರಿ 2011ರ ವೇಳೆಗೆ ಈ ಕರಡು ಸಿದ್ಧವಾಗುತ್ತದೆ ಎಂದಿತ್ತು. ಆದರೆ ಇದರ ನಡುವೆಯೇ ಯುಪಿಎ-2 ಗೃಹ ಮಂತ್ರಾಲಯ ತನ್ನ ಕರಡನ್ನು ಸಂಸತ್ತಿನಲ್ಲಿ ಮಂಡಿಸಿ ಬಜೆಟ್ ಅಧಿವೇಶನದಲ್ಲಿ ಪಾಸು ಮಾಡಿಸಿಕೊಳ್ಳುವ ತರಾತುರಿಯಲ್ಲಿರುವುದು ಎನ್‌ಎಸಿಗೆ ಆಶ್ಚರ್ಯ ಉಂಟು ಮಾಡಿದೆಯಂತೆ. ಎನ್‌ಎಸಿ ಅಧ್ಯಕ್ಷೆ ಸೋನಿಯ ಗಾಂಧಿ ಈ ಬಗ್ಗೆ ಸರಕಾರಕ್ಕೆ ಪತ್ರ ಬರೆಯಬೇಕಾಗಿ ಬಂದಿದೆಯಂತೆ.

ಬಜೆಟ್ ಅಧಿವೇಶನದಲ್ಲಿ ಆಹಾರ ಭದ್ರತಾ ಮಸೂದೆಯ ಪ್ರಸ್ತಾಪವೂ ಇಲ್ಲ. ಆದರೆ ಎನ್‌ಎಸಿ ವಿಮರ್ಶಿಸುತ್ತಿರುವ ಭೂಸ್ವಾಧೀನ(ತಿದ್ದುಪಡಿ) ಮಸೂದೆ,2011 ಮತ್ತು ಮರುವಸತಿ ಮತ್ತು ಮರುಇತ್ಯರ್ಥ ಮಸೂದೆ, 2011ನ್ನು ಬಜೆಟ್ ಅಧಿವೇಶನದಲ್ಲಿ ಮಂಡಿಸುವ ಮಸೂದೆಗಳ ಪಟ್ಟಿಯಲ್ಲಿ ಸೇರಿಸಿಯೇ ಬಿಟ್ಟಿದೆ. ಹಾಗಿದ್ದರೆ ರಾಷ್ಟ್ರೀಯ ಸಲಹಾಮಂಡಳಿ ಎಂಬ ಸೋಗು ಯಾಕೋ?

ತೃಣಮೂಲ ಕಾಂಗ್ರೆಸಿಗೆ ಮತ್ತೊಂದು ಪೇಚು

ಇಲ್ಲಿ ಇನ್ನೊಂದು ಕುತೂಹಲಕಾರಿ ಅಂಶವೂ ಇದೆ. ಭೂಸ್ವಾಧೀನ ಮಸೂದೆಯನ್ನು ಪಶ್ಚಿಮ ಬಂಗಾಲದಲ್ಲಿ ವಿಧಾನ ಸಭಾ ಚುನಾವಣೆಗಳ ನಂತರವೇ ಮಂಡಿಸಬೇಕೆಂಬುದು ತೃಣಮೂಲ ಕಾಂಗ್ರೆಸಿನ ಆಗ್ರಹ. ಏಕೆಂದರೆ ಯುಪಿಎ-2 ಸರಕಾರದ ಈ ಮಸೂದೆ ತೃಣಮೂಲ ಕಾಂಗ್ರೆಸ್ ಸಿಂಗೂರ್ ಮತ್ತು ನಂದಿಗ್ರಾಮದಲ್ಲಿ ಎಡರಂಗ ಸರಕಾರದ ವಿರುದ್ಧ ಮಾಡಿದ ಪ್ರಚಾರ ಕೇವಲ ರಾಜಕೀಯ ಸಮಯ ಸಾಧಕತನ ಎಂಬುದನ್ನು ಬಯಲಿ ಗೆಳೆಯುತ್ತದೆ.

ಆದರೆ ಯುಪಿಎ-2 ಸರಕಾರದ ನೇತೃತ್ವ ವಹಿಸುತ್ತಿರುವ ಕಾಂಗ್ರೆಸ್ ಮತ್ತು ತೃಣಮೂಲ ಒಂದು ಕಸರತ್ತು ನಡೆಸಲು ನಿರ್ಧರಿಸಿದ್ದಾರಂತೆ. ಮಸೂದೆಯನ್ನು ಈ ಅಧಿವೇಶನದ ಕೊನೆಯ ಹೊತ್ತಿಗೆ ಮಂಡಿಸಲಾಗುವುದು, ಆದರೆ ಅದರ ಪರಿಶೀಲನೆ ಪಶ್ಚಿಮ ಬಂಗಾಲ ವಿಧಾನ ಸಭೆಯ ಚುನಾವಣೆಗಳ ನಂತರವೇ. ಕಾಂಗ್ರೆಸ್, ತೃಣಮೂಲ ಸೇರಿದಂತೆ ಯುಪಿಎ-2 ಸರಕಾರದ ನಿಜಸ್ವರೂಪದ ಇನ್ನೊಂದು ಉದಾಹರಣೆ.

ಯುಪಿಎ-2 ಸರ್ಕಾರಕ್ಕೆ 5 ಲಕ್ಷ ಕಾರ್ಮಿಕರ ಧಿಕ್ಕಾರ

ಯುಪಿಎ-2 ಸರಕಾರದ ಧೋರಣೆಗಳ ವಿರುದ್ಧ ಹಿಂದೆಂದೂ ಕಾಣದಷ್ಟು ದೊಡ್ಡ ಪ್ರಮಾಣದಲ್ಲಿ ದೇಶದ ದುಡಿಯುವ ಜನಗಳ ಕ್ರೋಧ ವ್ಯಕ್ತಗೊಂಡಿದೆ. ಫೆಬ್ರುವರಿ 23ರಂದು ದೇಶದ ಮೂಲೆ-ಮೂಲೆಗಳಿಂದ ಐದು ಲಕ್ಷಕ್ಕೂ ಹೆಚ್ಚು ದುಡಿಮೆಗಾರರು ದೇಶದ ರಾಜಧಾನಿಗೆ ಲಗ್ಗೆಯಿಟ್ಟು ಯುಪಿಎ-2 ಸರಕಾರದ ಧೋರಣೆಗಳ ವಿರುದ್ಧ ಧಿಕ್ಕಾರ ಮೊಳಗಿಸಿದರು. ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಕರೆಯ ಮೇರೆಗೆ ದಿಲ್ಲಿಗೆ ಬಂದ ಕಾರ್ಮಿಕರು ಕೋಟ್ಯಂತರ 'ಆಮ್ ಆದ್ಮಿ'ಗಳ ಹಿತಗಳನ್ನು ಬಲಿಗೊಟ್ಟು ಕೆಲವೇ ಹಿಡಿಯಷ್ಟು ಡಾಲರ್ ಬಿಲಿಯಾಧಿಪತಿಗಳ ಹಿತಗಳನ್ನು ರಕ್ಷಿಸುವ ಧೋರಣೆಗಳನ್ನು ಬದಲಿಸದಿದ್ದರೆ ದಿಲ್ಲಿಯ ವಿಜಯ ಚೌಕ ಕೂಡ ತಹ್ರೀರ್ ಚೌಕವಾಗುತ್ತದೆ ಎಂದು ಎಚ್ಚರಿಸಿದರು ಎಂದು ಐಎನ್‌ಎಸ್ ವರದಿ ಮಾಡಿದೆ.



ಅಕ್ಷರ ದಾಸೋಹ ನೌಕರರು ತಮ್ಮ ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿ, ಸರ್ಕಾರದ ನಿರ್ಲಕ್ಷ್ಯ ಧೋರಣೆಯನ್ನು ಖಂಡಿಸಿ ತೀವ್ರವಾಗಿ ಪ್ರತಿಭಟಿಸಿದ್ದಾರೆ. ಒಂದು ಸಂಘರ್ಷಾತ್ಮಕ ಹೋರಾಟದ ವರದಿ

ಅಕ್ಷರ ದಾಸೋಹ ನೌಕರರ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ

ಜಿಲ್ಲಾ ಪಂಚಾಯಿತಿ ಚಲೋ

ಮಹದೇವಮ್ಮ



ಅಕ್ಷರದಾಸೋಹ ನೌಕರರ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕೆಂದು ದಿನಾಂಕ 03.02.2011 ರ ಗುರುವಾರ ಜಿಲ್ಲಾ ಪಂಚಾಯಿತಿ ಚಲೋ ಚಳುವಳಿ ನಡೆಸಿ ಮಂಡ್ಯ ನಗರದ ಸಿಲ್ವರ್ ಜ್ಯುಬಿಲಿ ಪಾರ್ಕ್ ಬಳಿ ಸುಮಾರು 700 ರಿಂದ 800 ಜನ ತೀವ್ರವಾಗಿ ಪ್ರತಿಭಟಿಸಿದರು. ದಾಸೋಹ ನೌಕರರನ್ನು ಮಕ್ಕಳ ಹಾಜರಾತಿ ಆಧಾರದಲ್ಲಿ ನೌಕರರನ್ನು ಕೆಲಸದಿಂದ ತೆಗೆಯುವುದನ್ನು ಕೂಡಲೇ ನಿಲ್ಲಿಸಬೇಕು. ಇಸ್ಕಾನ್ ಅದಮ್ಯ ಚೇತನ ಮತ್ತು ಇತರೆ ಸ್ವಯಂಸೇವಾ ಸಂಸ್ಥೆಗಳಿಗೆ ಈ ಯೋಜನೆಯನ್ನು ಕೊಡುವುದನ್ನು ಕೂಡಲೇ ನಿಲ್ಲಿಸಬೇಕು. ಪ್ರತಿ ತಿಂಗಳು ಮೊದಲ ವಾರದಲ್ಲಿ ವೇತನ ನೀಡಬೇಕು. ಕೆಲವು ತಾಲ್ಲೂಕುಗಳಲ್ಲಿ ಅರಿಯರ್ಸ್ ಬಾಕಿ ಹಣ ಕೂಡಲೇ ನೀಡಬೇಕು. ಬಿಸಿಯೂಟ ನೌಕರರಿಗೆ ಹೆರಿಗೆ ರಜೆ ನೀಡಬೇಕು. ದಸರಾ ರಜೆ ದಿನಗಳಲ್ಲಿ ವೇತನ ಕೊಡಬೇಕು ಎಂದೂ ಆಗ್ರಹಿಸಲಾಯಿತು. ಬಿಸಿಯೂಟ ನೌಕರರನ್ನು ಖಾಯಂಗೊಳಿಸುವಂತೆ ಒತ್ತಾಯಿಸಿದ್ದರೂ ಅಕ್ಷರ ದಾಸೋಹ ಯೋಜನೆಯಡಿ, ದಲಿತ, ಸಂತ್ರಸ್ತ ವಿಧವಾ ಮತ್ತು ಗ್ರಾಮಾಂತರ ಪ್ರದೇಶದ ಮಹಿಳೆಯರಿಗೆ ಉದ್ಯೋಗ ಯೋಜನೆ ಮಾರ್ಗದರ್ಶನದಲ್ಲಿ ತಿಳಿಸಿದೆ. ಆದರೆ ಇದಕ್ಕೆ ತದ್ವಿರುದ್ಧವಾಗಿ ಎನ್.ಜಿ.ಒ. ಗಳಿಗೆ ಯೋಜನೆಯನ್ನು ವಹಿಸಲಾಗುತ್ತಿದೆ. ಈ ಯೋಜನೆಯಡಿಯಲ್ಲಿ 1 ಲಕ್ಷಕೂ ಹೆಚ್ಚು ಮಹಿಳೆಯರು ಕನಿಷ್ಠ ವೇತನ ಇಲ್ಲದೇ ಬೇರಾವುದೇ ಸೌಲಭ್ಯವಿಲ್ಲದೆ ದಿನಕ್ಕೆ 6 ರಿಂದ 7 ಗಂಟೆಗಳ ಕಾಲ ದುಡಿಯುತ್ತಿದ್ದಾರೆ. ಮಕ್ಕಳ ಹಾಜರಾಗಿ ಕಡಿಮೆ ಇದ್ದಲ್ಲಿ ಅಡುಗೆಯವರನ್ನು ನೇರ ಹೊಣೆ ಮಾಡಿ ಅಡುಗೆ ಸಿಬ್ಬಂದಿಯನ್ನು ಕೆಲಸದಿಂದ ಕೈಬಿಡಲಾಗುತ್ತಿದೆ ಎಂದು ಪ್ರತಿಭಟನಾಕಾರರು ಖಂಡಿಸಿದರು. ಬೇಡಿಕೆ ಈಡೇರಿಸಲು ಆಗ್ರಹಿಸಿ ಜಿಲ್ಲಾ ಪಂಚಾಯತ್ ಕಛೇರಿಯ ಆವರಣಕ್ಕೆ ಬಂದ ಮಹಿಳೆಯರು ಕಛೇರಿಗೆ ಒಳಹೋಗಲು ಯತ್ನಿಸಿದರು. ಅಷ್ಟರಲ್ಲಿ ಪೊಲೀಸ್‌ನವರು ತಡೆದು



ಈ ನೂಕಾಟದಲ್ಲಿ ಪೊಲೀಸರೊಬ್ಬರು ಹಿಡಿದಿದ್ದ ಲಾಠಿಯಿಂದ ಪ್ರತಿಭಟನಾ ನಿರತ ಮಹಿಳೆಯರನ್ನು ಬಲವಾಗಿ ತುಳಿದಂತಾಗಿ ಲಾಠಿ ಗಾಣದಾಳು ರತ್ನಮ್ಮ ಎಂಬ ನೌಕರಳಿಗೆ ಆಕೆಯ ಹೊಟ್ಟೆಗೆ ಬಲವಾಗಿ ತಿವಿದು ಆಕೆ ತುಂಬ ಅಸ್ವಸ್ಥರಾದರು. ತಕ್ಷಣ ಆಕೆಯನ್ನು ಸರ್ಕಾರಿ ಆಸ್ಪತ್ರೆಗೆ ಸಾಗಿಸಲಾಯಿತು. ಈ ಘಟನೆಯನ್ನು ಪ್ರತಿಭಟನಾಕಾರರು ಆಕ್ರೋಶ ತೀವ್ರಗೊಳ್ಳಲು ಕಾರಣವಾಯಿತು. ನಂತರ ಪೊಲೀಸರ ಮತ್ತು ನೌಕರರ ನಡುವೆ ಜಟಾಪಟಿ ಮಾತಿನ ಚಕಮುಕಿ ನಡೆಯಿತು. ನಂತರ ಪೊಲೀಸರು ಮತ್ತು ನೌಕರರ ನಡುವೆ ಜಟಾಪಟಿ ಮಾತಿನ ಚಕಮಕಿ ನಡೆಯಿತು. ನಂತರ ಅಕ್ಷರದಾಸೋಹ, ನಿರ್ದೇಶಕರಿಗೆ ಮನವಿ ಪತ್ರ ಕೊಡಲಾಯಿತು. ಪ್ರತಿಭಟನಾಕಾರರು ನಿರ್ಗಮಿಸುವ ವೇಳೆಯಲ್ಲಿ ಹೆದ್ದಾರಿಯಲ್ಲಿ ಪೊಲೀಸ್‌ರವರು ನೌಕರರನ್ನು ಚದುರಿಸಲು ಪ್ರಯತ್ನಿಸಿದರು. ಇದನ್ನು ಸಹಿಸದ ಪ್ರತಿಭಟನಾಕಾರರು ರೊಚ್ಚಿಗೆದ್ದು ಮೈಸೂರು ಬೆಂಗಳೂರು ಹೆದ್ದಾರಿ ರಸ್ತೆ ತಡೆಗೆ ಮುಂದಾದರು. ಸುಮಾರು 15 ನಿಮಿಷ ರಸ್ತೆ ತಡೆ ಮಾಡಲಾಯಿತು. ಅಷ್ಟರಲ್ಲಿ ಪೊಲೀಸಿನವರು ಮುಖಂಡರನ್ನು ಬಂಧಿಸಲು ಮುಂದಾದರು. ಜಿಲ್ಲಾ ಕಾರ್ಯದರ್ಶಿ ಮಹದೇವಮ್ಮ, ಜಿ.ರಾಮಕೃಷ್ಣ ಜನವಾದಿ ಮಹಿಳಾ ಸಂಘಟನೆ ಕುಮಾರಿಯವರನ್ನು ಬಂಧಿಸಲು ಮುಂದಾದಾಗ ನೌಕರರು ಪ್ರತಿಭಟಿಸಿದರು. ನಂತರ 200 ಜನ ನೌಕರರನ್ನು ಬಂಧಿಸಿ ನಂತರ ಬಿಡುಗಡೆ ಮಾಡಲಾಯಿತು.

ರಾಜ್ಯದ ಬೇರೆ ಬೇರೆ ಜಿಲ್ಲೆಗಳಲ್ಲೂ ವ್ಯಾಪಕ ಪ್ರತಿಭಟನೆ ನಡೆದಿದೆ. ಬೆಂಗಳೂರಿನಲ್ಲಿ 800 ಜನ ಜಿಲ್ಲಾ ಪಂಚಾಯತ್ ಕಛೇರಿ ಮುಂದೆ ಪ್ರತಿಭಟನೆ ನಡೆಸಿದ್ದಾರೆ. ತುಮಕೂರು ಜಿಲ್ಲಾ ಪಂಚಾಯತ್ ಕಛೇರಿಯ ಮುತ್ತಿಗೆಯಲ್ಲಿ 300 ಕ್ಕೂ ಹೆಚ್ಚು ಜನ, ಚಿಕ್ಕಬಳ್ಳಾಪುರದಲ್ಲಿ 1000 ಕ್ಕೂ ಹೆಚ್ಚು ಜನರು ಬಳ್ಳಾರಿಯಲ್ಲಿ 1500 ಜನರು ಮುತ್ತಿಗೆ ಹೋರಾಟದಲ್ಲಿ ಭಾಗವಹಿಸಿದ್ದಾರೆ.

ರಾಯಚೂರಿನಲ್ಲಿ 1000 ಜನರು ಭಾಗವಹಿಸಿದ್ದರು. ಬೀದರ್‌ನಲ್ಲಿ ರಸ್ತೆ ತಡೆ, ಪಂಚಾಯತ್ ಕಛೇರಿಗೆ ಬೀಗ ಹಾಕುವ ಪ್ರಯತ್ನ, ಮೈಸೂರಿನಲ್ಲಿ 1500 ಜನ, ಚಾಮರಾಜನಗರದಲ್ಲಿ, ಬೆಳಗಾಂವ್‌ನಲ್ಲಿ 1500 ಜನ ಉತ್ತರಕನ್ನಡ ಜಿಲ್ಲೆಯಲ್ಲಿ 600 ಕ್ಕೂ ಹೆಚ್ಚು ಜನ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದಾರೆ. ಬಾಗಲಕೋಟೆಯಲ್ಲಿ 700 ಜನರು, ಬಿಜಾಪುರದಲ್ಲಿ ಸುಮಾರು 1800 ಜನರು ಪಾಲ್ಗೊಂಡಿದ್ದಾರೆ. ಬೆಳ್ತಂಗಡಿ, ಬಂಟ್ವಾಳಗಳಲ್ಲಿಯೂ ಪ್ರತಿಭಟನೆಗಳು ನಡೆದಿವೆ.



ಪುಟ 9 ರಿಂದ

ಜನತೆಯ ಹೃದಯಕ್ಕೆ

ಧಾಳಿಗಳನ್ನು ಮಾಡಿದ್ದಾರೆ. ಬೆಂಗಳೂರು ಬೃಹತ್ ಮಹಾನಗರ ಪಾಲಿಕೆಯಲ್ಲಿ .78 ಸಾವಿರ ಕೋಟಿ ರೂಗಳ ಭ್ರಷ್ಟಾಚಾರ, ಉದ್ಯೋಗ ಖಾತರಿ ಯೋಜನೆಗಳ ಭ್ರಷ್ಟಾಚಾರ, ಒಟ್ಟಿನಲಿ ರಾಜ್ಯ ಬಜೆಟ್ ಜನಪ್ರಿಯ ಬಜೆಟ್, ಕೃಷಿ ಬಜೆಟ್‌ನ ರೂಪದಲ್ಲಿ ಭೂದಾಹಿಗಳ, ಖಾಸಗೀ ಕಂಪನಿಗಳ ಪ್ರೋತ್ಸಾಹಿಸುವ ಬಜೆಟ್ ಆಗಿದೆ. ಸಂಘ ಪರಿವಾರದ ಸಂಸ್ಥೆಗಳಿಗೆ ಭೂಮಿ ಹಾಗೂ ಹಣವನ್ನು ವರ್ಗಾಯಿಸುವ ಹುನ್ನಾರವನ್ನು ಹೊಂದಿರುವ, ಭ್ರಷ್ಟಾಚಾರದ ಬಗ್ಗೆ ಸೊಲ್ಲೆತ್ತದ, ಅದನ್ನು ಪ್ರೋತ್ಸಾಹಿಸುವ ಬಜೆಟ್ ಆಗಿದೆ.

ಇವು ದಿನನಿತ್ಯದ ಮಾತಾಗಿದೆ. ಇದರಿಂದಾಗಿ ಬಜೆಟ್‌ನ ಯೋಜನೆಗಳ ಸಣ್ಣ ಪಾಲೂ ಜನರಿಗೆ ಮುಟ್ಟುತ್ತಿಲ್ಲ. ನೀರಾವರಿ ಯೋಜನೆಗಳ ಭ್ರಷ್ಟಾಚಾರದ ಫಲವಾಗಿ ಕಾಲುವೆಗಳ ಕೆಟ್ಟು ತಿಂಗಳು ಗಟ್ಟಲೇ ರೈತರು ಪರದಾಡಿದ್ದಾರೆ. ಹೀಗಿರುವಾಗ ನೀರಾವರಿ ಹಾಗೂ ವಿದ್ಯುತ್‌ಗೆ ಹೆಚ್ಚು ಹಣ ನೀಡಿರುವುದು ಸ್ವಾಗತಾರ್ಹವಾದರೂ ಅದರಲ್ಲಿ ಇನ್ನಿತರ ಯೋಜನೆಗಳಲ್ಲಿ ಭ್ರಷ್ಟಾಚಾರ ನಿಯಂತ್ರಣದ ಬಗ್ಗೆ ಮಾತೇ ಇಲ್ಲ. ಈ ಮೌನವೇ ಬಜೆಟ್‌ನ ನೀತಿಯನ್ನು ಗಟ್ಟಿಯಾಗಿ ಹೇಳುತ್ತಿದೆ. ಇದಲ್ಲದೇ ಬಜೆಟ್‌ನ ಅನೇಕ ಯೋಜನೆಗಳ ಭ್ರಷ್ಟಾಚಾರಕ್ಕೆ ಹೇಳಿ ಮಾಡಿಸಿದಂತಿವೆ. ಇದರಿಂದಾಗಿ ಈ ಬಜೆಟ್‌ನ ಕೆಲ ಯೋಜನೆಗಳ ಪ್ರಯೋಜನವೂ ಜನರಿಗೆ ದಕ್ಕುವುದು ಅನುಮಾನಾಸ್ಪದವಾಗಿದೆ.

ಪತ್ರಿಕಾಗೋಷ್ಠಿಯಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಎನ್.ನಾಗರಾಜ್ ವಿವರಿಸಿದರು, ಎಸ್.ವೈ.ಗುರುಶಾಂತ್ ಹಾಜರಿದ್ದರು.

ಹಲವು ತುಮುಲ-ತಳಮಳಗಳ ನಡುವೆ ದಕ್ಷಿಣ ಆಫ್ರಿಕಾ

ಪುಟ 16ರಿಂದ

ಸಣ್ಣ ತಂಡ ಆರಂಭಿಸಿದರೆ ಸುತ್ತಮುತ್ತ ಇರುವ ಆಫ್ರಿಕನ್ ಪ್ರತಿನಿಧಿಗಳು ತಕ್ಷಣ ಆ ಗುಂಪನ್ನು ಸೇರಿಕೊಳ್ಳುತ್ತಾರೆ. ಗುಂಪು ಬೆಳೆಯತೊಡಗುತ್ತದೆ. ಉತ್ಸವದ ಕೊನೆಯ ದಿನ ಯೂನಿಯನ್ ಬಿಲ್ಡಿಂಗ್ ಮಾರ್ಚ್ ಆರಂಭಕ್ಕೆ ಮುನ್ನ ರ‍್ಯಾಲಿ ಆರಂಭವಾಗುವ ಸ್ಥಳದಲ್ಲಿ ನಾವೆಲ್ಲ ಸೇರಿದ್ದವು. ಇಲ್ಲಿ ದಕ್ಷಿಣ ಆಫ್ರಿಕಾ, ಅಂಗೋಲಾ, ಜಿಂಬಾಬ್ವೆಯಂತೆ ಆಫ್ರಿಕನ್ ರಾಷ್ಟ್ರಗಳ ಪ್ರತಿನಿಧಿಗಳ ಉತ್ಸಾಹ ಮೇರೆ ಮೀರಿತ್ತು. ಎಂದಿನಂತೆ ಪ್ರತಿಭಟನೆಯ ಕ್ರಾಂತಿಕಾರಿ ಹಾಡುಗಳು ಆರಂಭವಾಯಿತು. ರಸ್ತೆಯ ಒಂದು ತುದಿಯಿಂದ ಆರಂಭವಾಗುವ ಇವರ ಹಾಡು-ಕುಣಿತದೊಂದಿಗೆ ಇನ್ನೊಂದು ತುದಿಯ ವರೆಗೆ ಸಾಗುತ್ತದೆ. ಅಲ್ಲಿಂದ ಮತ್ತೆ ಆರಂಭಿಕ ತುದಿಗೆ ಬರುತ್ತದೆ. ಹಾಡು ಆರಂಭವಾಗುವಾಗ ಸಣ್ಣ ಗುಂಪಿನೊಂದಿಗೆ ಶುರುವಾದದ್ದು ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳು ಎಂಬ ಕವಿತೆಯ ಸಾಲುಗಳಂತೆ ಬೆಳೆಯುತ್ತಾ ಹೋಗುತ್ತಿತ್ತು. ಆರಂಭದಲ್ಲಿ ಕರಿಯ ಪ್ರತಿನಿಧಿಗಳು ಮಾತ್ರ ಸೇರುತ್ತಿದ್ದುದು ಅವರ ಸ್ಫೂರ್ತಿಗೆ ಮನಸೋತು ವಿವಿಧ ವರ್ಣದ ವಿವಿಧ ರಾಷ್ಟ್ರದ ಪ್ರತಿನಿಧಿಗಳು ಸೇರಿ ದೊಡ್ಡ ಬೆಟ್ಟದಂತೆ ಗುಂಪು ಬೆಳೆದಿತ್ತು. ಇದು ಇಡೀ ವಿಶ್ವವೇ ಹೋರಾಟದ ದಾರಿಯಲ್ಲಿದೆ ಎಂಬಂತೆ ತೋರುತ್ತಿದ್ದರೂ ಆಫ್ರಿಕದಲ್ಲಿ ಬದಲಾವಣೆಗಳು ಆಗುತ್ತದೆ, ಹೋರಾಟ ಬೆಳೆಯುತ್ತದೆ, ಸಮಾಜವಾದ ಅರಳುತ್ತದೆ ಎಂಬ ನಿರೀಕ್ಷೆಯನ್ನು ಮೂಡಿಸುತ್ತಿತ್ತು. ಆಫ್ರಿಕಾದ ಈ ಕಪ್ಪು ಸಂಗಾತಿಗಳ ಹೋರಾಟದ ಹಾಡುಗಳು, ಕುಣಿತಗಳು, ಅದರ ಸ್ಫೂರ್ತಿಯೊಂದಿಗೆ ಎಲ್ಲ ಆಫ್ರಿಕನ್ ಯುವಜನರಲ್ಲಿ ಇಲ್ಲಿನ ಹಾಡಿನ ತಂಡ ಬೆಳೆದಂತೆ ವ್ಯಾಪಿಸಲಿ ಎಂಬ ಹಾರೈಕೆ ನಮ್ಮದಾಗಿತ್ತು.


ಸಾಮ್ರಾಜ್ಯ ವಿರೋಧಿ ನ್ಯಾಯಾಲಯ

ವಿದ್ಯಾರ್ಥಿ ಯುವಜನರ ಉತ್ಸವದಲ್ಲಿ ಅಣಕು ಅಂತಾರಾಷ್ಟ್ರೀಯ ನ್ಯಾಯಾಲಯವನ್ನು ಆಯೋಜಿಸಲಾಗಿತ್ತು. ಸಾಮ್ರಾಜ್ಯಶಾಹಿ ದಾಳಿಗಳಿಗೆ ಒಳಗಾಗಿರುವ ಪಶ್ಚಿಮ ಸಹಾರಾ, ಪ್ಯಾಲೆಸ್ತೀನ್, ಕ್ಯೂಬಾ, ಭಾರತ, ಲ್ಯಾಟಿನ್ ಅಮೆರಿಕಾದ ದೇಶಗಳೂ ಸೇರಿದಂತೆ ಹೆಚ್ಚಿನ ದೇಶಗಳು ತಮ್ಮ ದೇಶಗಳಿಗೆ ಅಮೆರಿಕ ನೇತೃತ್ವದ ಸಾಮ್ರಾಜ್ಯಶಾಹಿಗಳಿಂದ ಆಗಿರುವ ಹಾನಿಯ ಕುರಿತು ಮನಮುಟ್ಟುವಂತೆ ಅಣಕು ನ್ಯಾಯಾಲಯದ ಎದುರು ಸಾಕ್ಷ್ಯ ನೀಡುತ್ತಿದ್ದರು. ದಕ್ಷಿಣ ಆಫ್ರಿಕಾದ ಪರವಾಗಿ ಸಾಕ್ಷಿ ನುಡಿಯಲು ದಕ್ಷಿಣ ಆಫ್ರಿಕಾ ಸರ್ಕಾರದ ಸಚಿವರೊಬ್ಬರು ಆಗಮಿಸಿದ್ದರು. ಇದು ಅಣಕು ನ್ಯಾಯಾಲಯಕ್ಕೆ ವಿಶಿಷ್ಟ ಮೆರುಗನ್ನು ನೀಡಿತ್ತು. ವಿಚಾರಣೆಯ ನಂತರ ನ್ಯಾಯಾಧೀಶರು ತೀರ್ಪು ನೀಡುವಾಗ ಒಂದೊಂದು ದೇಶದಲ್ಲಿ ಸಾಮ್ರಾಜ್ಯಶಾಹಿ ಮತ್ತು ಅದರ ಬಾಲಬಡುಕ ಆಡಳಿತಗಾರರಿಂದ ಆಗಿರುವ ಅನ್ಯಾಯಗಳನ್ನು ಮನಮುಟ್ಟುವಂತೆ ಎತ್ತಿತೋರಿಸುತ್ತಿದ್ದರು. ದಕ್ಷಿಣ ಆಫ್ರಿಕಾದ ಸರದಿ ಬಂದಾಗ ದಕ್ಷಿಣ ಆಫ್ರಿಕಾದ ಸರ್ಕಾರ ಉತ್ಸವದ ಆತಿಥೇಯತೆಯನ್ನು ವಹಿಸಿಕೊಂಡಿದ್ದರೂ ಅಂತಾರಾಷ್ಟ್ರೀಯ ನ್ಯಾಯಾಲಯ ದಕ್ಷಿಣ ಆಫ್ರಿಕಾ ಸರ್ಕಾರವನ್ನು ಪರೋಕ್ಷವಾಗಿ ತರಾಟೆಗೆ ತೆಗೆದುಕೊಂಡಿತು. ನವ ಉದಾರವಾದಿ ನೀತಿಗಳನ್ನು ದಕ್ಷಿಣ ಆಫ್ರಿಕಾ ಸರ್ಕಾರ ಅನುಸರಿಸುತ್ತಿರುವುದರಿಂದ ಹೆಚ್ಚುತ್ತಿರುವ ನಿರುದ್ಯೋಗ, ಬಡತನ ಮತ್ತು ಶಿಕ್ಷಣ ನೀತಿಗಳ ಬಗ್ಗೆ ಆಫ್ರಿಕಾ ಸರ್ಕಾರವನ್ನು ಪ್ರಶ್ನಿಸಿ ಅವುಗಳನ್ನು ಸರಿಪಡಿಸಬೇಕೆಂದು ಸೂಚಿಸಿತು. ಇದು ದಕ್ಷಿಣ ಆಫ್ರಿಕಾದ ಎಎನ್‌ಸಿ ಸರ್ಕಾರದ ನವ ಉದಾರವಾದಿ ನೀತಿಗಳನ್ನು ಉತ್ಸವದಲ್ಲಿ ಅನಾವರಣಗೊಳಿಸಿದಂತಿತ್ತು.

ಅವರ 'ಕೈಬಿಸಿ'ಯಾಯಿತು

ಉತ್ಸವದ ಆರಂಭದ ದಿನ ಉದ್ಘಾಟನಾ ಕಾರ್ಯಕ್ರಮ ನಡೆಯುವ ಮೈದಾನಕ್ಕೆ ತೆರಳಲು ನಾವೆಲ್ಲ ಉತ್ಸುಕತೆಯಿಂದ ಬೆಳಿಗ್ಗೆ 8 ಗಂಟೆಗೆ ನಮ್ಮ ವಸತಿಯ ತಾಣವಾದ ಮುಜಿಂದಾ ರೆಸಿಡೆನ್ಸಿಯ ಮುಂಭಾಗ ಸೇರಿದ್ದೆವು. ಆದರೆ, ಆಯೋಜಕರ ಗೊಂದಲದಿಂದಾಗಿ ನಮ್ಮನ್ನು ಕರೆದೊಯ್ಯಬೇಕಾದ ವಾಹನ ಬಂದಿರಲಿಲ್ಲ. ನಮ್ಮ ವಸತಿ ಪ್ರದೇಶದ ಬಂದೋಬಸ್ತ್‌ನಲ್ಲಿದ್ದ ಪೊಲೀಸರ ಸೂಚನೆ ಮತ್ತು ಸಹಾಯದಿಂದ ಟೂರಿಸ್ಟ್ ವಾಹನದಲ್ಲಿ ಪ್ರತಿಯೊಬ್ಬರಿಗೂ 10 ಆಫ್ರಿಕನ್ ರ‍್ಯಾಂಡ್‌ನಂತೆ ಪಾವತಿಸಿ ಉದ್ಘಾಟನಾ ಕಾರ್ಯಕ್ರಮಕ್ಕೆ ಹೊರಟೆವು. 10 ಜನ ಕೂರುವ ವಾಹನದಲ್ಲಿ 12 ಜನ ಕೂತಿದ್ದೆವು. ಅದರಲ್ಲಿ ಇಬ್ಬರು ಪಾಸ್‌ಪೋರ್ಟ್‌ನ್ನು ಬಿಟ್ಟುಬಂದಿದ್ದರು. ವಾಹನ ಹೊರಟ ಐದೇ ನಿಮಿಷದಲ್ಲಿ ಸಂಚಾರಿ ಪೊಲೀಸರು ನಮ್ಮ ವಾಹನವನ್ನು ಅಡ್ಡಗಟ್ಟಿದರು. ಪ್ರತಿಯೊಬ್ಬರ ಪಾಸ್‌ಪೋರ್ಟ್ ತಪಾಸಣೆ ಮಾಡಿ ಇಬ್ಬರಿಗೆ ತಕ್ಷಣ ಪಾಸ್‌ಪೋರ್ಟ್ ಹಾಜರುಪಡಿಸುವಂತೆ ಆದೇಶಿಸಿದರು. ಮತ್ತು ಹೆಚ್ಚುವರಿ ಪ್ರಯಾಣಿಕರನ್ನು ಹಾಕಿದ್ದಕ್ಕೆ ಡ್ರೈವರ್‌ಗೆ ಕಾನೂನು ಕ್ರಮ ಕೈಗೊಳ್ಳುವ ಎಚ್ಚರಿಕೆ ನೀಡಿದರು. ನಾವು ಅರ್ಧ ದಾರಿಯಲ್ಲಿ ಸಿಕ್ಕಿ ಹಾಕಿಕೊಂಡಿದ್ದಕ್ಕೆ ತಲೆಬಿಸಿ ಮಾಡಿಕೊಂಡಿದ್ದರೆ ಡ್ರೈವರ್‌ನೊಂದಿಗೆ ಮಾತನಾಡುತ್ತಾ ಪೊಲೀಸರು ಸ್ವಲ್ಪ ದೂರ ಹೋದರು. ಎರಡೇ ನಿಮಿಷದಲ್ಲಿ ವಾಪಸ್ ಆದ ಡ್ರೈವರ್ ಏನೋ ಗೊಣಗುತ್ತಾ ವಾಹನ ಚಲಾಯಿಸತೊಡಗಿದ. ಡ್ರೈವರ್‌ನಲ್ಲಿ ಸಮಸ್ಯೆ ಬಗೆಹರಿದದ್ದು ಹೇಗೆ ಎಂದು ವಿಚಾರಿಸಿದರೆ, 100 ರ‍್ಯಾಂಡ್ ಲಂಚ ಕೊಟ್ಟೆ ಎಂದು ಹೇಳಿದ. ಇದು ತಕ್ಷಣಕ್ಕೆ ನಮಗೆ ನಮ್ಮೂರಿನ ಪೊಲೀಸರನ್ನು ನೆನಪಿಸಿತು. ಮುಂದೆ ದಕ್ಷಿಣ ಆಫ್ರಿಕಾದ ಪರಿಸ್ಥಿತಿಯನ್ನು ಅರ್ಥೈಸಿಕೊಳ್ಳಲು ಯತ್ನಿಸಿದಾಗ ಆಫ್ರಿಕಾದಲ್ಲಿ ಭ್ರಷ್ಟಾಚಾರ ಎನ್ನುವುದು ಪೊಲೀಸ್ ಪೇದೆಗಳಿಂದ ಹಿಡಿದು ಆಡಳಿತದ ಎಲ್ಲಾ ವಿಭಾಗಗಳಲ್ಲೂ ವ್ಯಾಪಕವಾಗಿ ಹಬ್ಬಿ ಆಫ್ರಿಕನ್ ಜನತೆಯ ಸಂಕಷ್ಟಗಳನ್ನು ತೀವ್ರ ರೀತಿಯಲ್ಲಿ ಹೆಚ್ಚಿಸಿದೆ ಎನ್ನುವುದು ಸ್ಪಷ್ಟವಾಗಿ ಗೋಚರಿಸುತ್ತಿತ್ತು.

ದಕ್ಷಿಣ ಆಫ್ರಿಕಾದಲ್ಲಿ ಮೇಲ್ನೋಟಕ್ಕೆ ಎಲ್ಲವೂ ಸಮೃದ್ಧವಾಗಿದೆ, ಅಭಿವೃದ್ಧಿಯ ತುತ್ತತುದಿಯನ್ನು ಏರುತ್ತಿದೆ ಎನ್ನುವ ಭಾವನೆಯನ್ನು ಸೃಷ್ಟಿಸುತ್ತದೆ. ಆಳಕ್ಕೆ ಇಳಿದಂತೆ, ಬೀದಿಗಳಲ್ಲಿ ತಿರುಗಾಡಿದಂತೆ, ಅಲ್ಲಿನ ಕಪ್ಪುಜನರಲ್ಲಿ ಮಾತನಾಡತೊಡಗಿದಾಗ, ಒಳಗಣ್ಣು ತೆರೆದು ನೋಡಿದಾಗ ನಿಜವಾದ ದಕ್ಷಿಣ ಆಫ್ರಿಕಾ ಅರ್ಥವಾಗತೊಡಗುತ್ತದೆ. ನವ ಉದಾರವಾದಿ ನೀತಿಗಳು ಅದರೊಂದಿಗೆ ಮಿಶ್ರಣಗೊಂಡಿರುವ ಚರ್ಮದ ಬಣ್ಣದ ಜನಾಂಗೀಯ ಅಹಂಕಾರಗಳು ಒಟ್ಟು ಸೇರಿ ಉಂಟು ಮಾಡಿರುವ ನರಕ ದಿಗ್ಭ್ರಮೆಗೊಳಿಸುತ್ತದೆ. ನವ ಉದಾರವಾದಿ ನೀತಿಗಳ ಮುಖಾಂತರ ಅಮೆರಿಕನ್ ಸಾಮ್ರಾಜ್ಯಶಾಹಿ ನೇತೃತ್ವದಲ್ಲಿ ದಕ್ಷಿಣ ಆಫ್ರಿಕಾದಲ್ಲಿ ಆಗುತ್ತಿರುವ ಲೂಟಿಗಳು ಒಂದೆಡೆ ಸುಂದರ ಶ್ರೀಮಂತ ದಕ್ಷಿಣ ಆಫ್ರಿಕಾವನ್ನು ಕಟ್ಟಿ ನಿಲ್ಲಿಸಿದರೆ, ಇನ್ನೊಂದೆಡೆ ಬಹುಸಂಖ್ಯಾತ ಕರಿಯರನ್ನು ಹಸಿವಿನಲ್ಲಿ ಕೆಡವಿದೆ. ಮುಗ್ಧ, ಸೌಮ್ಯ, ಸ್ನೇಹಜೀವಿ ಕರಿಯರನ್ನು ಕ್ರಿಮಿನಲ್‌ಗಳನ್ನಾಗಿಸಿ ಎಲ್ಲರ ಕಣ್ಣಲ್ಲಿ ಖಳರನ್ನಾಗಿಸಿದೆ. ವಿಮೋಚನೆಯ ಹೋರಾಟವನ್ನು ಹತ್ತಾರು ವರ್ಷಗಳ ಕಾಲ ಎಲ್ಲ ದಬ್ಬಾಳಿಕೆಗಳನ್ನು ಎದುರಿಸಿಯೂ ನಡೆಸಿಕೊಂಡು ಬಂದ ಕರಿಯನ್ನು ಹೋರಾಟಕ್ಕೆ ಇಳಿಯದಂತೆ ಮಾಡಿದೆ. ಆಧುನೀಕತೆಯ ಪಾಶ್ಚಾತ್ಯ ಮಾಯಾಜಾಲದಲ್ಲಿ ಸಿಲುಕಿಸಿ ಎಲ್ಲವೂ ಸರಿಯಾಗಿದೆ ಎಂಬ ಭ್ರಮೆಯಲ್ಲಿ ಕೆಡವಿದೆ. ಆಫ್ರಿಕನ್ ಬುಡಕಟ್ಟು ಸಂಸ್ಕೃತಿಯನ್ನು ನಾಶಗೊಳಿಸಿ ಡಿಜೆ ಸಂಗೀತದ ಅಬ್ಬರದಲ್ಲಿ ಕುಣಿಸಿ, ಕುಡಿಸಿ, ಮುಳುಗಿಸಿ ತೇಲಿಸುತ್ತಿದೆ. ದಕ್ಷಿಣ ಆಫ್ರಿಕಾದ ಜನತೆಗೆ ಖಂಡಿತವಾಗಿಯೂ ಸಾಮ್ರಾಜ್ಯಶಾಹಿ ಶೋಷಣೆಗಳಿಂದ ಹೊರಬರುವ ಶಕ್ತಿ ಇದೆ. ವರ್ಣಭೇದ ನೀತಿಗಳ ವಿರುದ್ಧದ ಹೋರಾಟದ ಪರಂಪರೆಯನ್ನು, ಕರಿಯರ ಜನಸಂಸ್ಕೃತಿಯನ್ನು, ಸಾಮ್ರಾಜ್ಯಶಾಹಿ ನಗ್ನ ಶೋಷಣೆಗಳನ್ನು ಅಲ್ಲಿಯ ಯುವಜನತೆಗೆ ಪರಿಚಯಿಸುವ, ನೆನಪಿಸುವ ಕೆಲಸವನ್ನು ಅಲ್ಲಿನ ಜನಚಳವಳಿ ಮಾಡಬೇಕಿದೆ. ಮತ್ತೆ ಕರಿಯರು ತಮ್ಮ ಹೋರಾಟದ ಪರಂಪರೆಗೆ ಮರಳಬೇಕಿದೆ. ಘಾನಾ, ಕೀನ್ಯಾ, ಅಂಗೋಲಾ ಹೀಗೆ ಸಾಲು ಸಾಲು ಆಫ್ರಿಕನ್ ರಾಷ್ಟ್ರಗಳಲ್ಲಿ ಸಾಮ್ರಾಜ್ಯಶಾಹಿ ಶೋಷಣೆಗಳು ಇನ್ನಷ್ಟು ತೀವ್ರವಾಗಿವೆ. ಬಹುಷಃ ಅಮೆರಿಕ ಯುದ್ಧವಿಲ್ಲದೆ ಸುಣ್ಣಗೆ ಬೋಳಿಸುತ್ತಿರುವ, ತನ್ನ ಬೇಳೆ ಬೇಯಿಸಿ ನವ ಉದಾರವಾದಿ ನೀತಿಗಳನ್ನು ಶೋಷಣೆಗಳನ್ನು ಸದ್ದುಗದ್ದಲವಿಲ್ಲದೆ ಜಾರಿಗೊಳಿಸುತ್ತಿರುವುದು ಆಫ್ರಿಕನ್ ದೇಶಗಳಲ್ಲಿ. ಇಂತಹ ಆಫ್ರಿಕನ್ ದೇಶಗಳಲ್ಲಿ ವಿಮೋಚನೆಯ ಗಾಳಿ ಬೀಸಬೇಕಿದ್ದರೆ ಅದು ದಕ್ಷಿಣ ಆಫ್ರಿಕಾದಿಂದಲೇ ಆರಂಭವಾಗಬೇಕಿದೆ. ಲ್ಯಾಟಿನ್ ಅಮೆರಿಕಾದಲ್ಲಿ ಶುರುವಾಗಿರುವ ಬಂಡಾಯ, ಬದಲಾವಣೆಗಳು ಆಫ್ರಿಕನ್ ದೇಶಗಳಲ್ಲಿ ಆರಂಭವಾದರೆ ದೊಡ್ಡಣ್ಣನಿಗೆ ಹಿನ್ನಡೆ ಖಚಿತ. ಅದು ವಿಮೋಚನೆಯ ಹೋರಾಟಕ್ಕೆ ಜಗತ್ತಿನಲ್ಲಿ ಬಲ ತುಂಬುತ್ತದೆ. ಹತ್ತಿರದಲ್ಲೇ ಇರುವ ಅರಬ್ ರಾಷ್ಟ್ರಗಳಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಆಫ್ರಿಕನ್ ರಾಷ್ಟ್ರಗಳು ಗಮನಿಸಬೇಕಾಗಿದೆ. ಆಗ ಮಾತ್ರ ಹಸಿವಿನ ಸಾಮ್ರಾಜ್ಯ ಕೊನೆಗೊಳ್ಳಲು, ಮೆಕ್ಯಾನಿಕಲ್ ಎಂಜಿನಿಯರಿಂಗ್ ಓದಿರುವ ಆಫ್ರಿಕನ್ ಯುವಜನತೆ ಡ್ರೈವರ್ ಕೆಲಸದ ಬದಲಿಗೆ ಎಂಜಿನಿಯರ್ ಕೆಲಸ ಪಡೆಯಲು ಸಾಧ್ಯ. ಮಾಲ್‌ಗಳಲ್ಲಿ, ಕ್ರಿಕೆಟ್ ಟೀಮ್‌ಗಳಲ್ಲಿ, ಆಫ್ರಿಕಾದಲ್ಲಿ ನಡೆಯುವ ಅಂತಾರಾಷ್ಟ್ರೀಯ ಪಂದ್ಯಾಟಗಳ ಪ್ರೇಕ್ಷಕ ಗಡಣದಲ್ಲಿ ಕರಿಯ ಯುವಜನತೆ ಕಾಣಿಸಿಕೊಳ್ಳಲು ಸಾಧ್ಯ. ತಮ್ಮ ಬುಡಕಟ್ಟು ಸಂಗೀತ-ವಾದ್ಯಗಳನ್ನು ಬಿಳಿಯರು, ವಿದೇಶಿಯರು ಓಡಾಡುವ ರಸ್ತೆಬದಿಯಲ್ಲಿ ನುಡಿಸಿ ಭಿಕ್ಷೆ ಬೇಡಿ ಹೊಟ್ಟೆ ತುಂಬಿಸಿಕೊಳ್ಳುವ ದಯನೀಯ ಪರಿಸ್ಥಿತಿಯಿಂದ ವಿದ್ಯಾವಂತ ಆಫ್ರಿಕನ್ ಜನತೆ ಹೊರಬರಲು ಸಾಧ್ಯ. ಕಪ್ಪು ಸುಂದರಿಯರು ಹಾಗೂ ಕಪ್ಪು ಸುಂದರರ ಮುಖದಲ್ಲಿ ಲಾಸ್ಯವಾಡುವ ತಿಳಿನಗು ಶಾಶ್ವತವಾಗಲು ಸಾಧ್ಯ. ಹಾಗೆಯೇ ಆಗಲಿ ಎಂಬ



ವರ್ಣಭೇದ ನೀತಿಯ ವಿರುದ್ಧದ ಚಳವಳಿಯಲ್ಲಿ ಮೂಡಿಬಂದು ಈಗ ಸಾಮ್ರಾಜ್ಯಶಾಹಿಯ ಬಾಲಬಡುಕರಾಗಿರುವ ಭ್ರಷ್ಟ ನಾಯಕರ ಕಪಿಮುಷ್ಠಿಯಿಂದ ಅಲ್ಲಿನ ಜನತೆಯನ್ನು ಹೊರತರುವ ಕೆಲಸವೂ, ಹೊಸ ಚಳವಳಿಯನ್ನು ಕಟ್ಟುವ ಕೆಲಸವೂ ವೇಗವಾಗಿ ನಡೆಯಬೇಕಿದೆ ಅನಿಸುತ್ತದೆ. ಅದರೊಂದಿಗೆ ದಕ್ಷಿಣ ಆಫ್ರಿಕಾದ ಜನಚಳವಳಿಗೆ ವಿಶೇಷ ಜವಾಬ್ದಾರಿ ಇದೆ. ದಕ್ಷಿಣ ಆಫ್ರಿಕಾದ ಸುತ್ತಮುತ್ತ ಇರುವ ಜಿಂಬಾಬ್ವೆ, ಇಥಿಯೋಪಿಯಾ, ನಿರೀಕ್ಷೆಯ ಮೂಟೆಯನ್ನು ಹೊತ್ತುಕೊಂಡು ಹೋರಾಟನಿರತ ಆಫ್ರಿಕನ್ ಕಪ್ಪು ಪ್ರತಿನಿಧಿ ಸಂಗಾತಿಗಳಿಗೆ ನಿಮ್ಮ ಉದ್ದೇಶ ಈಡೇರಲಿ, ಹೋರಾಟ ಗುರಿಮುಟ್ಟಲಿ ಎಂದು ಶುಭ ಹಾರೈಸಿ ಸಾಮ್ರಾಜ್ಯಶಾಹಿಯನ್ನು ಸೋಲಿಸೋಣ ಬನ್ನಿ ಎಂಬ ಘೋಷಣೆಯ ಅಡಿಯಲ್ಲಿ ನಡೆದ ವಿಶ್ವ ವಿದ್ಯಾರ್ಥಿ ಯುವಜನ ಉತ್ಸವದ ಸಮಾರೋಪವನ್ನು ಮುಗಿಸಿ ದಕ್ಷಿಣ ಆಫ್ರಿಕಾಕ್ಕೆ ವಿದಾಯ ಹೇಳಿದೆವು. ○

JANASHAKTHI KANNADA VARA PATRIKE · MARCH 06, 2011 Price : Rs. 5/- RNI No. KARKAN /2006/17926 · Posted on every Satuarday Postal Reg. No. RNP/KA/BGS/2078/2009-12
Posted at MBC Bangalore GPO

ಹಲವು ತುಮುಲ-ತಳಮಳಗಳ ನಡುವೆ ದಕ್ಷಿಣ ಆಫ್ರಿಕಾ

17th World Festival of Youth & Students

ಭಾಗ-2

ಎಲ್ಲವೂ ಇದೆ.... ಆದರೆ

ದಕ್ಷಿಣ ಆಫ್ರಿಕಾ ದೇಶದಲ್ಲಿ ಎಲ್ಲವೂ ಇದೆ. ವೈವಿಧ್ಯಮಯ ಖನಿಜ ಸಂಪತ್ತು, ಪ್ರವಾಸಿ ತಾಣಗಳು, ಚಿನ್ನ, ವಜ್ರ, ವೈಡೂರ್ಯ ಇಲ್ಲಿಯ ಮಣ್ಣಿನಲ್ಲಿದೆ. ನೈಸರ್ಗಿಕ ಸಂಪತ್ತು ಆಫ್ರಿಕಾವನ್ನು ಆರ್ಥಿಕವಾಗಿ ಬಲಿಷ್ಟಗೊಳಿಸಿವೆ. ದಕ್ಷಿಣ ಆಫ್ರಿಕಾದ ಕರೆನ್ಸಿಯಾದ ರ್‍ಯಾಂಡ್ ಒಂದಕ್ಕೆ ಹತ್ತಿರ ಹತ್ತಿರ ಏಳು ರೂಪಾಯಿ ಬೆಲೆ ಬಾಳುತ್ತದೆ. ಉತ್ತಮ ಮೂಲಭೂತ ಸೌಕರ್ಯ, ವಿಮಾನ ನಿಲ್ದಾಣಗಳು, ಬಂದರುಗಳು, ರೈಲು, ರಸ್ತೆ ಮಾರ್ಗಗಳು ಬಂಡವಾಳ ಹೂಡಿಕೆದಾರರನ್ನು ಕೈಬೀಸಿ ಕರೆಯುತ್ತದೆ. ಜಾಗತೀಕರಣವನ್ನು ಅದರೊಂದಿಗೆ ಬಹುರಾಷ್ಟ್ರೀಯ ಕಂಪೆನಿಗಳನ್ನು ವರ್ಣಭೇದ ನೀತಿ ಕೊನೆಗೊಳ್ಳುವುದಕ್ಕೆ ಮೊದಲೇ ಒಪ್ಪಿಕೊಂಡಾಗಿದೆ. ಜನತೆಯೇ ಚುನಾಯಿಸುತ್ತಿರುವ ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದೆ. ಆದರೆ, ಜಾಗತೀಕರಣ, ಖಾಸಗೀಕರಣ, ನವ ಉದಾರೀಕರಣದ ನೀತಿಗಳು 'ಶ್ರೀಮಂತ' ದಕ್ಷಿಣ ಆಫ್ರಿಕಾವನ್ನು ಸೃಷ್ಟಿಸಿದೆ. ಅದರೊಂದಿಗೆ ಕ್ರಿಮಿನಲ್‌ಗಳನ್ನೂ ಉತ್ಪಾದಿಸುತ್ತಿದೆ. ಅದರಿಂದಾಗಿ ಜೋಹಾನ್ಸ್‌ಬರ್ಗ್ ಮಹಾನಗರ ಸಾಯಂಕಾಲ ಆಗುತ್ತಲೇ ಕಡ್ಡಾಯವಾಗಿ ಬರಿದಾಗುತ್ತದೆ. ಇಲ್ಲಿ ಎಲ್ಲವನ್ನೂ ಖಾಸಗಿಯವರಿಗೆ ಬಿಟ್ಟುಕೊಡಲಾಗಿದೆ. ಇಲ್ಲಿನ ಗಣಿಗಳನ್ನು ಬಹುರಾಷ್ಟ್ರೀಯ ಕಂಪೆನಿಗಳು ನಿತ್ಯ ದೋಚುತ್ತವೆ. ಇಲ್ಲಿನ ಬೀದಿಗಳಲ್ಲಿ ಸಣ್ಣಪುಟ್ಟ ಅಂಗಡಿಗಳಿರುವ ಕಟ್ಟಡಗಳು ಮಾಯವಾಗಿವೆ. ಎಲ್ಲವೂ ಬೃಹತ್ ಮಾಲ್‌ಗಳು. ಚಿಲ್ಲರೆ ಮಾರುಕಟ್ಟೆಯಲ್ಲಿ ದಿನಸಿಯಿಂದ ಹಿಡಿದು ಮೀನು ಮಾಂಸದಿಂದ ಟಿವಿ ಫ್ರಿಡ್ಜ್‌ವರೆಗೆ ವಾಲ್‌ಮಾರ್ಟ್‌ನಂಥ ದೈತ್ಯ ಬಹುರಾಷ್ಟ್ರೀಯ ಕಂಪೆನಿಗಳು ಮಾರಾಟ ಮಾಡುತ್ತಿವೆ. ಸ್ಥಳೀಯ ಅಂಗಡಿಗಳು ಬಹುತೇಕ ಬಾಗಿಲು ಮುಚ್ಚಿವೆ. ಹೊಟೇಲ್‌ಗಳೆಂದರೆ ಕೆಎಫ್‌ಸಿ, ಮೆಕ್‌ಡೊನಾಲ್ಡ್‌ಗಳು ಮಾತ್ರ ಎಂಬಲ್ಲಿಗೆ ಬಂದು ಸ್ಥಳೀಯರು ನಡೆಸುವ ಹೊಟೇಲ್‌ಗಳು ಮುಚ್ಚತೊಡಗಿವೆ. ಪಿಜ್ಜಾ, ಬರ್ಗರ್ ಸಂಸ್ಕೃತಿಗೆ ಮಾರು ಹೋಗಿರುವ ಯುವಜನರನ್ನು ದಾರಿತಪ್ಪಿಸಲು ಡಿಸ್ಕೋ ಥೆಕ್‌ಗಳು ಕೊಡುಗೆ ನೀಡುತ್ತಿವೆ. ಆಧುನಿಕತೆಯ ಸಂಕೇತ ಎಂಬಂತೆ ಪಾಶ್ಚಿಮಾತ್ಯ ಅಬ್ಬರದ ಮ್ಯೂಸಿಕ್‌ಗಳು ಯುವಜನರನ್ನು ಕುಣಿಸುತ್ತಿವೆ. ಸ್ಥಳೀಯ ಸಂಸ್ಕೃತಿಯನ್ನು ನಾಶಗೊಳಿಸುತ್ತಿವೆ. ವ್ಯಾಪಾರ, ಶಿಕ್ಷಣ, ಕೈಗಾರಿಕೆ, ಖನಿಜ ಸಂಪತ್ತು ಎಲ್ಲವನ್ನೂ ಬಹುರಾಷ್ಟ್ರೀಯ ಖಾಸಗಿಯವರಿಗೆ ಬಿಟ್ಟುಕೊಟ್ಟ ಫಲವನ್ನು ದಕ್ಷಿಣ ಆಫ್ರಿಕಾ ಉಣ್ಣುತ್ತಿದೆ. ಜಾಗತೀಕರಣ, ಖಾಸಗೀಕರಣ, ಬಹುರಾಷ್ಟ್ರೀಯ ಕಂಪೆನಿಗಳ ಕೊಡುಗೆ ಎಂಬಂತೆ ತಮ್ಮದೆಲ್ಲವನ್ನೂ ಕಳೆದುಕೊಂಡು ಇಲ್ಲಿನ ಕಪ್ಪು ಜನ ಬೀದಿಗೆ ಬೀಳುತ್ತಿದ್ದಾರೆ. ನಿರುದ್ಯೋಗ ತಾಂಡವವಾಡುತ್ತಿದೆ. ಬೆಲೆಗಳು ಗಗನದಲ್ಲಿದೆ. ಒಂದೆಡೆ ಅತಿ ಶ್ರೀಮಂತಿಕೆಯಿಂದ ಮೆರೆಯುವ ಜಾಗತೀಕರಣದ ಫಲಾನುಭವಿಗಳಾದ ಬಿಳಿಯರು, ಇತ್ತೀಚಿನ ಅಸಮಾನ ಅಭಿವೃದ್ಧಿಯ ಫಲವನ್ನು ಪಡೆದಿರುವ ಕರಿಯ ಮಧ್ಯಮ ವರ್ಗದ ಸಣ್ಣ ವಿಭಾಗ. ಅದು ಬಿಟ್ಟರೆ ಹಸಿವನ್ನೇ ಉಣ್ಣುತ್ತಿರುವ ಕರಿಯ ಬಹುಸಂಖ್ಯಾತ ಜನ. ಅವರನ್ನು ದಾರಿತಪ್ಪಿಸುತ್ತಿರುವ ಆಧುನಿಕತೆಯ ಲೇಪನದ ಪಾಶ್ಚಿಮಾತ್ಯ ಭೋಗ ಸಂಸ್ಕೃತಿ. ಇದು ಹಸಿವಿನ ಸಾಮ್ರಾಜ್ಯವನ್ನು, ಕ್ರಿಮಿನಲ್‌ಗಳನ್ನಲ್ಲದೆ ಇನ್ನೇನನ್ನು ತಾನೆ ಸೃಷ್ಟಿಸೀತು? ಇಂತಹ ನಗ್ನ ಶೋಷಣೆಯಿಂದ ಹಸಿವನ್ನು ಬೆನ್ನಿಗೇ ಕಟ್ಟಿಕೊಂಡಿರುವ ಇಲ್ಲಿನ ಯುವಜನತೆ ತುಂಡು ಬ್ರೆಡ್ಡಿಗಾಗಿಯೂ ಸುಲಿಗೆಗೈಯುತಾರೆ. ದುಡಿಗಾಗಿ ನಡು ಬೀದಿಯಲ್ಲಿ



ಮುಕ್ತಿಯನ್ನು ಪ್ರಬಲ ಹೋರಾಟದ ಮೂಲಕ ಪಡೆದುಕೊಂಡಿದ್ದಾರೆ. ನೂರಾರು ವರ್ಷಗಳಿಂದ ತಾವು ಬಿಳಿಯರಿಂದ ಅನುಭವಿಸಿದ ಅಮಾನವೀಯ ಶೋಷಣೆಯಿಂದ ಪಡೆದ ಸ್ವಾತಂತ್ರ್ಯದ ಸವಿಯನ್ನು ಅನುಕ್ಷಣವೂ ಅನುಭವಿಸಬೇಕು ಎಂಬ



ಮಂಡೇಲಾ ಮನೆಯಲ್ಲಿ ಲೇಖಕ
ಮುನೀರ್ ಕಾಟಿಪಳ್ಳ

ಮಾನಸಿಕತೆಗೆ ತಲುಪಿದ್ದಾರೋ ಎಂಬಂತೆ ಯಾವಾಗಲೂ ಸಂತೋಷ ವಾಗಿರಲು ಬಯಸುತ್ತಾರೆ. ಹಾಡು ಹಾಡುತ್ತಾರೆ, ಹಾಡುಗಳು ಕಿವಿಗೆ ಬಿದ್ದ ತಕ್ಷಣ ನಿಂತಲ್ಲೇ ಕುಣಿಯುತ್ತಾರೆ, ಕುಣಿಯುತ್ತಲೇ ಮುಂದಕ್ಕೆ ನಡೆಯುತ್ತಾರೆ, ಪ್ರತಿಯೊಬ್ಬರಲ್ಲೂ ಸ್ನೇಹವನ್ನು ವ್ಯಕ್ತಪಡಿಸುತ್ತಾರೆ. ಇಂತಹ ಮನೋಭಾವದಲ್ಲಿ ಸಾಮ್ರಾಜ್ಯ ಶಾಹಿ ನೀತಿಗಳು ಹರಿದು ಮುಕ್ಕುತ್ತಿರುವುದನ್ನು, ಹಸಿವು ಬೆನ್ನಿಗೆ ಅಂಟಿಕೊಂಡಿರುವುದನ್ನು, ಆಫ್ರಿಕನ್ ಸಂಸ್ಕೃತಿ ನಾಶವಾಗುತ್ತಿರುವುದನ್ನು ಆಫ್ರಿಕನ್ ಯುವಜನತೆ ಮರೆತಂತೆ, ಸಾಮ್ರಾಜ್ಯಶಾಹಿಯ ಕಪಿಮುಷ್ಟಿಯಿಂದ ವಿಮೋಚನೆ ಹೊಂದಲು ಬೇಕಾದ ತೀವ್ರ ರೀತಿಯ ಕೆಚ್ಚನ್ನು ಕಳೆದುಕೊಂಡಂತೆ ಭಾಸವಾಗುತ್ತದೆ. ಒಮ್ಮೊಮ್ಮೆ ಇದೇ ಕರಿಯ ಜನತೆಯಾ? ಎರಡು ದಶಕಗಳ ಹಿಂದಿನ ವರೆಗೂ ವರ್ಣಭೇದ ನೀತಿಯ ವಿರುದ್ಧ ನಿರ್ಣಾಯಕ ಹೋರಾಟವನ್ನು ಕಟ್ಟಿದ್ದು? ಎಂಬ ಭಾವನೆ ಮೂಡುವಷ್ಟು ನಿಚ್ಚಳವಾಗಿ ನವಉದಾರೀಕರಣದ ನೀತಿಗಳು, ಬಹುರಾಷ್ಟ್ರೀಯ ಕಂಪೆನಿಗಳ ನಗ್ನ ಶೋಷಣೆ ಕಣ್ಣಿಗೆ ರಾಚುತ್ತದೆ. ಕರಿಯ ಯುವಜನತೆಯ ತಾಳ್ಮೆ, ಮುಗ್ಧತೆ ಗಮನಸೆಳೆಯುತ್ತದೆ. 15 ಸಾವಿರಕ್ಕೂ ಹೆಚ್ಚು ಪ್ರತಿನಿಧಿಗಳು ಸೇರಿದ್ದ ವಿದ್ಯಾರ್ಥಿ ಯುವಜನ ಉತ್ಸವದಲ್ಲಿ ಆರಂಭದ ಒಂದೆರಡು ದಿನ ಆಹಾರ ವಿತರಣೆಯಲ್ಲಿ ತೀವ್ರ ರೀತಿಯ ಅವ್ಯವಸ್ಥೆ ಕಾಣಿಸಿಕೊಂಡಿತು. ಒಂದೆರಡು ಸಲ ಗಂಟೆಗಟ್ಟಲೆ ನಿಂತು ಆಹಾರಕ್ಕೆ ಕಾಯುವ ಪರಿಸ್ಥಿತಿ ಉಂಟಾಯಿತು. ಅಂತಹ ಪರಿಸ್ಥಿತಿಯಲ್ಲಿ ನಾವು ನಮ್ಮ ಇಡೀ ತಂಡಕ್ಕೆಂದು ಮುನ್ನುಗ್ಗಿ ಒಟ್ಟಾಗಿ ಆಹಾರದ ಪೊಟ್ಟಣ ಪಡೆದುಕೊಳ್ಳುತ್ತಿದ್ದೆವು, ಸಂಘಟಕರ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸುತ್ತಿದ್ದೆ. ಆದರೆ, ಆಫ್ರಿಕನ್ ಪ್ರತಿನಿಧಿಗಳು ತಾಳ್ಮೆಯಿಂದ ಸರದಿಯಲ್ಲಿ ಗಂಟೆಗಟ್ಟಲೆ ನಿಂತಿರುತ್ತಿದ್ದರು. ನಾವು ಸರದಿ ತಪ್ಪಿಸಿ ಮುಂದಕ್ಕೆ ಹೋದಾಗಲೂ ಮೌನವಾಗಿ ವೀಕ್ಷಿಸುತ್ತಿದ್ದರು. ಒಂದು ಪ್ರತಿಭಟನೆಯನ್ನೂ ಬಹಿರಂಗವಾಗಿ ವ್ಯಕ್ತಪಡಿಸುತ್ತಿರಲಿಲ್ಲ. ಒಂದು ದಿನ ಊಟದ ಜೊತೆಗೆ ನೀರು ವಿತರಿಸದೆ ಬದಲಿಗೆ ಬಹುರಾಷ್ಟ್ರೀಯ ಕಂಪೆನಿಯ ಕೋಲಾ ವಿತರಿಸಿದರು. ಇದನ್ನು ಮಾತ್ರ ಆಫ್ರಿಕನ್ ಪ್ರತಿನಿಧಿಗಳು ಸಹಿಸಲಿಲ್ಲ. ಆದರೆ, ಅವರು ಪ್ರತಿಭಟಿಸಿದ ವಿಧಾನ ಮಾತ್ರ ವಿಶೇಷ.

ಹಾಡು ನೃತ್ಯವೇ ಪ್ರತಿಭಟನೆ

ಸಾಮೂಹಿಕ ಹಾಡುಗಳನ್ನು ಹಾಡುತ್ತಾ, ನೃತ್ಯ ಮಾಡುತ್ತಾ ಕೋಲಾ ಬಾಟಲಿಗಳನ್ನು ಪ್ರದರ್ಶನ ಮಾಡುತ್ತಾ ಒಂದೆಡೆ ರಾಶಿ ಹಾಕಿ ತಮ್ಮ ವಿರೋಧವನ್ನು ವ್ಯಕ್ತಪಡಿಸಿದರು. ಇದು ಸ್ವಲ್ಪ ಮಟ್ಟಿಗೆ ಪರಿಣಾಮ ಬೀರಿ ಕೋಲಾದೊಂದಿಗೆ ನೀರೂ ವಿತರಣೆಯಾಯಿತು. ಹಾಗೆಯೇ ಆಹಾರ ವಿತರಣೆಯ ಗೊಂದಲದಿಂದ ವಿತರಣೆಯ ಜವಾಬ್ದಾರಿ ಹೊತ್ತ ಇಬ್ಬರ ನಡುವೆ ತೀವ್ರ ಮಾತಿನ ಸಮರ ನಡೆಯುತ್ತಿತ್ತು. ಇನ್ನೇನು ಇಬ್ಬರು ಪರಸ್ಪರ ಹೊಡೆದಾಡಿಕೊಳ್ಳುತ್ತಾರೆ ಎಂದು ನಾವು ಅಂದುಕೊಳ್ಳುತ್ತಿರುವಾಗಲೇ ಅಚ್ಚರಿಯೋ ಎಂಬಂತೆ ಅದರಲ್ಲೊಬ್ಬ ಜೋರಾಗಿ ಹಾಡತೊಡಗಿದ. ಇನ್ನೊಬ್ಬನೂ ತಕ್ಷಣವೇ ತಣ್ಣಗಾಗಿ ಹಾಡಿಗೆ ಏನೋ ಪ್ರತಿಕ್ರಿಯಿಸಿ ಹೊರನಡೆದ. ಇದು ಆಫ್ರಿಕನ್ನರ ಪ್ರತಿಭಟನೆಯ ಶೈಲಿ.

ಹಾಡಿಗಳೊಳಗೇ ನೋವಿನ ಎಳೆಗಳು

ಉತ್ಸವದ ಆರಂಭದಿಂದ ಕೊನೆಯ ದಿನದ ರ್‍ಯಾಲಿಯ ವರೆಗೂ ನಮ್ಮನ್ನು ನಿತ್ಯ ಆಕರ್ಷಿಸುತ್ತಿದ್ದದ್ದು ದಕ್ಷಿಣ ಆಫ್ರಿಕಾ ಸೇರಿದಂತೆ ಆಫ್ರಿಕನ್ ದೇಶದ ಕಪ್ಪು ಪ್ರತಿನಿಧಿಗಳ ಹಾಡು-ಕುಣಿತಗಳು ಆರಂಭದಲ್ಲಿ ಇವರು ಬರೀ ಖುಷಿ ಪಡಲು ಹಾಡುತ್ತಾ ಕುಣಿಯುತ್ತಾರೆ ಎಂದು ತಿಳಿದಿದ್ದೆವು. ಆದರೆ, ಕರಿಯ ಪ್ರತಿನಿಧಿಗಳ ಹಾಡುಗಳಲ್ಲಿ ಶೋಷಣೆಯ ವಿರುದ್ಧದ ಧ್ವನಿಗಳು ಅಡಗಿವೆ ಎಂದು ತಿಳಿಯತೊಡಗಿತು. ಗುಂಪಾಗಿ ತಮ್ಮದೇ ಶೈಲಿಯಲ್ಲಿ ಕುಣಿಯುತ್ತಾ ಹಾಡುವ ಹಾಡುಗಳು ಖನಿಜ ಸಂಪತ್ತು ರಾಷ್ಟ್ರೀಕರಣವಾಗಬೇಕು, ಉದ್ಯೋಗಗಳು ದೊರಕಬೇಕು, ಬ್ಯಾಂಕುಗಳು ಖಾಸಗೀಯವರ ಹಿಡಿತದಿಂದ ಹೊರಬರಬೇಕು, ಖಾಸಗೀಕರಣ ಕೊನೆಗೊಳ್ಳಬೇಕು, ಸಾಮ್ರಾಜ್ಯಶಾಹಿ ನೀತಿಗಳನ್ನು, ಬಹುರಾಷ್ಟ್ರೀಯ ಕಂಪೆನಿಗಳನ್ನು ಆಫ್ರಿಕನ್ ದೇಶಗಳಿಂದ ಹೊರಹಾಕಬೇಕು, ಸರ್ಕಾರ ಜನಪರ ನೀತಿಗಳನ್ನು ಕೈಗೊಳ್ಳಬೇಕು ಎಂಬ ಬೇಡಿಕೆಗಳು, ವ್ಯವಸ್ಥೆಯ ವಿರುದ್ಧದ ಆಕ್ರೋಶಗಳನ್ನು ಒಳಗೊಂಡಿರುತ್ತದೆ. ಇಂತಹ ಹಾಡುಗಳನ್ನು ಒಂದು

ಪುಟ 15ಕ್ಕೆ

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12,18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH